ಗೌರಿ ಲಂಕೇಶರ

ಲಂಕೇಶ್

ಆಗಸ್ಟ್ 15 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಉತ್ತರಹಳ್ಳಿಯಲ್ಲಿ 800 ಎಕರೆ ರೆಡ್ಡಿಗಳ ಪಾಲು!




ರಾಜಶೇಖರನ್‌ಗೆ ಗೌಡರ ಗಿಫ್ಟ್!

ಕನಕಪುರ: ಪುಂಡರ ನಾಯಕನ ಗ್ರಾಮ ವಾಸ್ತವ್ಯ

ಮಂಗಳೂರು : ಮುಂಗಾರು ಮಳೆಯೂ, ಸುಬ್ಬರಾವ್‌ನ ಕೊಲೆಯೂ

ವೇತನ ಆಯೋಗದಿಂದ ಶಿಕ್ಷಕರಿಗೆ ಅನ್ಯಾಯ



ಅಬ್ಬಾಯಿ ಸತ್ತಿದ್ದು ಏಕೆ?

ಪ್ರಧಾನಿಗಳ ಆತ್ಮಹತ್ಯೆ ಪ್ಯಾಕೇಜು !

ಭಾರತಾದ್ಯಂತ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುವುದನ್ನು ನೋಡಿ ಕಣ್ಣೀರಿಟ್ಟಿರುವ ಕೇಂದ್ರ ಸರ್ಕಾರ ರೈತರ ಅಭಿವೃದ್ಧಿ ಆಗಬೇಕೆಂದರೆ ವಿಶೇಷ ಪ್ಯಾಕೇಜನ್ನು ಘೋಷಿಸಬೇಕೆಂದು 6000 ಕೋಟಿಗೂ ಹೆಚ್ಚು ಮೊತ್ತದ ಪ್ಯಾಕೇಜನ್ನು ಘೋಷಿಸಿತಷ್ಟೆ. ತಾವು ಕೊಟ್ಟ ದುಡ್ಡು ಏನಾಯಿತೆಂದು ಅರ್ಥ ಮಾಡಿಕೊಳ್ಳಲು ಇದೀಗ ಪ್ರಧಾನಿಗಳು ಮತ್ತು ಕೃಷಿ ಮಂತ್ರಿಗಳು ದಕ್ಷಿಣ ಭಾರತ ಪ್ರವಾಸ ಮಾಡುತ್ತಿದ್ದಾರೆ. ಆದರೆ ಪ್ರಧಾನಿಯ ಪ್ಯಾಕೇಜಿನಿಂದ ರೈತರ ಆತ್ಮಹತ್ಯೆಗಳು ನಿಂತಿತೇ? ನಿಂತಿಲ್ಲವೆಂದು ಹೋದ ವರ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಸಾಬೀತುಪಡಿಸಿದ್ದಾರೆ. ಹಾಗಿದ್ದಲ್ಲಿ ರೈತರು ಆತ್ಮಹತ್ಯೆ ಏಕೆ ಮಾಡಿಕೊಳ್ಳುತ್ತಿದ್ದಾರೆ? ಪ್ಯಾಕೇಜಿನ ಪರಿಣಾಮವೇನು?

ವಾಸ್ತವ ಸಂಗತಿಯೆಂದರೆ ಪ್ರಧಾನಿಗಳಿಗಾಗಲೀ, ಮುಖ್ಯಮಂತ್ರಿಗಳಿಗಾಗಲೀ ರೈತರ ಆತ್ಮಹತ್ಯೆಗಳ ಸಮಸ್ಯೆಯ ಮೂಲಕ್ಕೆ ಹೋಗುವ ಇಚ್ಛಾಶಕ್ತಿಯೂ ಇಲ್ಲ, ಉದ್ದೇಶವೂ ಇಲ್ಲ. ಆತ್ಮಹತ್ಯೆಗಳು ಹೆಚ್ಚುವರಿ ಉತ್ಪಾದನೆಯ ಸಮಸ್ಯೆಯಲ್ಲ, ಕೇವಲ ಬೆಳೆ ಕೈಕೊಟ್ಟ ಸಮಸ್ಯೆಗಳು ಅಲ್ಲ. ಅವೆರಡು ಸಮಸ್ಯೆಗಳಿದ್ದಾವೆ. ಆದರೆ ಹೆಚ್ಚುವರಿ ಬೆಳೆ ಬೆಳೆದ ಕಬ್ಬಿನ ರೈತರೂ ಈ ಬಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಕಷ್ಟು ನೀರು ಬಂದು ಬೆಳೆ ಕೈ ಕೊಡದಿದ್ದರೂ ಆಲೂ, ಟೊಮ್ಯಾಟೊ ಬೆಳೆ ಬೆಳೆದ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದ್ದರಿಂದ ಸಮಸ್ಯೆ ಕೇವಲ ನೀರಾವರಿಯದ್ದು ಮಾತ್ರವಲ್ಲ. ಸಮಸ್ಯೆ ಬೆಳೆದ ಬೆಳೆಗೆ ಸರಿಯಾದ ದರ ಸಿಗದಿರುವುದು, ಮಾರುಕಟ್ಟೆಯದ್ದು. ಹಾಗೂ ಅದಕ್ಕೆ ಮುಂಚೆ ಬೆಳೆ ಬೆಳೆಯಬೇಕಾದ ರೈತನ ಎಲ್ಲಾ ಕೃಷೀ ಅಗತ್ಯಗಳನ್ನು ಪೂರೈಸಲು ಬೇಕಾದ ಸಾಲ ಸೌಕರ್ಯವನ್ನು ಕಡಿಮೆ ದರದಲ್ಲಿ ಪೂರೈಸಲಾಗದ ವ್ಯವಸ್ಥೆಯದು. ಹೀಗಾಗಿ ಸರ್ಕಾರ ಸಾಲ, ಸೌಕರ್ಯಗಳನ್ನು ಪೂರೈಸಲು ಏನು ಮಾಡುತ್ತಿದೆ? ಮತ್ತು ಬೆಳೆದ ಬೆಳೆಗೆ ಸರಿಯಾದ ದರ ಒದಗಿಸಲು ಏನು ಮಾಡುತ್ತಿದೆ ಎಂಬುದೇ ಮುಖ್ಯವಾದದ್ದು.

ಚಾರ್ವಾಕ

- ಶಿವಸುಂದರ್-

ಆದರೆ ಸರ್ಕಾರದ ಪ್ರಧಾನ ವೈಫಲ್ಯವಿರುವುದೇ ಈ ಕ್ಷೇತ್ರಗಳಲ್ಲಿ ಮತ್ತು ಸರ್ಕಾರ ಅದನ್ನು ತಿದ್ದುಕೊಳ್ಳುವುದಕ್ಕೆ ಯಾವ ಕ್ರಮಗಳನ್ನೂ ಅನುಸರಿಸುತ್ತಿಲ್ಲ, ಬದಲಿಗೆ ಈ ಕ್ಷೇತ್ರಗಳಲ್ಲಿ ರೈತರನ್ನು ಇನ್ನಷ್ಟು ಸಾವಿನ ದವಡೆಗೆ ತಳ್ಳುವಂತ ಕ್ರಮಗಳನ್ನೇ ಅನುಸರಿಸುತ್ತಿದೆ.

ಉದಾಹರಣೆಗೆ, ಬೆಳೆದ ಬೆಳೆಗೆ ಸರಿಯಾದ ದರಗಳನ್ನು ಒದಗಿಸುವ ಭಾಗವಾಗಿ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. ಮತ್ತು ಕೃಷಿ ಇಲಾಖೆಯಲ್ಲಿ ಅದಕ್ಕಾಗಿ ಕೃಷಿ ಉತ್ಪನ್ನಗಳ ದರವನ್ನು ನಿಗದಿ ಮಾಡಲೆಂದೇ ಒಂದು ಶಾಶ್ವತ ಆಯೋಗವೂ ಇರುತ್ತದೆ. ಆದರೆ ಬ್ಯೂರೋಕ್ರಾಟ್‌ಗಳಿಂದಲೇ ತುಂಬಿರುವ ಈ ಆಯೋಗವೂ ನಿಗದಿ ಮಾಡಿದ ದರಗಳು ರೈತರನ್ನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸುವುದರಲ್ಲಿ ಮೊದಲಿಗನಾಗಿದೆ. ಉದಾಹರಣೆಗೆ, ರಾಜ್ಯ ಸರ್ಕಾರವೊಂದು ರೈತರು ಬೆಳೆದ ಬೆಳೆಗೆ ನೀಡುತ್ತಿರುವ ಬೆಂಬಲ ಬೆಲೆಯ ಪಟ್ಟಿಯನ್ನು ನೋಡಿ:

ಬೆಳೆ	ಕ್ವಿಂಟಾಲ್ ಒಂದಕ್ಕೆ ತಗಲುವ ಖರ್ಚು ರೂ.	ಬೆಂಬಲ ಬೆಲೆ ರೂ.	ರೈತನಿಗಾಗುವ ನಷ್ಟ
ಭತ್ತ	928	700	228
ಜೋಳ	851	525	326
ತೊಗರಿ	2031	1400	631
ಹತ್ತಿ	2585	1760	839
ಗೋಧಿ	1204	640	564
ಕಬ್ಬು	1600 (ಪ್ರತಿ ಟನ್ನಿಗೆ)	1000	600

ಮೇಲಿನ ಪಟ್ಟಿ ಸ್ಪಷ್ಟವಾಗಿ ತೋರಿಸುವಂತೆ ರೈತ ಬೆಳೆಯುವ ಪ್ರತಿ ಕ್ವಿಂಟಾಲ್ ಧಾನ್ಯಕ್ಕೆ ಶೇ. 40 ರಷ್ಟು ನಷ್ಟವನ್ನು ಅನುಭವಿಸುತ್ತಾನೆ. ಹೀಗಾಗಿ ಬೆಳೆ ಹೆಚ್ಚು ಬೆಳೆದಷ್ಟು ರೈತನಿಗೆ ಲಾಭವಾಗುವ ಬದಲು ಹೆಚ್ಚೆಚ್ಚು ನಷ್ಟವೇ ಆಗುತ್ತಾ ಹೋಗುತ್ತದೆ.



ಇನ್ನು ಇಷ್ಟು ಬೆಳೆ ಬೆಳೆಯಲು ರೈತ ಮಾಡುವ ಸಾಲ. ಈವರೆಗೆ ರೈತನಿಗೆ ಸಾಲ ಬೇಕೆಂದಾಗ ಬೇಕಾದಷ್ಟು ಕೊಡುತ್ತಿರುವವರು ಖಾಸಗಿ ಲೇವಾದೇವಿಗಾರರೇ ಹೊರತು ರಾಷ್ಟ್ರೀಕೃತ ಬ್ಯಾಂಕುಗಳಲ್ಲ, ಅಥವಾ ಸಹಕಾರಿ ಬ್ಯಾಂಕುಗಳೂ ಅಲ್ಲ. ಇತ್ತೀಚೆಗೆ ರೈತರು ಮಾಡಿಕೊಂಡ ಆತ್ಮಹತ್ಯೆಗಳ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಬಂದ ವಿಷಯವೇನೆಂದರೆ ಸಹಕಾರಿ ಸಾಲಗಳು ರೈತರು ಮಾಡಿಕೊಂಡ ಸಾಲದ ಕೇವಲ ಶೇ.11 ರಷ್ಟಾಗುತ್ತದೆ ಅಷ್ಟೆ. ಮೇಲಾಗಿ ಬಡ್ಡಿ ದರದ ಇಳಿತದ ಬಗ್ಗೆ ಸರ್ಕಾರ ಉದ್ದುದ್ದ ಭಾಷಣವನ್ನು ಮಾಡುತ್ತಿದ್ದರೂ ವಾಸ್ತವವಾಗಿ ನಡೆಯುತ್ತಿರುವುದೇನೆಂದರೆ ಸಹಕಾರಿ ಬ್ಯಾಂಕುಗಳಲ್ಲಿ ಮೊದಲ ವರ್ಷದ ಬಡ್ಡಿ ದರ ಮಾತ್ರ ಶೇ.4. ಎರಡನೇ ವರ್ಷದಿಂದ ಅದು ಶೇ.12 ರಷ್ಟು. ಇನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಡ್ಡಿದರ ಕನಿಷ್ಠ ಶೇ.14ರಷ್ಟಾಗುತ್ತದೆ. ಇವೆಲ್ಲವನ್ನು ಕೂಡಿ ಹಾಕಿದರೂ ಅವು ರೈತರ ಒಟ್ಟಾರೆ ಅಗತ್ಯದ ಶೇ. 20ರಷ್ಟನ್ನೂ ಪೂರೈಸುವುದಿಲ್ಲ. ಉಳಿದಿದ್ದಕ್ಕೆ ಅವರು ಖಾಸಗಿ ಲೇವಾದೇವಿಗಾರರನ್ನೇ ಆಶ್ರಯಿಸಬೇಕು. ಅವರು ಹಾಕುವ ಬಡ್ಡಿ ದರ ಆತ್ಮಹತ್ಯೆ ಮಾಡಿಕೊಳ್ಳುವಷ್ಟೇ ಆಗುತ್ತದೆ. ಅದು ಶೇ.36 ರಿಂದ 60ರಷ್ಟು ವರ್ಷಕ್ಕೆ!

ಸರ್ಕಾರ ಈ ಕಾರಣಗಳನ್ನು ಪರಿಗಣನೆಗೇ ತೆಗೆದುಕೊಳ್ಳುವುದಿಲ್ಲ, ಆತ್ಮಹತ್ಯೆ ಮಾಡಿಕೊಂಡ ರೈತ ಸರ್ಕಾರ ನೀಡುವ ಒಂದು ಲಕ್ಷ ರೂ. ಪರಿಹಾರಕ್ಕೆ ಅರ್ಹನಾಗಬೇಕೆಂದರೆ ಅವನು ಸಹಕಾರಿ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮಾಡಿರಲೇಬೇಕು. ಮತ್ತು ಅವನ ಹೆಸರಲ್ಲಿ ಖಾತೆ ಇರಬೇಕು ಹಾಗೂ ಸಾಲ ನೀಡಿದ ಸಂಸ್ಥೆಗಳು ಅವನನ್ನು ಸಾಲ ವಾಪಸ್ ನೀಡಲು ಒತ್ತಾಯಿಸಬೇಕು. ಆದರೆ ಹಳ್ಳಿಗಾಡಿನ ವಾಸ್ತವಗಳನ್ನು ಕಿಂಚಿತ್ ಬಲ್ಲ ಯಾರಿಗಾದರೂ ಇದು ರೈತರಿಗೆ ಸಹಾಯ ಮಾಡುವುದಕ್ಕಿಂತ ಅವರಿಗೆ ಸಾಲ ಅಥವಾ ಸಹಾಯಗಳನ್ನು ನಿರಾಕರಿಸಲೆಂದೇ ರೂಪಿಸಲಾದ ಕಾನೂನೆಂಬುದು ಅರ್ಥವಾಗುತ್ತದೆ.


ನಿಜವೇನೆಂದರೆ, ಪ್ರಧಾನಿಯವರ ಪ್ಯಾಕೇಜು ಘೋಷಣೆಯಾದ ಮೇಲೆ ಮಹಾರಾಷ್ಟ್ರ ಒಂದು ರಾಜ್ಯದಲ್ಲೇ ಪರಿಹಾರ ನಿರಾಕರಿಸುವ ಪ್ರಮಾಣ ಶೇ.60 ರಿಂದ ಶೇ.87ಕ್ಕೇರಿದೆ. ಅದೇ ರೀತಿ ಈ ಸಾಲಿನಲ್ಲಿ ಮಂಡ್ಯದಲ್ಲಿ 17 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಇದೇ ಮಾನದಂಡಗಳ ಅನುಸಾರ 13 ರೈತರಿಗೆ ಪರಿಹಾರವನ್ನು ನಿರಾಕರಿಸಲಾಗಿದೆ. ಅಂದರೆ ಸರ್ಕಾರದ ನೀತಿಗಳು ಸತ್ತ ರೈತರಿಗೆ ಪರಿಹಾರ ಕೊಡುವ ಸಮಿತಿಗಳೆನ್ನುವುದಕ್ಕಿಂತ ಪರಿಹಾರ ನಿರಾಕರಿಸುವ ನೀತಿಗಳೇ ಆಗಿವೆ. ಇದು ಸಹಾ ಪ್ರಧಾನಿ ಪ್ಯಾಕೇಜಿನ ನೇರ ಪರಿಣಾಮ. ಇಷ್ಟಾದರೂ ರೈತರ ಆತ್ಮಹತ್ಯೆಗಳಾಗಲೀ, ಒಂದು ಲಕ್ಷದ ಆಸೆಗಳಿಗಾಗಿಯೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಸರ್ಕಾರಗಳ ಮತ್ತು ಸರ್ಕಾರಿ ಕೃಪಾಪೋಷಿತ ಪಂಡಿತರ ವಾದಗಳಾಗಲೀ ನಿಲ್ಲುತ್ತಿಲ್ಲ.

ಕರ್ನಾಟಕದ ಪ್ರವಾಸದಲ್ಲಿರುವ ಪ್ರಧಾನಿಗಳು ರೈತರ ಆತ್ಮಹತ್ಯೆಗಳಿಗೆ ನೇರ ಕಾರಣವಾಗಿರುವ ಈ ಅಂಶಗಳನ್ನು ನಿವಾರಿಸಲು ಯಾವ ಕ್ರಮಗಳನ್ನು ಘೋಷಿಸಿದ್ದಾರೆ? ಅವರು ಪ್ರಕಟಿಸಿರುವ 18 ಕೃಷಿ ಯೋಜನೆಗಳಲ್ಲಿ ಕೃಷಿಗೆ ಅಗತ್ಯವಿರುವ ಹಣಕಾಸನ್ನು ಸುಲಭ ದರಲ್ಲಿ ಮತ್ತು ಕಾಲಕ್ಕೆ ಸರಿಯಾಗಿ ಪೂರೈಸುವ ಯಾವ ಭರವಸೆ ಅಥವಾ ಯೋಜನೆಗಳಾಗಲೀ ಇಲ್ಲ. ಅದೇರೀತಿ ಬೆಳೆದ ಬೆಳೆಗೆ ಲಾಭದಾಯಕ ಇಲ್ಲದಿದ್ದರೆ ಹೋಗಲೀ ಅವರ ಖರ್ಚು ಕಳೆಯುವಂತ ಬೆಂಬಲ ಬೆಲೆಯನ್ನೂ ಸಹ ಘೋಷಿಸಿಲ್ಲ. ಬದಲಿಗೆ ರೈತರ ಬದುಕನ್ನು ಇನ್ನಷ್ಟು ಅತಂತ್ರ ಮಾಡುವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ ಒಪ್ಪಿಸುವ ಕಾಂಟ್ರಾಕ್ಟ್ ಫಾರ್ಮಿಂಗ್ ಮತ್ತು ರಫ್ತು ಬೆಳೆಗಳ ಉತ್ಪಾದನೆಯಂಥ ಕ್ರಮಗಳನ್ನಷ್ಟೇ ಪ್ರಧಾನಿ ಘೋಷಿಸಿದ್ದಾರೆ. ಅದೇ ಸಮಯದಲ್ಲಿ ಕೃಷಿ ಮಾರುಕಟ್ಟೆಯನ್ನು ಸಂಪೂರ್ಣವಾಗಿ ದೊಡ್ಡ ಉದ್ಯಮಿಗಳ ಮತ್ತು ವಿದೇಶಿ ಬಂಡವಾಳಿಗರ ಪಾಲು ಮಾಡುವ ಮತ್ತು ಅದರಲ್ಲಿ ರೈತರ ಹಿಡಿತವನ್ನು ಸಂಪೂರ್ಣವಾಗಿ ಇಲ್ಲವಾಗಿಸುವ ಎಪಿಎಂಸಿ ತಿದ್ದುಪಡಿ ಕಾಯಿದೆಯನ್ನು ಈಗಲೇ ತರುತ್ತಿರುವುದು ಕಾಕತಾಳೀಯವೇನಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿಕೊಂಡು ನಾಡಿನ ರೈತರಿಗೆ ದೊಡ್ಡ ಉರುಳನ್ನೇ ಸಿದ್ಧಪಡಿಸುತ್ತಿವೆ.

No Comments

"ಗ್ರಹಚಾರ ನೋಡಿ. ಹೋಮ ಹವನ ಮಾಡೋ ಬಿಜೆಪಿಯವರೇ ರೇವಣ್ಣನಿಗೆ ಶರಣಾಗುತ್ತಾರೆ. ರೇವಣ್ಣನವರು ನಿಜಕ್ಕೂ ಮಹಾಬ್ರಾಹ್ಮಣನಿರಬೇಕು."

- ಮಲ್ಲಿಕಾರ್ಜುನ ಖರ್ಗೆ




"ನಾನು ಸ್ವತಂತ್ರನಲ್ಲ, ಆದರೂ ನಾನೇ ಮುಂದಿನ ಮುಖ್ಯಮಂತ್ರಿ."

- ಯಡಿಯೂರಪ್ಪ

"ಜೆಡಿಎಸ್‌ನವರು ನಿಮಗೆ ಅಧಿಕಾರ ಹಸ್ತಾಂತರ ಮಾಡದಿದ್ದರೆ ಹೆದರಬೇಡಿ. ಜನ ರೊಚ್ಚಿಗೇಳುತ್ತಾರೆ."

- ಪಿಜಿಆರ್ ಸಿಂಧ್ಯಾ



"ದತ್ ಬಗ್ಗೆ ಯಾರ ಹೃದಯದಲ್ಲಾದರೂ ಕರುಣೆ ಉಕ್ಕಲಿಲ್ಲವೆಂದರೆ ಅವರು ಹೃದಯ ತಪಾಸಣೆ ಮಾಡಿಸ್ಕೊಳ್ಳುವುದು ಒಳ್ಳೆಯದು."

- ಪ್ರಿಯರಂಜನ್ ದಾಸ್ ಮುನ್ಷಿ

"ಹರದನಹಳ್ಳಿಯನ್ನು ಮಾದರಿ ಗ್ರಾಮ ಮಾಡಲು ಹೊರಟಿದ್ದೀರಲ್ಲಾ, ಅದೇನು ಹಿಸ್ಟಾರಿಕಲ್ ಪ್ಲೇಸಾ?"

- ಸಿದ್ದರಾಮಯ್ಯ



"ಯಡಿಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಖಚಿತ. ಆದರೆ ಅದರಲ್ಲಿ ಅವರು ಎಷ್ಟು ದಿನ ಕೂರುತ್ತಾರೆಂಬುದು ಗೊತ್ತಿಲ್ಲ."

- ಹೆಚ್. ಡಿ. ಕುಮಾರಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಬಿಜೆಪಿಯಲ್ಲಿ ಮಹಿಳೆಯರ ಗೌರವಕ್ಕೆ ಎಂದೂ ಕುಂದು ಬಂದಿಲ್ಲ."

-ಭಾರತಿ ಶೆಟ್ಟಿ, ಮಹಿಳಾ ಮೋರ್ಛಾದ ರಾಜ್ಯಾಧ್ಯಕ್ಷೆ



"ನನಗೆ ಅವಾರ್ಡ್ ಬಂದಿದೆ ಎಂದು ಯಾರಾದರೂ ಜ್ಞಾಪಿಸಬೇಕು. ಇಲ್ಲಾಂದ್ರೆ ನನಗೆ ಮರೆತೇ ಹೋಗುತ್ತೆ."


- ತಾರಾ

"ನಾಗರಾಜ್ ಶೆಟ್ಟಿ ರಾಜೀನಾಮೆಗೆ ಪ್ರಮೋದ್ ಮುತಾಲಿಕ್ ಆಗ್ರಹ."

- ಪತ್ರಿಕಾ ವರದಿ

"ಲಿಂಗಾಯತರು ಬ್ರಾಹ್ಮಣರಿಂದ ಸಹನೆಯನ್ನು ಕಲಿಯಬೇಕು. ನಾವು ಇಷ್ಟು ವರ್ಷಗಳಿಂದ ಬ್ರಾಹ್ಮಣರನ್ನು ದೂರುತ್ತಾ ಬಂದಿದ್ದರೂ ಅವರು ಲಿಂಗಾಯತರಂತೆ ಆಡಲಿಲ್ಲ."

- ಕೆ. ಬಿ. ಸಿದ್ದಯ್ಯ



"ರೈತರ ಸಹಕಾರಿ ಸಾಲದ ಜೊತೆಗೆ ಕೈ ಸಾಲವನ್ನೂ ಮನ್ನಾ ಮಾಡಲು ಚಿಂತಿಸಲಾಗುತ್ತಿದೆ."

- ಜಿ. ಟಿ. ದೇವೇಗೌಡ, ಸಹಕಾರಿ ಸಚಿವ

"ನನ್ನ ಸ್ವಾರ್ಥಕ್ಕೆಂದು ರಾಜೀವ್ ಗಾಂಧಿ ವಿವಿಯನ್ನು ರಾಮನಗರಕ್ಕೆ ಸ್ಥಳಾಂತರಿಸಲಿಲ್ಲ, ಇಡೀ ರಾಜ್ಯಕ್ಕೆ ಅನುಕೂಲವಾಗಲೆಂದು ಅದನ್ನು ಸ್ಥಳಾಂತರ ಮಾಡಲಾಯಿತು."

- ಹೆಚ್.ಡಿ.ಕುಮಾರಸ್ವಾಮಿ

ಇದನ್ನು ನೋಡಲು ಸಾಧ್ಯವೇ?

'ಅಂಕುಶ್' ಚಿತ್ರದ ಜಾಹೀರಾತು: "one location, one bungalow, one angle, one camera, one day story..."

ವಸತಿ ಮತ್ತಿ ನಿರ್ವಸತಿ

"ಮುಖ್ಯಮಂತ್ರಿ ಬರೋ ಹೊತ್ನಾಗ ಮನಿ ಬಿಟ್ಟು ಕೊಡ್ತೀನಿ. ನನ್ ಮನ್ಯಾಗ ನನ್ಗೆ ವಾಸ ಮಾಡೋಕೆ ಅವಕಾಶ ಮಾಡ್ಕೊಡಿ."

- ಮುಖ್ಯಮಂತ್ರಿ ವಾಸ್ತವ್ಯಕ್ಕೆ ಮನೆ ಕೊಟ್ಟು ನಿರಾಶ್ರಿತನಾದ ಸಿಂಧನೂರಿನ ಯಲ್ಲಪ್ಪ

ಎಲ್ಲರೂ ಜಿಗಣೆಗಳೇ



"ಅಲ್‌ಖೈದಾ ವಿರುದ್ಧದ ಕಾರ್ಯಾಚರಣೆಗೆ ಪಾಕಿಸ್ತಾನ ಅನುಮತಿ ನೀಡದಿದ್ದರೂ ಆ ರಾಷ್ಟ್ರಕ್ಕೆ ಸೈನ್ಯ ಕಳಿಸಲು ನಾವು ಸಿದ್ಧರಿದ್ದೇವೆ."


- ಒಬಾಮ, ಅಮೆರಿಕ ಅಧ್ಯಕ್ಷ ಪದವಿಯ ಆಕಾಂಕ್ಷಿ

ಅರಳು-ಮರಳು

"ಮಿಶಲೆಯವರ ದೃಷ್ಟಿಯಲ್ಲಿ ಭೈರಪ್ಪನವರದು ರಾಷ್ಟ್ರೀಯ ಐಕ್ಯತೆಗೂ, ಅನಂತಮೂರ್ತಿಯವರದ್ದು ಸಂಯುಕ್ತತೆಗೂ ಹತ್ತಿರವಾಗಿದೆ."

- ಕೆ.ವಿ. ತಿರುಮಲೇಶ್

ಇದರರ್ಥವೇನು ಕಾಮ್ರೇಡ್ಸ್!?




"ಎಡಪಕ್ಷಗಳು ನಮ್ಮ ಒಳ್ಳೆಯ ಸ್ನೇಹಿತರು. ಅವರು ಬಡವರಿಗೆ ಮನೆಗಾಗಿ ಸೈಟು ಕೊಡಿ ಅಂತಾರೆ. ನಾವು ಸೈಟು ಏಕೆ? ಮನೆಯನ್ನೇ ಕೊಡುತ್ತೇವೆ ಎನ್ನುತ್ತೇವೆ. ಅವರು ಅದನ್ನು ತ್ವರಿತವಾಗಿ ಮಾಡಿ ಎಂದು ಹೋರಾಡುತ್ತಿದ್ದಾರೆ.

ಮುದಿಗೊಂಡ ಗೋಲಿಬಾರ್ ವಿಷಯ...

ಎಲ್ಲಾ ಗೋಲಿಬಾರ್‌ಗಳು ವಿಷಾದಕರವೇ. ಬಷೀರ್ ಬಾಗ್, ಸಿಂಗೂರ್, ನಂದಿಗ್ರಾಮ ಎಲ್ಲಾ ಗೋಲಿಬಾರ್‌ಗಳಲ್ಲೂ ಸಫರ್ ಆಗುವವರು ಬಡವರೇ. ಇನ್ನು ಎಡ ಪಕ್ಷಗಳು ನನ್ನ ರಾಜೀನಾಮೆ ಕೇಳುತ್ತಿರುವ ವಿಷಯ..ಅದೊಂದು ಫೂಲಿಶ್ ಡಿಮ್ಯಾಂಡ್ ಅಷ್ಟೆ!"

- ರಾಜಶೇಖರ್ ರೆಡ್ಡಿ ಆಂಧ್ರದ ಮುಖ್ಯಮಂತ್ರಿ, ಮುದಿಗೊಂಡ ಗೋಲಿಬಾರ್‌ನಲ್ಲಿ ಎಂಟು ಜನ ಸಿಪಿಎಂ ಕಾರ್ಯಕರ್ತರನ್ನು ಸಾಯಿಸಿದ ನಂತರ

ವಾರದ ಅವಿವೇಕ



"ಶಬರಿಮಲೈ ಅಯ್ಯಪ್ಪ ದೇವಸ್ಥಾನಕ್ಕೆ ಮಹಿಳೆಯರಿಗೆ ಪ್ರವೇಶ ಕೊಡುವುದನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ ಮಹಿಳೆಯರು ದೇವಸ್ಥಾನಕ್ಕೆ ಬಂದರೆ ಅಕ್ರಮ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಏಕೆಂದರೆ 41 ದಿನಗಳ ಕಾಲ ಪುರುಷರು ಕಡು ಸಂಯಮವನ್ನು ಪಾಲಿಸಿರುತ್ತಾರೆ. ಆಗ ಅವರ ಕಣ್ಣಿಗೆ ಮಹಿಳೆಯರು ಬಿದ್ದರೆ ಅವರ ಸಂಯಮಕ್ಕೆ ಭಂಗ ಬರುತ್ತದೆ."

- ಅಯ್ಯಪ್ಪ ವಿಶ್ವಸ್ಥ ಮಂಡಳಿಯ ಅಧ್ಯಕ್ಷ

ವಾರದ ಘೋಷಣೆ



"ಖಚಿತ ಪರಿಹಾರವಿಲ್ಲದ ಶಾಂತಿ ಮಾತುಕತೆ ಮುಂದುವರಿಕೆ ಬೇಡ", "ಹತ್ತು ವರ್ಷದ ನಿರರ್ಥಕ ಮಾತುಕತೆ ಸಾಕು", "ನಮ್ಮ ತಾಳ್ಮೆಯನ್ನು ಪರೀಕ್ಷಿಸಬೇಡಿ...."

- ಎನ್‌ಎಸ್‌ಸಿಎನ್ (ನಾಗಾ ವಿಮೋಚನಾವಾದಿಗಳು) ಮತ್ತು ಭಾರತ ಸರ್ಕಾರದ ನಡುವೆ ದೀಮಾಪುರ್‌ನಲ್ಲಿ ಇತ್ತೀಚೆಗೆ ಮಾತುಕತೆ ನಡೆದಾಗ ನಾಗಾ ಜನತೆ ಹಾಕಿದ ಘೋಷಣೆ.

ಜಾಗತಿಕ ತಾಪಮಾನ ಏರುತ್ತಿರುವ ಸಂದರ್ಭದಲ್ಲಿ ಪರಿಸರ ರಕ್ಷಣೆ ಕುರಿತ ಹೇಳಿಕೆಗಳನ್ನು ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ.

ಮಿತ್ರನ ಸಾವು ಮತ್ತು ಪುಟ್ಟ ಸೋದರಿಯ ಅಕ್ಕರೆ

ನಾನು ಎಂದೂ ಅವರನ್ನು ಮುಖತಃ ಭೇಟಿ ಆಗಿರಲಿಲ್ಲ. ಆದರೆ ಅಪ್ಪನ ಅಭಿಮಾನಿಯಾಗಿದ್ದ ನಮ್ಮೆಲ್ಲರ ಹೋರಾಟಗಳಲ್ಲಿ ಸಂಗಾತಿಯಾಗಿದ್ದ, 'ಲಂಕೇಶ್' ವಾರ ಪತ್ರಿಕೆಯ ಮಿತ್ರರಾಗಿದ್ದ, ನನ್ನ ಪರವಾಗಿ ನಿಂತ ಬಾಂಧವ ರಾಗಿದ್ದ ಸ್ನೇಹಿತರೊಬ್ಬರು ಮೊನ್ನೆ ಅಕಾಲಿಕವಾಗಿ ತಮ್ಮ 47ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಅಸುನೀಗಿದ್ದಾರೆ. ಅವರು ಬಳ್ಳಾರಿಯ ವಕೀಲ ಮತ್ತು ಪತ್ರಕರ್ತ ವಿರುಪಾಕ್ಷ ನಾಯಕ್.

ವಿರುಪಾಕ್ಷ ನಾಯಕ್‌ರವರು ನನಗೆ ಪರಿಚಯವಾಗಿದ್ದೇ ಆಕಸ್ಮಿಕ. ಅದು 2004ರ ನವೆಂಬರ್. ಅದೇ ತಿಂಗಳ 13ನೇ ತಾರೀಖಿನ ಮುಂಜಾನೆ ಹೊಸಪೇಟೆಯ ಬಸ್ ನಿಲ್ದಾಣದಿಂದ ಸಿಪಿಐ (ಮಾವೋವಾದಿ) ಪಕ್ಷದ ರಾಜ್ಯ ಸಮಿತಿಯ ಸದಸ್ಯ ಉಜ್ಜನಿ ಗೌಡನನ್ನು ಪೊಲೀಸರು ಬಂಧಿಸಿದ್ದರು. ಸುಮಾರು 7.30ಕ್ಕೆ ಅನಾಮಿಕ ಕರೆಯೊಂದು ಈ ವಿಷಯವನ್ನು ನನಗೆ ತಿಳಿಸಿದಾಗ, ಕೂಡಲೇ ಅಂದಿನ ಮುಖ್ಯಮಂತ್ರಿ ಧರಂಸಿಂಗ್‌ರವರಿಗೆ ಫೋನ್ ಮಾಡಿದೆ. ಆಗ ಅವರು ದೆಹಲಿಗೆ ಹೋಗಲು ವಿಮಾನ ನಿಲ್ದಾಣದಲ್ಲಿದ್ದರು. "ಉಜ್ಜನಿ ಗೌಡ ಎಂಬುವವರನ್ನು ಬಳ್ಳಾರಿಯ ಪೊಲೀಸರು ಬಂಧಿಸಿದ್ದಾರಂತೆ. ಅವರ ವಿರುದ್ಧ ಕಾನೂನಿನ ಪ್ರಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಿ. ಆದರೆ ಯಾವುದೇ ಕಾರಣಕ್ಕೂ ಆತನನ್ನು ನಕಲಿ ಎನ್‌ಕೌಂಟರ್ ನೆಪದಲ್ಲಿ ಪೊಲೀಸರು ಮುಗಿಸಬಾರದು" ಎಂದು ಕೇಳಿದ್ದೆ. "ಅರೆಸ್ಟ್ ಮಾಡಿರುವ ವಿಷಯ ನನಗೂ ಗೊತ್ತಾಯಿತು. ದೆಹಲಿ ತಲುಪಿದ ನಂತರ ಪೊಲೀಸ್‌ರೊಂದಿಗೆ ವಿಚಾರಿಸಿ ಹೇಳುತ್ತೇನೆ" ಎಂದು ಉತ್ತರಿಸಿದ ಧರಂಸಿಂಗ್‌ರವರು ಅದಾದ ಮೂರು ಗಂಟೆಗಳ ಕಾಲ ಸಹಜವಾಗಿಯೇ ಫೋನ್ ಸಂಪರ್ಕಕ್ಕೆ ಸಿಗದಂತಾದರು.


ವಿರುಪಾಕ್ಷ ನಾಯಕ್

ಹೇಗಿದ್ದರೂ ಮುಖ್ಯಮಂತ್ರಿಯವರೇ ಉಜ್ಜನಿ ಗೌಡನನ್ನು ಪೊಲೀಸರು ಬಂಧಿಸಿದ್ದ ವಿಷಯವನ್ನು ದೃಢಪಡಿಸಿದ್ದರಾದ್ದರಿಂದ ಆತನನ್ನು ಪೊಲೀಸರು ಎಲ್ಲಿಗೆ ಕರೆದುಕೊಂಡು ಹೋಗಿದ್ದಾರೆ ಎಂದು ಪತ್ತೆ ಹಚ್ಚಲು ಶುರುಮಾಡಿದೆವು. ಆದರೆ ಉಜ್ಜನಿ ಗೌಡನನ್ನು ಅರೆಸ್ಟ್ ಮಾಡಿದ್ದ ಹೊಸಪೇಟೆಯ ಪೊಲೀಸ್ ಠಾಣೆಯಿಂದ ಹಿಡಿದು, ಬಳ್ಳಾರಿಯ ಎಸ್ಪಿ ಆಫೀಸನ್ನು ದಾಟಿ, ರಾಜ್ಯದ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳೂ ಸೇರಿದಂತೆ, ಸ್ವತಃ ಧರಂಸಿಂಗ್‌ರವರ ಕಚೇರಿ ತನಕ ಅಂತಹದ್ದೊಂದು ಬಂಧನ ನಡೆದೇ ಇಲ್ಲವೆಂದೂ, ಅದೆಲ್ಲ ಕಪೋಲಕಲ್ಪಿತ ವರದಿ ಎಂದೂ ವಾದಿಸಲಾರಂಭಿಸಿದರು. ಆದರೆ ನಾನು ನನ್ನ ಪಟ್ಟುಬಿಡಲಿಲ್ಲ. ಅವತ್ತಿನಿಂದ ಇವತ್ತಿನವರೆಗೂ ಹೇಳುತ್ತಿರುವುದನ್ನೇ ಅಂದೂ ಹೇಳಿದ್ದೆ. ಉಜ್ಜನಿಗೌಡ ಈ ದೇಶದ ಕಾನೂನುಗಳನ್ನು ಉಲ್ಲಂಘಿಸಿದ್ದರೆ ಆತನ ಮೇಲೆ ಕೇಸುಗಳನ್ನು ದಾಖಲಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ; ನ್ಯಾಯಾಲಯ ಆತನಿಗೆ ಶಿಕ್ಷೆ ನೀಡಲಿ; ಆದರೆ ಪೊಲೀಸರೇ ಕಾನೂನನ್ನು ತಮ್ಮ ಕೈಗೆತ್ತಿಕೊಂಡು ಆತನನ್ನು ಕೊಲ್ಲಕೂಡದು ಎಂಬುದೇ ನನ್ನ ನಿಲುವು. ಈ ನಿಲುವಿಗೆ ಅಂದು ಮುಖ್ಯಮಂತ್ರಿಗಳ ಕಚೇರಿಯಿಂದ ಬಂದ ಉತ್ತರ ಯಾವುದು ಗೊತ್ತಾ? "ಕರ್ನಾಟಕದ ಪೊಲೀಸರು ಆತನನ್ನು ಬಂಧಿಸಿಲ್ಲ. ನೆರೆಯ ಆಂಧ್ರದ ಪೊಲೀಸರು ಅರೆಸ್ಟ್ ಮಾಡಿರಬಹುದು" ಎಂದು. ಅದೆಂತಹ ಜೋಕ್ ಆಗಿತ್ತೆಂದರೆ ಉಜ್ಜನಿಗೌಡನನ್ನು ಕರ್ನಾಟಕದ ಪೊಲೀಸರು ಬಂಧಿಸಿದ್ದರೂ ಅದನ್ನು ಆಂಧ್ರದ ಪೊಲೀಸರ ಮೇಲೆ ಹಾಕುತ್ತಿರುವಾಗಲೇ ಆಂಧ್ರದ ನಕ್ಸಲರ ನಾಯಕರು ಅಲ್ಲಿನ ಸರ್ಕಾರದೊಂದಿಗೆ ಚರ್ಚೆ ನಡೆಸುತ್ತಿದ್ದರು! ಇದರ ಬಗ್ಗೆ ಮುಖ್ಯಮಂತ್ರಿಗಳ ಕಚೇರಿಗೆ ತಿಳಿಸಿ, "ಧರಂಸಿಂಗ್‌ರವರೇ ಇಂತಹದ್ದೊಂದು ಬಂಧನ ಆಗಿರುವುದನ್ನು ಖಚಿತಪಡಿಸಿದ್ದಾರೆ. ಇವತ್ತೇ ಆತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ" ಎಂದೆ.

ಪೊಲೀಸರು ಇದ್ಯಾವುದರ ಬಗ್ಗೆಯೂ ಕ್ಯಾರೆ ಅನ್ನಲಿಲ್ಲ. ಬದಲಾಗಿ ಉಜ್ಜನಿ ಗೌಡನನ್ನು ನಿಗೂಢ ಸ್ಥಳದಲ್ಲಿ ಬಂಧಿಸಿ ಚಿತ್ರಹಿಂಸೆ ನೀಡಿದರು. ಹಾಗೆ ಹಿಂಸೆ ನೀಡುವ ಸಂದರ್ಭದಲ್ಲಿ ಸ್ಥಳೀಯ ಪೊಲೀಸರು ತಮಗೆ ಸಾಕುಸಾಕೆನಿಸುವಷ್ಟು ಮದ್ಯವನ್ನೂ, ಚಿಕನ್ ಕಬಾಬ್, ಮಟನ್ ಬಿರಿಯಾನಿಯನ್ನೂ ಸೇವಿಸಿದರು.

ಅಷ್ಟೊತ್ತಿಗಾಗಲೇ ಮಾಧ್ಯಮಗಳ ಗಮನಕ್ಕೂ ಉಜ್ಜನಿಗೌಡನ ಬಂಧನದ ವಿಷಯ ಬಂದಿತ್ತು. ಆಗ ಆತನನ್ನು ಬೇರೆಡೆ 'ಸ್ಥಳಾಂತರಿಸುವ' ಕಾರ್ಯಕ್ಕೆ ಪೊಲೀಸರು ಮುಂದಾದರು.

ಉಜ್ಜನಿಗೌಡನ ಅದೃಷ್ಟವೋ, ಪೊಲೀಸ್ ಇಲಾಖೆಯ ದುರಾದೃಷ್ಟವೋ; ಹೀಗೆ ಆತನನ್ನು ಸ್ಥಳಾಂತರಿಸುತ್ತಿದ್ದಾಗ ಬಳ್ಳಾರಿಯ ಗಣಿ ಮಾಲೀಕನೊಬ್ಬನ ಜೀಪು ಎದುರಾಗಿದೆ. ಉಜ್ಜನಿ ಗೌಡನನ್ನು ಕರೆದುಕೊಂಡು ಹೋಗುತ್ತಿದ್ದ ಪೊಲೀಸರು ಮಫ್ತಿಯಲ್ಲಿದ್ದ ಕಾರಣ ಅವರು ಸಾರ್ವಜನಿಕರೆಂದು ಭಾವಿಸಿದ ಗಣಿ ಮಾಲೀಕ ವಾಹನವನ್ನು ಹಿಂದೆ ಸರಿಸುವಂತೆ ದಬಾಯಿಸಿದ್ದಾನೆ. ಗಣಿ ಮಾಲೀಕನ ದೌಲತ್ತನ್ನು ನೋಡಿ ಪೊಲೀಸ್ ಅಧಿಕಾರಿಯೊಬ್ಬ ಕೆರಳಿದ್ದಾನೆ. ರಾತ್ರಿಯೆಲ್ಲ ಉಜ್ಜನಿ ಗೌಡನಿಗೆ ಚಿತ್ರಹಿಂಸೆ ನೀಡುತ್ತಿದ್ದಾಗ ಆ ಪೊಲೀಸ್ ಅಧಿಕಾರಿ ಏರಿಸಿದ್ದ ಗುಂಡಿನ ಗಮ್ಮತ್ತು ಇನ್ನೂ ಇಳಿದಿರಲಿಲ್ಲ. ಆದ್ದರಿಂದ ಆತ ವಾಹನದಿಂದ ಇಳಿದು ಗಣಿ ಮಾಲೀಕನ ಜೀಪಿನತ್ತ ಗುಂಡು ಹಾರಿಸಿದ. ಅವನ ಅದೃಷ್ಟ- ಆ ಗುಂಡು ಗಣಿ ಮಾಲೀಕನ ಮಗನ ಕಿವಿಯನ್ನು ಸವರಿ ಕೊಂಡು ಹೋಯಿತು.

ಗಣಿ ಮಾಲೀಕ ಹೌಹಾರಿದ. ಗುಂಡಿನ ಮತ್ತಿನಲ್ಲಿ ಗುಂಡು ಹಾರಿಸಿದವನೂ ಪೊಲೀಸ್ ಅಧಿಕಾರಿ ಎಂದು ಗೊತ್ತಾಗದೇ ಪೊಲೀಸರಲ್ಲಿ ದೂರು ದಾಖಲಿಸುವುದಾಗಿ ಬೆದರಿಸಿದ. ಈ ಪ್ರಕರಣದ ಸುದ್ದಿ ಬಳ್ಳಾರಿಯ ಮಾಧ್ಯಮದವರಿಗೆ ಗೊತ್ತಾಗಿ ಅವರೆಲ್ಲ ಪ್ರಶ್ನಿಸಲಾರಂಭಿಸಿದರು. ಉಜ್ಜನಿಗೌಡನನ್ನು ಯಾವ ಕಾರಣಕ್ಕೆ ಬಳ್ಳಾರಿಯಿಂದ ಪೊಲೀಸರು ಕರೆದೊಯ್ಯುತ್ತಿದ್ದರೋ ಅವರಿಗೇ ಗೊತ್ತು. ಆದರೆ ಕುಡಿದ ಅಮಲಿನಲ್ಲಿ ಪೊಲೀಸ್ ಅಧಿಕಾರಿಯೊಬ್ಬ ಅಲ್ಲಿನ ಪ್ರಭಾವಿ ಗಣಿ ಮಾಲೀಕನ ಮಗನ ಮೇಲೆ ಗುಂಡು ಹಾರಿಸಿದ್ದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಆದರೆ ಗಣಿ ಮಾಲೀಕ ಮತ್ತು ಪೊಲೀಸರ ನಡುವೆ ಒಪ್ಪಂದ ಆಯಿತು. ಗುಂಡು ಹಾರಿಸಿದ್ದ ಪೊಲೀಸ್ ಅಧಿಕಾರಿ ತನ್ನ ಆರೋಗ್ಯ ಸರಿ ಇಲ್ಲ ಎಂದು ನೆಪವೊಡ್ಡಿ (ರಾತ್ರಿಯಿಡೀ ಆತ ಕುಡಿದಿದ್ದರಿಂದ ಆರೋಗ್ಯ ಕೆಟ್ಟಿರಲೂ ಬಹುದು!) ಆಸ್ಪತ್ರೆಗೆ ದಾಖಲಾದ. ಮಾಧ್ಯಮದವರ ಪ್ರಶ್ನೆಗಳು ತೀಕ್ಷ್ಣವಾಗಲಾರಂಭಿಸಿದವು.

ಆಗ ಮಾತ್ರವೇ ಉಜ್ಜನಿಗೌಡನನ್ನು ಬಂಧಿಸಿರುವುದಾಗಿ (ಸುಮಾರು 36 ಗಂಟೆಗಳ ನಂತರ) ನಮ್ಮ ರಾಜ್ಯದ ಪೊಲೀಸರು ಒಪ್ಪಿಕೊಂಡರು! ಮಾರನೆ ದಿನ ಅಂದರೆ ನವೆಂಬರ್ 15ರಂದು ಉಜ್ಜನಿಗೌಡನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಆತನಿಗೆ ಪೊಲೀಸರು ನೀಡಿದ್ದ ಚಿತ್ರಹಿಂಸೆ ಮಾಧ್ಯಮದವರಿಗೂ, ಟಿವಿ ಚಾನೆಲ್‌ಗಳು ಬಿತ್ತರಿಸಿದ ಚಿತ್ರಗಳ ಮೂಲಕ ಸಾರ್ವಜನಿಕರಿಗೂ ಗೊತ್ತಾಯಿತು.

ಹೀಗೆ ಉಜ್ಜನಿಗೌಡನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಪರಿಚಯವಾಗಿದ್ದೇ ವಿರುಪಾಕ್ಷ ನಾಯಕ್. ಅಷ್ಟೊತ್ತಿಗಾಗಲೇ ಉಜ್ಜನಿಗೌಡನ ಪ್ರಕರಣದ ಬಗ್ಗೆ ತಿಳಿದಿದ್ದ ವಿರುಪಾಕ್ಷರವರು ಬಳ್ಳಾರಿಯಿಂದ ಹೊಸಪೇಟೆಗೆ ಧಾವಿಸಿ ಉಜ್ಜನಿಗೌಡನ ಪರವಾಗಿ ಸ್ವಯಂಪ್ರೇರಿತವಾಗಿ ವಕಾಲತ್ತನ್ನು ವಹಿಸಿದ್ದರು.

ಆನಂತರ ಯಾರಿಂದಲೋ ನನ್ನ ನಂಬರ್ ಪಡೆದು ಫೋನ್ ಮಾಡಿದರು. "ನಾನು ಲಂಕೇಶರ ಅಭಿಮಾನಿ. ಅವರ ಬರಹಗಳಿಂದಲೇ ಪ್ರೇರೇಪಿತನಾಗಿರುವವನು. ಎಡ ಸಿದ್ಧಾಂತದೊಂದಿಗೆ ಬೆಳೆದವನು. ಯಾರು ಹೇಳದಿದ್ದರೂ ನಾನೇ ಉಜ್ಜನಿಗೌಡರ ಪರವಾಗಿ ನ್ಯಾಯಾಲಯ ಮುಂದೆ ಹಾಜರಾಗಿದ್ದೇನೆ. ನಿಮ್ಮ ಹೋರಾಟಗಳೊಂದಿಗೆ ನಾನಿದ್ದೇನೆ" ಎಂದಿದ್ದರು.

ಅದಾದನಂತರ ಫೋನ್ ಮತ್ತು ಪತ್ರಿಕೆಯ ಮೂಲಕ ನಮ್ಮಿಬ್ಬರ ಸಂಪರ್ಕ ಮುಂದುವರೆದಿತ್ತು. ಪತ್ರಿಕೆ ಇಬ್ಭಾಗವಾಗಿ, 'ಲಂಕೇಶ್' ಮರುಜನ್ಮ ಪಡೆದಾಗ ವಿರುಪಾಕ್ಷ ನಾಯಕರು ನನ್ನೊಂದಿಗೆ ನಿಂತಿದ್ದರು. ಅಷ್ಟೇ ಅಲ್ಲದೆ ತಮ್ಮ ಪತ್ರಿಕೆಯಲ್ಲಿ ನನ್ನ ಮತ್ತು 'ಲಂಕೇಶ್' ಬಗ್ಗೆ ಬರೆದು ಪ್ರೋತ್ಸಾಹಿಸಿದ್ದರು ಮತ್ತು ಪ್ರಚಾರ ನೀಡಿದ್ದರು.

ವಕೀಲರಾಗಿ ಮತ್ತು ಪತ್ರಕರ್ತರಾಗಿ ಜನಪರವಾಗಿದ್ದ, ಅಸಹಾಯಕರ ನೆರವಿಗೆ ಧಾವಿಸುತ್ತಿದ್ದ ಅನ್ಯಾಯದ ವಿರುದ್ಧ ದನಿ ಎತ್ತುತ್ತಿದ್ದ ವಿರುಪಾಕ್ಷ ನಾಯಕರ ಅಗಲಿಕೆ ಒಂದು ದೊಡ್ಡ ನಷ್ಟ. ಪ್ರಸ್ತುತ ಪರಿಸ್ಥಿತಿಯಲ್ಲಿ ವಕೀಲರಲ್ಲಿ, ಪತ್ರಕರ್ತರಲ್ಲಿ, ಪ್ರಾಧ್ಯಾಪಕರಲ್ಲಿ, ಇನ್ನೂ ಬಹಳಷ್ಟು ವಲಯಗಳಲ್ಲಿ ಪ್ರಗತಿಪರ ಮತ್ತು ಜನಪರ ಧೋರಣೆಗಳನ್ನು ಹೊಂದಿರುವವರೇ ಕಡಿಮೆಯಾಗುತ್ತಿರುವಾಗ ವಿರುಪಾಕ್ಷ ನಾಯಕ್‌ರಂಥವರ ನಿಧನ ಆ ಕೊರತೆಯನ್ನು ಹೆಚ್ಚಿಸಿದೆ.....

* * * * * * *

ಮೊನ್ನೆ ಇಟಲಿಯಿಂದ ಪತ್ರ ಬರೆದ ಹುಡುಗಿಯೊಬ್ಬಳು ನನಗೆ ಮೆಡಿಟರೇನಿಯನ್ ಸಮುದ್ರದಷ್ಟು ಪ್ರೀತಿ ಎರೆದಿದ್ದಾಳೆ. ಇಲ್ಲೇ ಬೆಂಗಳೂರಿನಲ್ಲಿರುವ ಅವಳ ತಮ್ಮ ನನಗೆ ಅರಬ್ಬೀ ಸಮುದ್ರದಷ್ಟು ಪ್ರೀತಿ ತೋರಿಸುತ್ತಿರುತ್ತಾನೆ!



ಹೀಗೆ ನನಗೆ ಸಾಗರಗಳಷ್ಟು ಅಕ್ಕರೆ ತೋರಿಸುವ ಅಕ್ಕ-ತಮ್ಮ ಬೇರಾರೂ ಅಲ್ಲ, ನಮ್ಮ ರೈತನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ಮಕ್ಕಳಾದ ಚುಕ್ಕಿ ಮತ್ತು ಪಚ್ಚೆ! ಈ ಮಕ್ಕಳಿಬ್ಬರ ಬಗ್ಗೆ ನನ್ನಲ್ಲಿ ಎವರೆಸ್ಟ್‌ನಷ್ಟು ವಾತ್ಸಲ್ಯ ಎಂದರೆ ತಮಾಷೆಯಾಗಿ ಕೇಳಿಸಬಹುದು!

ಇವರಿಬ್ಬರಲ್ಲಿ ನನಗೆ ಮೊದಲು ಹತ್ತಿರವಾದದ್ದು ಪಚ್ಚೆ, ತನ್ನೊಳಗಿದ್ದ ಸೂಕ್ಷ್ಮತೆ, ಗೊಂದಲಗಳು, ಬದುಕಿನ ಬಗೆಗಿನ ಹುಡುಕಾಟ, ಬೇಸರ, ಚಡಪಡಿಕೆ ಇವೆಲ್ಲವುಗಳನ್ನು ತನಗೇ ಅರಿವಿಲ್ಲದಂತೆ ನನ್ನ ಮುಂದೆ ತೆರೆದಿಟ್ಟಾಗ ಅವನಲ್ಲಿನ ಈ ಗೊಂದಲವನ್ನೇ ಬಹಳಷ್ಟು ಜನ 'ಉದ್ಧಟತನ' ಎಂದು ಭಾವಿಸಿದ್ದರು ಎಂದು ಅರಿವಾಯಿತು.

ಹೀಗೆ ಪಚ್ಚೆ ನನಗೆ ಹತ್ತಿರವಾದದ್ದನ್ನು ಕಂಡು ಅಚ್ಚರಿಗೊಂಡಿದ್ದು ಚುಕ್ಕಿ. "ಗೌರಿ ಅಕ್ಕ ಹೇಳಿದರೆ ಸಾಕು ಪಚ್ಚೆಗೆ" ಎನ್ನುತ್ತಿದ್ದ ಚುಕ್ಕಿ, ಅದ್ವೇಗೆ ಪಚ್ಚೆ ನನ್ನನ್ನು ಹಚ್ಚಿಕೊಂಡಿದ್ದಾನೆ ಎಂದು ಅರಿಯುತ್ತಲೇ ನನಗೂ ಹತ್ತಿರವಾದಳು. ಹಲವು ಸಮಸ್ಯೆಗಳು ಎದುರಾದಾಗ ನನಗೆ ಫೋನ್ ಮಾಡುವ ಇವರಿಬ್ಬರು, ಇತ್ತೀಚೆಗೆ ಮಧ್ಯರಾತ್ರಿ ಅಸಿಡಿಟಿ ಅಟ್ಯಾಕ್ ಆಗಿ ನಾನೊಬ್ಬಳೇ ಕಾರ್ ಡ್ರೈವ್ ಮಾಡಿಕೊಂಡು ಆಸ್ಪತ್ರೆ ಸೇರಿದ್ದರ ಬಗ್ಗೆ, ನನ್ನ ಮನೆಯ ಹತ್ತಿರವೇ ಇರುವ ಅವರನ್ನು ಕರೆಯದಿದ್ದರ ಬಗ್ಗೆ ಬೇಸರಗೊಂಡಿದ್ದರು.



ಕಂಡಹಾಗೆ

ನಮ್ಮ ಈ ಚುಕ್ಕಿ ಇತ್ತೀಚೆಗೆ ಇಟಲಿ ದೇಶದ ರೋಮ್ ನಗರದಲ್ಲಿ ಲೂಕ ಮೊಂತನಾರಿ ಎಂಬುವವರನ್ನು ಮದುವೆಯಾದಳು. (ತಮಾಷೆಗೆ ಹೇಳುವುದಾದರೆ ಈ ಮದುವೆ ಬಗ್ಗೆ ಒಂದು ಮಾತು ಕೇಳಿಬರುತ್ತಿದೆ. ಅದೇನೆಂದರೆ ದೇಶಕ್ಕೆ ಸೋನಿಯಾ ಗಾಂಧಿ ರೂಪದಲ್ಲಿ ಇಟಲಿ ಸೊಸೆ ಬಂದಿದ್ದರೆ, ರಾಜ್ಯದ ರೈತರ ಪಾಲಿಗೆ ಲೂಕ ಮೂಲಕ ಇಟಲಿಯ ಅಳಿಯ ಬಂದಿದ್ದಾನೆ!) ಚಿಕ್ಕವಯಸ್ಸಿನಲ್ಲೇ ಅಪ್ಪ ಅಮ್ಮ ಇಬ್ಬರನ್ನೂ ಕಳೆದುಕೊಂಡಿರುವ ಚುಕ್ಕಿ ಮತ್ತು ಪಚ್ಚೆಗೆ ನಾವೆಲ್ಲರೂ ಅಪ್ಪ, ಅಮ್ಮ, ಅಕ್ಕ, ಅಣ್ಣ ಎನಿಸುತ್ತದೆ. ಆದ್ದರಿಂದ ಚುಕ್ಕಿಗೆ ನನ್ನ ಆಶೀರ್ವಾದಗಳೊಂದಿಗೆ ನಮ್ಮ ಓದುಗ ಮಿತ್ರರೆಲ್ಲರ ಹಾರೈಕೆಗಳೂ ಇದ್ದೇ ಇದೆ ಎಂದು ಭಾವಿಸುತ್ತೇನೆ.

ಮೊನ್ನೆ ಚುಕ್ಕಿ ಬರೆದ ಪತ್ರ ಹೀಗಿದೆ:

ಇನೋಲಾ ಡಾ ಎಲ್ಬಾ ಟಸ್ಕನಿ, ಇಟಲಿ

ಪ್ರೀತಿಯ ಗೌರಿ ಅಕ್ಕ ಹೇಗಿದ್ದೀರಿ? ಗೊಂದಲಮಯ ಬದುಕಿನ ನಡುವೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಘಳಿಗೆ.

ಈ ಸುಂದರವಾದ ದ್ವೀಪದಲ್ಲಿ ನನ್ನ ಜೊತೆಗಾರನ ಜೊತೆ ಐಸ್‌ಕ್ರೀಂ ತಿನ್ನುತ್ತಾ ಮುಂದಿರುವ ಕೋಟ್ಯಂತರ ಸವಾಲುಗಳ ಬಗ್ಗೆ ಯೋಚಿಸುತ್ತಿರುವ ಘಳಿಗೆ ಇದು.

ನಿಮ್ಮನ್ನು ಪದೇಪದೇ ನೆನೆಸುತ್ತಿದ್ದೇನೆ. ಬಂದ ನಂತರ ಬಹಳಷ್ಟು ಮಾತನಾಡಬೇಕಿದೆ-ಈ ಜಗತ್ತಿನ ಬಗ್ಗೆ.


ಅಲ್ಲಿಯವರೆಗೆ


ಈ ಮೆಡಿಟರೇನಿಯನ್ ಸಮುದ್ರದಷ್ಟು ಪ್ರೀತಿಯನ್ನು ಸವಿಯುತ್ತಿರಿ.

ಚುಕ್ಕಿ

ಈ ಹುಡುಗಿಯ ಜೀವನ ಸಂತೋಷ, ನೆಮ್ಮದಿ ಮತ್ತು ಯಶಸ್ಸನ್ನು ಕಾಣುವ ರೈತ ಹೋರಾಟಗಳಿಂದ ತುಂಬರಲಿ ಎಂದು ಹಾರೈಸುವೆ....

-ಗೌರಿ ಲಂಕೇಶ್





ಆದಿವಾಸಿಗಳ ಪರವಾಗಿ ಮೆಣಸಿನಹಾಡ್ಯಕ್ಕೆ ಬನ್ನಿ

ನಕ್ಸಲರ ಹೋರಾಟ ಮತ್ತು ಪೊಲೀಸ್ ಕಾರ್ಯಾಚರಣೆ, ಇವುಗಳಿಂದಾಗಿ ಹರಿದ ರಕ್ತ, ಅದರಿಂದಾಗಿ ಹಿಂಸೆ ಮತ್ತು ಪ್ರತಿಹಿಂಸೆಯ ಬಗೆಗಿನ ಚರ್ಚೆ, ವಾದ, ವಿವಾದ... ಇವೆಲ್ಲವುಗಳ ನಡುವೆ ಎಲ್ಲರೂ ಮರೆಯುತ್ತಿರುವುದು ಕುದುರೆಮುಖ ಪ್ರದೇಶದಲ್ಲಿ ಅತಂತ್ರದ ಬದುಕನ್ನು ಸಾಗಿಸುತ್ತಿರುವ ಆದಿವಾಸಿಗಳ ಸಂಕಷ್ಟಗಳನ್ನು.

ಮಲೆನಾಡಿನ ಪ್ರದೇಶದಲ್ಲಿ ಜೀವಿಸುತ್ತಿರುವ ಆದಿವಾಸಿಗಳಿಗೆ ಮತ್ತು ರೈತರಿಗೆ ಮೂಲಭೂತ ಸೌಕರ್ಯಗಳಿರಲಿ, ಅವರು ವಾಸಿಸುತ್ತಿರುವ ಮನೆಗಳ ಮೇಲೆ, ಅವಲಂಬಿಸಿರುವ ಭೂಮಿಗಳ ಮೇಲೆ ಅವರಿಗೆ ಹಕ್ಕನ್ನೇ ನೀಡಲಾಗಿಲ್ಲ. ಇದರ ಮಧ್ಯೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ಎಂಬ ಸರ್ಕಾರಿ ಯೋಜನೆ ಅವರ ಬದುಕನ್ನು ಮತ್ತಷ್ಟು ಅತಂತ್ರ ಮಾಡಿತು. ಅದರಲ್ಲೂ, ರಾಮೇಗೌಡ, ಕಾವೇರಮ್ಮ ಎಂಬ ಗಿರಿಜನ ದಂಪತಿಗಳು ಮತ್ತು ಕುದುರೆಮುಖ ಉದ್ಯಾನ ವಿರೋಧಿ ಒಕ್ಕೂಟದ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಸಕ್ರಿಯವಾಗಿದ್ದ ಒಕ್ಕೂಟದ ಕಾರ್ಯದರ್ಶಿ ಪರಮೇಶ್ವರ್ ಮತ್ತು ಒಕ್ಕೂಟದ ಕಾರ್ಯಕರ್ತ ಸುಂದರೇಶ್‌ರವರನ್ನು ಇತ್ತೀಚೆಗೆ ಪೊಲೀಸರು ಅಮಾನುಷವಾಗಿ ಹತ್ಯೆಗೈದ ನಂತರ ಆ ಪ್ರದೇಶದಲ್ಲಿನ ಜನರು ಆತಂಕದಲ್ಲಿ ಮುಳುಗಿದ್ದಾರೆ.

ಇವತ್ತು ಆದಿವಾಸಿಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಹೊಂದಿರುವವರು ಅವರ ಪರವಾಗಿ ದನಿ ಎತ್ತಬೇಕಿದೆ, ಅವರ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ವಿಶ್ವಾಸವನ್ನು ಮೂಡಿಸಬೇಕಿದೆ. ಎಲ್ಲ ಪ್ರಜಾತಂತ್ರವಾದಿಗಳು, ಜನಪರರು ಅವರಿಗೆ ಬೆಂಬಲ ಸೂಚಿಸಿದರೆ ಮಾತ್ರ ಅವರಲ್ಲಿ ಆಶಾಭಾವನೆ ಮೂಡಲು ಸಾಧ್ಯ.

ಆದ್ದರಿಂದ ಎಲ್ಲರೂ ಇದೇ ಶುಕ್ರವಾರ, ಆಗಸ್ಟ್ 10ರಂದು ಬೆಳಗ್ಗೆ ಹನ್ನೊಂದು ಗಂಟೆಯಿಂದ ಮೆಣಸಿನಹಾಡ್ಯದಲ್ಲಿ ಜರುಗಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಗುಡ್ಡ, ಬೆಟ್ಟ, ಮಳೆ, ಜಿಗಣೆಗಳನ್ನು ಎದುರಿಸಿ ಈ ಸ್ಥಳ ತಲುಪಬೇಕಾಗುತ್ತದೆ. ಆದರೆ ಆದಿವಾಸಿಗಳ ಪರವಾಗಿ ಅಷ್ಟೂ ಮಾಡಲಾಗದಿದ್ದರೆ ಹೇಗೆ?

ಬನ್ನಿ, ಆದಿವಾಸಿಗಳೊಂದಿಗೆ ದನಿಗೂಡಿಸೋಣ.

-ಜೆ.ಎಲ್.

ತಾನು ಜೀವಿಸುವ ಕೆರೆಯ ನೀರನ್ನೆಲ್ಲ ಕಪ್ಪೆ ಕುಡಿದು ಹಾಕುವುದಿಲ್ಲ-ಅಮೆರಿಕ ಬುಡಕಟ್ಟು ಜನಾಂಗದ ನಾಣ್ನುಡಿ

ಭಜರಂಗದಳದ ಸಂಚಾಲಕನಿಗೆ ಪೊಲೀಸ್ ಆತಿಥ್ಯ

ಈ ಚೆಡ್ಡಿಗಳಿಗೆ ಸುಮ್ಮನಿರೊಕ್ಕಾಗಲ್ಲ. ಏನಾದರೊಂದು ಕಿತಾಪತಿ ಮಾಡದಿದ್ದರೆ ಅವರಿಗೆ ನಿದ್ದೆ ಕೂಡ ಬರೊಲ್ಲ. ಈ ದೇಶ ಜಾತಿ, ಧರ್ಮಗಳಲ್ಲಿ ಒಡೆದುಹೋಗಿ ಪರಸ್ಪರ ಕಚ್ಚಾಟದಲ್ಲಿ ತೊಡಗಿರಬೇಕೆಂಬುದೇ ಅವರ ಆಶಯ. ಅದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿಬಿಡುತ್ತಾರೆ.

ಹಿಂದೂ ಮುಸ್ಲಿಮರು ಪರಸ್ಪರ ಅನ್ಯೋನ್ಯವಾಗಿರುತ್ತಾರೆಂದರೆ ಇವರ ಖಾಕಿ ಚೆಡ್ಡಿಯೊಳಗೆ ಚೇಳು ಬಂದು ಸೇರಿಕೊಂಡಂತಾಗುತ್ತವೆ. ಹಿಂದೂ-ಮುಸ್ಲಿಮ್ ಹುಡುಗ-ಹುಡುಗಿಯರು ಪರಸ್ಪರ ಪ್ರೀತಿಸಿ, ಮದುವೆಯಾಗಿ ಚೆಂದಾಗಿ ಬದುಕಲು ಬಯಸುತ್ತಾರೆಂದರೆ ಅದಕ್ಕೂ ಬಿಡುವುದಿಲ್ಲ. ಅಲ್ಲಿಯೂ ನಂದೆಲ್ಲಿದ್ದಿ ಅಂತ ಬಂದು ಬಿಡುತ್ತಾರೆ.

ಮೊನ್ನೆ ನಡೆದ ಘಟನೆಯನ್ನೇ ನೋಡಿ. ಶೃಂಗೇರಿ ಹತ್ತಿರದ ಮುಸ್ಲಿಮ್ ಹುಡುಗ ರಜಾಕ್ ಮತ್ತು ಸಮೀಪದ ಜಯಪುರದ ಹಿಂದೂ ಹುಡುಗಿ ಸೌಮ್ಯ ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸಿದ್ದಾರೆ. ತಾವಿಬ್ಬರೂ ಕೊನೆತನಕ ಜೊತೆಯಾಗಿಯೇ ಇರಬೇಕೆಂದು, ತಮ್ಮ ಪ್ರೀತಿಗೆ ಅರ್ಥಪೂರ್ಣ ತಿರುವು ಕೊಡಬೇಕೆಂದು ಅಂದುಕೊಂಡು ಮದುವೆ ಆಗಲು ನಿರ್ಧರಿಸಿದ್ದಾರೆ. ಆದರೆ ಜಾತಿ, ಧರ್ಮಗಳ ಕಟ್ಟುಪಾಡುಗಳನ್ನು ಮೀರಿ ನಿಂತ ಪ್ರೇಮಿಗಳಿಗೆ ಭಾರತವೆಂಬ ಜಾತ್ಯತೀತ(!) ರಾಷ್ಟ್ರದಲ್ಲಿ ಆಗಬಹುದಾದ ಅನಾಹುತಗಳನ್ನು ಮುಂಚಿತವಾಗಿಯೆ ಗ್ರಹಿಸಿದ ಅವರು ತಮ್ಮ ಊರಿನಲ್ಲಿಯೇ ಮದುವೆಯಾಗುವ ಸಾಹಸಕ್ಕೆ ಕೈಹಾಕಲಿಲ್ಲ. ಹಾಗಾಗಿ, ಕಳೆದ ಜುಲೈ 27ರಂದು ಚಿತ್ರದುರ್ಗದ ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಆಗಿ, ನಂತರ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ರಜಾಕ್ ಟ್ಯಾಕ್ಸಿ ಚಾಲನೆ ಮಾಡುತ್ತಾ ತನ್ನ ಪುಟ್ಟ ನೂತನ ಸಂಸಾರವನ್ನು ಸಾಗಿಸಲಾರಂಭಿಸಿದ್ದಾನೆ.


ಆದರೆ ಇವರನ್ನು ನೆಮ್ಮದಿಯಾಗಿ ಬದುಕುವುದಕ್ಕೆ ಸಮಾಜ ಬಿಡಬೇಕಲ್ಲ. ಅದರಲ್ಲೂ ಚೆಡ್ಡಿಗಳು ಸುಮ್ಮನಿರಬೇಕಲ್ಲ. ಇಂಥವರ ನೆಮ್ಮದಿ ಹಾಳು ಮಾಡುವುದನ್ನೇ ತಮ್ಮ ಜೀವನದ ಪರಮ ಧ್ಯೇಯವನ್ನಾಗಿ ಮಾಡಿಕೊಂಡಿರುವ ಅವರಿಗೆ ನಿದ್ದೆ ಹೇಗೆ ಬರುತ್ತೆ? ರಜಾಕ್ ಮತ್ತು ಸೌಮ್ಯಳ ಮದುವೆಯ ವಿಚಾರ ತಿಳಿಯುತ್ತಿದ್ದಂತೆಯೇ ತಕ್ಷಣ ಕಾರ್ಯಪ್ರವೃತ್ತನಾದವನು ಭಜರಂಗದಳದ ಸಂಚಾಲಕ ಮಹೇಂದ್ರ ಕುಮಾರ್. ಪ್ರಾಯಶಃ ಈ ಮದುವೆಯ ವಿಚಾರ ತಿಳಿದ ತಕ್ಷಣ ಎಲ್ಲರಿಗಿಂತ ಮೊದಲು ತುರಿಕೆ ಶುರುವಾಗಿದ್ದು ಇವನಿಗೇ ಇರಬೇಕು.

ಮಹೇಂದ್ರ ಕುಮಾರ್ ಸೀದಾ ಸೌಮ್ಯಳ ಮನೆಗೆ ಹೋಗಿ, ಅವಳ ಅಪ್ಪ-ಅಮ್ಮಂದಿರಿಗೆ ತಲೆತುಂಬಿ, ಕೊನೆಗೆ ತಂದೆ ಸತೀಶ್‌ರವರಿಂದ ತಮ್ಮ ಮಗಳನ್ನು ಕಿಡ್ನಾಪ್ ಮಾಡಲಾಗಿದೆ ಎಂದು ಆಲ್ದೂರು ಪೊಲೀಸ್ ಸ್ಟೇಷನ್‌ನಲ್ಲಿ ಒಂದು ಕಂಪ್ಲೇಂಟ್ ಕೊಡಿಸಿದ್ದಾನೆ. ಕೊನೆಗೆ ವಿಚಾರಿಸಲೆಂದು ಪೊಲೀಸರು ರಜಾಕ್ ಮತ್ತು ಸೌಮ್ಯ ಇಬ್ಬರನ್ನೂ ಆಲ್ದೂರು ಸ್ಟೇಷನ್‌ಗೆ ಕರೆಸಿದ್ದಾರೆ. ತಾವು ಏನೂ ತಪ್ಪು ಮಾಡಿಲ್ಲವೆಂಬ ವಿಶ್ವಾಸ ರಜಾಕ್ ಮತ್ತು ಸೌಮ್ಯ ಇಬ್ಬರಿಗೂ ಇದ್ದುದರಿಂದ ಅವರು ಧೈರ್ಯವಾಗಿಯೇ ಪೊಲೀಸ್ ಸ್ಟೇಷನ್‌ಗೆ ಹೋಗಿ, ತಾವು ಮೈನರ್ ಅಲ್ಲವೆಂದೂ, ತಾವಿಬ್ಬರೂ ಕಾನೂನುಬದ್ಧವಾಗಿಯೇ ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಆಗಿರುವುದಾಗಿಯೂ ಹೇಳಿಕೆ ಕೊಟ್ಟು ಮದುವೆಯಾದ ಬಗ್ಗೆ ದಾಖಲೆಗಳನ್ನು ತೋರಿಸಿದ್ದಾರೆ. ಆಗ ಪೊಲೀಸರು ಬೇರೆ ವಿಧಿಯಿಲ್ಲದೇ ಅವರಿಬ್ಬರನ್ನು ಬಿಟ್ಟು ಕಳಿಸಿದ್ದಾರೆ.

ಆದರೆ ಭಜರಂಗ ದಳದ ಮಹೇಂದ್ರ ಕುಮಾರನಿಗೆ ತುರಿಕೆ ನಿಲ್ಲಲಿಲ್ಲ. ತಾನು ಹಾಕಿದ ಪ್ಲಾನ್ ಹೀಗೆ ಫ್ಲಾಪ್ ಆಗುತ್ತೆ ಅಂತ ಆತ ಖಂಡಿತ ಅಂದುಕೊಂಡಿರಲಿಲ್ಲವೇನೋ. ರಜಾಕ್ ಮತ್ತು ಸೌಮ್ಯರಿಗೆ ಪೊಲೀಸರು ಕಿರುಕುಳ ನೀಡದಿದ್ದರೇನಂತೆ, ತಾನೇ ಆ ಕೆಲಸ ಮಾಡುವೆ ಎಂದುಕೊಂಡು ಪುಂಡರ ಪುಡಿ ಗ್ಯಾಂಗನ್ನು ಕಟ್ಟಿಕೊಂಡು ಪೊಲೀಸ್ ಸ್ಟೇಷನ್‌ನಿಂದ ವಾಪಾಸು ಬರುತ್ತಿದ್ದ ರಜಾಕ್ ಮತ್ತು ಸೌಮ್ಯರನ್ನು ಕಿಡ್ನಾಪ್ ಮಾಡಿ, ಅವರನ್ನು ಕಾರಿನಲ್ಲಿ ಎತ್ತಿಹಾಕಿಕೊಂಡು ಚಿಕ್ಕಮಗಳೂರಿನ ಹತ್ತಿರ ಕರೆದುಕೊಂಡು ಹೋಗಿ, ರಜಾಕನಿಗೆ ಹಿಗ್ಗಾ ಮುಗ್ಗಾ ಥಳಿಸಿದ್ದಾನೆ.

ಹಲ್ಲೆಗೊಳಗಾದ ಯುವ ದಂಪತಿಗಳು ನೇರವಾಗಿ ಚಿಕ್ಕಮಗಳೂರು ಪೊಲೀಸ್ ಸ್ಟೇಷನ್‌ಗೆ ಬಂದು ನಡೆದದ್ದೆಲ್ಲವನ್ನೂ ವಿವರಿಸಿ ಮಹೇಂದ್ರ ಕುಮಾರ್ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದಾರೆ. ಇದನ್ನೇ ಆಧರಿಸಿ ಈಗ ಚಿಕ್ಕಮಗಳೂರು ಪೊಲೀಸರು ಮಹೇಂದ್ರ ಕುಮಾರ್ ಮತ್ತು ಅವನೊಂದಿಗಿದ್ದ ಇನ್ನೊಬ್ಬ ಮಹೇಂದ್ರ ಕುಮಾರ್ ಎಂಬುವವನನ್ನು ಬಂಧಿಸಿ ಲಾಕಪ್ಪಿಗೆಸೆದಿದ್ದಾರೆ.

ಹೇಗಿದ್ದರೂ ರಾಜ್ಯದಲ್ಲಿ ತಮ್ಮದೇ ಸರ್ಕಾರವಿದೆ, ತಾವು ಆಡಿದ್ದೇ ಆಟ, ಮಾಡಿದ್ದೇ ದರ್ಬಾರು ಅಂದುಕೊಂಡು ತನ್ನ ತುರಿಕೆಯನ್ನು ನಿವಾರಿಸಿಕೊಳ್ಳಲು ಕಿತಾಪತಿಗಿಳಿದಿದ್ದ ಮಹೇಂದ್ರ ಕುಮಾರ್‌ನ ಚೆಡ್ಡಿ ಕೆಳಗೆ ಚಿಕ್ಕಮಗಳೂರಿನ ಪೊಲೀಸರು ಸರಿಯಾಗಿಯೇ ಬರೆ ಎಳೆದಿದ್ದಾರೆ.



ಅಬ್ಬಾಯಿ ಸತ್ತಿದ್ದು ಏಕೆ?

ಸ್ಮಶಾನದ ಅಧಿಪತಿ ವೀರಬಾಹುಕನೇ ಹೆಣವಾಗಿ ಸ್ಮಶಾನಕ್ಕೆ ಬಂದಂತಿದೆ ಜೈಲ್ ಡಿಐಜಿ ಅಬ್ಬಾಯಿಯ ಆತ್ಮಹತ್ಯೆ!

ವರ್ಷಾನುಗಟ್ಟಲೇ ಬೆಂಗಳೂರು ಸೆಂಟ್ರಲ್ ಜೈಲನ್ನು ಸಂಭಾಳಿಸಿದವರು. ಘಟಾನುಘಟಿ ಪಾತಕಿಗಳನ್ನು ಪಳಗಿಸಿದವರು. ತೆಲಗಿ ಕರ್ಮಕಾಂಡದ ನಡುವೆಯೂ ಬಚಾವಾಗಿ ಬಂದವರು. ತಾವೇ ಕಾವಲಿದ್ದ ಜೈಲಿನ ಎದುರೇ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದರೆ ಅದಿನ್ನೆಂಥಾ ಶಿಕ್ಷೆಗೆ ಅಬ್ಬಾಯಿ ತಲೆ ಕೊಡಬೇಕಿತ್ತು?

ಬಹುಶಃ ತಾವೇ ಕಟ್ಟಿಸಿದ ಜೈಲೊಳಗೆ ತಾನೇ ಕಂಬಿ ಎಣಿಸಬೇಕಾದ ಅವಮಾನ ಮತ್ತು ಅಪನಿಂದೆಗೆ ತಲೆ ಕೊಡಲಾಗದೇ ಅಬ್ಬಾಯಿ ಸಾವಿಗೆ ಶರಣಾದರಾ? ಅಥವಾ ಜನ್ಮಾಪಿ ಪಾಲಿಸಿಕೊಂಡು ಬಂದಿದ್ದ 'ಮಿಸ್ಟರ್ ಕಟ್ಟುನಿಟ್ಟು' ಎಂಬ ತನ್ನ ಇಮೇಜ್ ತನ್ನದೇ ಕಣ್ಣೆದುರೇ ಮಣ್ಣು ಗೂಡುವುದನ್ನು ಸಹಿಸದೇ ಹೋದರಾ? ಇದು ಅಬ್ಬಾಯಿಯ ಸ್ವಯಂ ಕೃತಾಪರಾಧವಾ ಅಥವಾ ಭ್ರಷ್ಟ ವ್ಯವಸ್ಥೆಯೊಂದು ತಂದಿಟ್ಟ ದುರಂತವಾ?


ಹೀಗೆ ಹತ್ತಾರು ಪ್ರಶ್ನೆಗಳನ್ನು ಒಂದೇ ಏಟಿಗೆ ನಿಲ್ಲಿಸಿ ತನ್ನನ್ನು ತಾನೇ ಕೊಂದುಕೊಂಡ ಜೈಲ್ ಡಿಐಜಿ ಬಾ.ಶಿ. ಅಬ್ಬಾಯಿ ಕರ್ನಾಟಕ ಕಂಡ ಅತ್ಯಂತ ಜನಪ್ರಿಯ ಜೈಲ್ ಅಧಿಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. 'ನನ್ನ ಸಾವಿಗೆ ಯಾರೂ ಹೊಣೆಯಲ್ಲ, ನಾನು ಯಾವ ತಪ್ಪನ್ನೂ ಮಾಡಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ನಾನು ನನ್ನ ಹೆಂಡತಿ ಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದೇನೆ' ಎಂಬ ಕೆಲವೇ ಸಾಲುಗಳನ್ನು ತನ್ನ ಡೆತ್‌ನೋಟಿನಲ್ಲಿ ಬರೆದಿಟ್ಟ ಅಬ್ಬಾಯಿಗೆ ನಿಜಕ್ಕೂ ಆತ್ಮಹತ್ಯೆ ಮಾಡಿಕೊಳ್ಳುವುದೇ ಉದ್ದೇಶವಾಗಿತ್ತಾ? ಅಥವಾ ಆತ್ಮಹತ್ಯೆಗೆ ಯತ್ನಿಸಿದಂತೆ ಮಾಡಿ ಆಸ್ಪತ್ರೆಗೆ ಸೇರುವುದು, ತನ್ಮೂಲಕ ತನ್ನ ಮೇಲಿದ್ದ ಇಲಾಖಾ ತನಿಖೆಯಿಂದ ಬಚಾವಾಗುವುದೇ ಗುರಿಯಾಗಿತ್ತಾ?

ಆತ್ಮಹತ್ಯೆ ಮಾಡಿಕೊಂಡ ರೀತಿ, ಆ ಸಂದರ್ಭದ ಪರಿಸ್ಥಿತಿ, ಅವರ ಪತ್ನಿಯ ವರ್ತನೆಗಳೆಲ್ಲ ಬೇರೆ ಯಾವುದೋ ಕತೆಯೊಂದನ್ನು ತೆರೆದಿಡುತ್ತಿವೆ- ಅಬ್ಬಾಯಿ ಚೈನ್ ಸ್ಮೋಕರ್. ಭಯಂಕರ ಕುಡಿತವಿತ್ತು. ಆರೋಗ್ಯವೂ ಕೈಕೊಟ್ಟಿತ್ತು. ವೈದ್ಯರ ಎಚ್ಚರಿಕೆಯಂತೆ ಸ್ಮೋಕಿಂಗ್ ಮತ್ತು ಕುಡಿತಗಳೆರಡನ್ನೂ ಸ್ತಿಮಿತಕ್ಕೆ ತಂದುಕೊಂಡಿದ್ದರು. ಅನೇಕರಿಗದು ಅಬ್ಬಾಯಿಯವರಿಗಿದ್ದ 'ಜೀವಭಯ'ದಂತೆ ಕಂಡಿತ್ತಾದರೂ ಇದೆಲ್ಲಕ್ಕಿಂತ ದೊಡ್ಡ ಆಪತ್ತೊಂದು ಇಷ್ಟರಲ್ಲೇ ಎದುರಾಗಲಿತ್ತು!

ಅದು ಅಬ್ಬಾಯಿ ವಿರುದ್ಧದ ಇಲಾಖಾ ತನಿಖೆ!

ಇಷ್ಟರಲ್ಲೇ ತಾನು ಸಸ್ಪೆಂಡಾಗಲಿದ್ದೇನೆ. ಬಂದೀಖಾನೆ ಇಲಾಖೆಯ ಎಡಿಜಿಪಿ ಎಸ್.ಟಿ. ರಮೇಶ್ 'ಖಂಡಿತ ತನ್ನನ್ನು ಮುಗಿಸುತ್ತಾರೆ. ಹೇಗಾದರೂ ಮಾಡಿ ನನ್ನನ್ನು ಕಾಪಾಡಿ....' ಎಂದು ಮಾಜಿ ಜೈಲು ಮಂತ್ರಿ ಮತ್ತು ಬಿನ್ನಿಪೇಟೆಯ ಶಾಸಕ ಸೋಮಣ್ಣನವರ ಮುಂದೆ ಕೂತು ಹಣೆಹಣೆ ಚಚ್ಚಿಕೊಂಡಿದ್ದರು. 'ಹೋಗೋ ಅಬ್ಬಾಯೀ.... ನಿನ್ನನ್ನು ಮುಟ್ಟೋ ಧೈರ್ಯ ಯಾರಿಗಾದ್ರೂ ಉಂಟೇನೋ? ಸುಮ್ನೇ ಯಾಕೆ ಭಯ ಪಟ್ಕೋತೀಯ?' ಎಂದು ತೇಲಿಸಿ ಸಾಗಹಾಕಿದ್ದರು ಸೋಮಣ್ಣ.

ಸೋಮಣ್ಣನ ಮಾತನ್ನೇನಾದ್ರೂ ನಂಬ್ಕೊಂಡ್ರೆ ತಾನು ಉಳಿಯೋದುಂಟಾ? ಎಂದೇ ಹತಾಶೆಗೆ ಬಿದ್ದ ಅಬ್ಬಾಯಿ ಬ್ಲಾಕ್‌ಮೇಲ್ ಪತ್ರಕರ್ತನೊಬ್ಬನ ಜೊತೆ ಮಂತ್ರಿ ಎಂ.ಪಿ. ಪ್ರಕಾಶ್ ಛೇಂಬರಿನ ಮುಂದೆ ಠಳಾಯಿಸುತ್ತಿದ್ದರು. ಜೆಡಿಎಸ್‌ನ ಕಂಡಕಂಡ ಶಾಸಕರಿಗೆ ದುಂಬಾಲು ಬಿದ್ದರು. ಏನಾದ್ರೂ ಮಾಡಿ ನನ್ನನ್ನು ಉಳಿಸ್ರಪ್ಪಾ ಎಂದು ಯಾರ್‍ಯಾರನ್ನೋ ಅಂಗಲಾಚಿದ್ದರು. ಇಷ್ಟಾಗ್ಯೂ ಜೈಲು ಎಡಿಜಿಪಿ ಎಸ್.ಟಿ. ರಮೇಶ್ ಹಾಕಿದ್ದ ಕುಣಿಕೆ ಮಾತ್ರ ಸಡಿಲಿಸಲಾಗಲೇ ಇಲ್ಲ.



ಬೆಂಗಳೂರಿನ ಭೀಕರ ಗ್ಯಾಂಗ್‌ವಾರ್‌ಗೆ ಜೈಲು ಡಿಐಜಿ ಅಬ್ಬಾಯಿಯ ಕೊಡುಗೆ ಎಷ್ಟಿತ್ತೋ? ಆದರೆ ಜೈಲಲ್ಲಿದ್ದುಕೊಂಡೇ ಕ್ರಿಮಿನಲ್‌ಗಳು ಎಸಗುತ್ತಿದ್ದ ಪಾತಕವನ್ನಂತೂ ಖಂಡಿತಾ ಅಬ್ಬಾಯಿ ತಡೆಯಬಹುದಿತ್ತು. ಜೈಲೊಳಗೆ ಪಾತಕಿಗಳು ಬಳಸುತ್ತಿದ್ದ ಮೊಬೈಲ್ ಫೋನ್‌ಗಳ ಸದ್ದಡಗಿಸಬಹುದಿತ್ತು, ಹೊರಗೆ ಇದ್ದ ಗ್ಯಾಂಗುಗಳು ಜೈಲಿನಲ್ಲೂ ರೀಗ್ರೂಪ್ ಆಗದಂತೆ ಮಾಡಬಹುದಿತ್ತು. ದುರಂತವೆಂದರೆ ಜೈಲೆಂಬುದು ಸುಧಾರಣಾ ಕೇಂದ್ರವಾಗುವ ಬದಲು ಕ್ರಿಮಿನಲ್‌ಗಳ ಯೂನಿವರ್ಸಿಟಿಯಾಗುವಂತೆ ಮಾಡಿದ್ದರಲ್ಲಿ ಅಬ್ಬಾಯಿ ಕೊಡುಗೆಯೇ ಹೆಚ್ಚಾಗಿತ್ತು ಮತ್ತು ಅದೇ ಅಂತಿಮವಾಗಿ ಅಬ್ಬಾಯಿಯನ್ನೇ ನುಂಗಿ ಹಾಕಿತ್ತು!

ಬಹುಶಃ ಇದೆಲ್ಲ ಪರಪ್ಪನ ಅಗ್ರಹಾರ ಎಂಬ ಹೊಸ ಜೈಲಿನ ನಿರ್ಮಾಣದ ಜೊತೆಗೇ ಶುರುವಾಯಿತಾ? ಅಥವಾ ಬೆಂಗಳೂರಿನ ಸಾಮಾಜಿಕ ದುರಂತವೆಂಬುದು ಆ ಊರಿನ ಜೈಲ್ ಮುಖ್ಯಸ್ಥನನ್ನು ತಿಂದು ಹಾಕಿತಾ ನಿರ್ಧರಿಸುವವರ್‍ಯಾರು?

ಇದೆಲ್ಲ ಶುರುವಾಗಿದ್ದೇ ಛಾಪಾ ಖದೀಮ ತೆಲಗಿಯಿಂದ ಎನ್ನುತ್ತಿದೆ ಒಂದು ವರ್ಗ. ತೆಲಗಿಯಿಂದಾಗಿಯೇ ಜೈಲು ಸೂಪರಿಂಟೆಂಡೆಂಟ್ ಜಯಸಿಂಹ ಜೈಲುಪಾಲಾಗಿದ್ದು, ಜೊತೆಗೆ ಇನ್ನಷ್ಟು ಜೈಲು ಸಿಬ್ಬಂದಿ ಇವತ್ತಿಗೂ ಕಂಬಿ ಎಣಿಸುತ್ತಿರುವುದು, ತೆಲಗಿಗೆ ಜೈಲಲ್ಲಿ ಮೊಬೈಲ್ ಬಳಸಲು ಅವಕಾಶ ಕೊಟ್ಟಿದ್ದರಿಂದಲೇ ನಕಲಿ ಛಾಪಾ ದಂಧೆ ನಿರಾತಂಕವಾಗಿ ನಡೆದಿದ್ದು ಮತ್ತು ಆವತ್ತಿನಿಂದಲೇ ಪರಪ್ಪನ ಅಗ್ರಹಾರ ಜೈಲಿನ ಸುತ್ತ ಮೊಬೈಲ್ ಝೂಮರ್‌ಗಳನ್ನು ಅಳವಡಿಸಿದ್ದು.

ಇವತ್ತು ಅಬ್ಬಾಯಿ ಆತ್ಮಹತ್ಯೆಗೂ ಇದೇ ಕಾರಣವಾಗಿದೆ!

ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಜೈಲು ಎಡಿಜಿಪಿ ಎಸ್.ಟಿ. ರಮೇಶ್ ತಮ್ಮದೇ ಪಡೆ ಕಟ್ಟಿಕೊಂಡು ಪರಪ್ಪನ ಅಗ್ರಹಾರ ಜೈಲನ್ನು ರೈಡ್ ಮಾಡಿದ್ದು ಕೂಡ ಇದೇ ಕಾರಣಕ್ಕೆ. ಕಳೆದ ವಾರವಷ್ಟೇ ಕೋಲಾರ ಜೈಲಿನಲ್ಲಿ ಖೈದಿಗಳು ಮೊಬೈಲ್ ಫೋನ್ ಬಳಸುತ್ತಿದ್ದ ಫೋಟೋ ಸಹಿತ ವರದಿಯನ್ನು ಪತ್ರಿಕೆ ಪ್ರಕಟಿಸಿತ್ತು. ಅದಕ್ಕೂ ಮುನ್ನ ಪರಪ್ಪನ ಅಗ್ರಹಾರ ಜೈಲೊಳಗೇ ರೌಡಿಗಳ ಮಧ್ಯೆ ಮಾರಾಮಾರಿಯಾಗಿತ್ತು. ಬ್ರೇಕ್ ಜಗ್ಗಿಯ ಕಡೆಯ ಹುಡುಗರಿಗೂ ಸುನೀಲನ ಶಿಷ್ಯರಿಗೂ ನಡೆದ ಬಡಿದಾಟ ಪತ್ರಿಕೆಗಳಲ್ಲೂ ಸುದ್ದಿಯಾಯಿತು. ಜೊತೆಗೆ ಜೈಲಿನಲ್ಲಿದ್ದುಕೊಂಡೇ ರೌಡಿ ಸುನೀಲ ತನ್ನ ಹುಡುಗರನ್ನು ಬಿಟ್ಟು ಸರಿಸುಮಾರು ನಾಲ್ಕು ಅನಾಹುತಕಾರಿ ಕ್ರೈಂಗಳನ್ನು ಪೂರೈಸಿದ್ದ.

ಇತ್ತ ಸುನೀಲನ ಗ್ಯಾಂಗಿನ ಪ್ರತಿ ಚಲನವಲನವನ್ನೂ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಕಣ್ಣಲ್ಲಿ ಕಣ್ಣಿಟ್ಟು ಹಿಂಬಾಲಿಸುತ್ತಿದ್ದರೆ, ಅತ್ತ ಸಿಸಿಬಿಯವರೂ ಅನೇಕ ಕ್ರಿಮಿನಲ್‌ಗಳ ಮೊಬೈಲ್ ಫೋನುಗಳಿಗೆ ಕಿವಿ ಕೊಟ್ಟಿದ್ದರು. ಆಘಾತಕಾರಿ ಸಂಗತಿಯೇನೆಂದರೆ ಜೈಲಿಂದ ಹೊರಗಿದ್ದು ಪೊಲೀಸರ ಗಮನಕ್ಕೂ ಬಾರದೇ ಭೂಗತರಾಗಿದ್ದ ಕೆಲ ಪಾತಕಿಗಳಿಗೆ ಜೈಲಿಂದಲೇ ಸುನೀಲನ ಫೋನ್ ಬರುತ್ತಿತ್ತು. ಪರಪ್ಪನ ಅಗ್ರಹಾರ ಜೈಲಲ್ಲೇ ಇದ್ದ ತನ್ವೀರ್, ತರಕಾರಿ ಖಲೀಲ್, ಕುರಿ ಶಿವಾ ಜೈಲಿಂದಲೇ ಮೊಬೈಲ್ ಫೋನ್ ಬಳಸಿದ್ದಕ್ಕೆ ಪೊಲೀಸರಿಗೆ ಸಾಕಷ್ಟು ಸಾಕ್ಷ್ಯಾಧಾರಗಳು ಸಿಕ್ಕವು. ಅತ್ತ ಚಿತ್ರದುರ್ಗ ಜೈಲಿನಲ್ಲೂ ಕೊರಂಗು ಮೊಬೈಲ್ ಬಳಸಿದ್ದ. ಅಂಜನಪ್ಪ ಗಾರ್ಡನ್ನಿನ ಪಾತಕಿ ಗುಪ್ಪ ಜೈಲಲ್ಲಿ ಕೂತೇ ತನ್ನ ಮೊಬೈಲ್ ಫೋನನ್ನು ಬಳಸಿ ದಲಿತ ಪ್ಯಾಂಥರ್ಸ್ ನಾಯಕ ಬಾಲುನನ್ನು ಕೊಲ್ಲಿಸಿದ್ದ. ಅದಕ್ಕೂ ಮುನ್ನ ಪೆದ್ದಗುಂಡನಿಗೂ ಜೈಲಿಂದಲೇ ಫೋನುಗಳು ಹೋಗಿದ್ದವು.


ಸೈಲೆಂಟ್ ಸುನಿಲ

ಅಲ್ಲಿಗೆ ಸೆಂಟ್ರಲ್ ಜೈಲೇ ಬೆಂಗಳೂರಿನ ಬಹುತೇಕ ರಕ್ತಪಾತಗಳಿಗೆ ಕಾರಣವಾಗುತ್ತಿದೆ ಎಂಬುದು ಪೊಲೀಸರಿಗೆ ಮನದಟ್ಟಾಗಿತ್ತು. ಡಿಸಿಪಿ ಕಿಶೋರ್ ಚಂದ್ರ, ಅಡಿಷನಲ್ ಕಮೀಷನರ್ ಗೋಪಾಲ್ ಹೊಸೂರ್ ಈ ಬಗ್ಗೆ ಕಮೀಷನರ್ ನೀಲಂ ಅಚ್ಯುತರಾವ್‌ಗೆ ದೂರು ಕೊಟ್ಟರೆ, ನೀಲಂ ಅದನ್ನು ಸೀದಾ ಹೋಮ್ ಸೆಕ್ರೆಟರಿಗೆ ರವಾನಿಸಿಬಿಟ್ಟರು. ಯಾವತ್ತು ಹೋಂ ಸೆಕ್ರೆಟರಿಯೇಟೇ ಜೈಲು ಎಡಿಜಿಪಿ ರಮೇಶ್‌ರನ್ನು ಗುದುಮಿತೋ, ತಡ ಮಾಡದೇ ರಮೇಶ್ ಪರಪ್ಪನ ಅಗ್ರಹಾರದ ಮೇಲೆ ರೇಡ್ ಮಾಡಿಬಿಟ್ಟರು.

ಬಹುಶಃ ಆ ಹೊತ್ತಿಗಾಗಲೇ ಅಬ್ಬಾಯಿಯ ಅದೃಷ್ಟದ ಅಕೌಂಟೂ ಮುಗಿದು ಹೋಗಿತ್ತೇನೊ!

ಜೈಲಿನ ಪ್ರತಿ ಬ್ಯಾರಕ್ಕನ್ನೂ ತಡಕಾಡಿದ ಸ್ಕ್ವಾಡಿಗೇ ಅಚ್ಚರಿ ಕಾದಿತ್ತು. ಸುನೀಲನ ಬ್ಯಾರಕ್ಕೊಂದರಲ್ಲೇ ಮೂರು ಮೊಬೈಲುಗಳು ಸಿಕ್ಕವು. ಜಗ್ಗಿ ಶಿಷ್ಯರ ಬಳಿ, ತನ್ವೀರ್ ಬಳಿ, ತರಕಾರಿ ಖಲೀಲ್ ಗ್ಯಾಂಗಿನಲ್ಲಿ ತಲಾ ಒಂದೊಂದರಂತೆ ಸಿಕ್ಕ ಮೊಬೈಲುಗಳನ್ನೇ ಹಿಡಿದು ರಮೇಶ್ ಅಬ್ಬಾಯಿಯನ್ನು ಝಾಡಿಸಿಬಿಟ್ಟರು.

ಇನ್ನೂ ಅಚ್ಚರಿಯ ಸಂಗತಿಯೇನೆಂದರೆ, ಇಲ್ಲಿಗೆ ಎರಡು ವರ್ಷದ ಹಿಂದೆ, ಅಂದರೆ ತೆಲಗಿಯ ಕಾರಣಕ್ಕೆ ಜೈಲಿಗೆ ಅಳವಡಿಸಿದ್ದ ಝೂಮರ್ ಇದ್ದಾಗಲೂ ಹೇಗೆ ಮೊಬೈಲ್ ಬಳಸಲು ಸಾಧ್ಯ?

ಹಕೀಕತ್ತೆಂದರೆ ಹಾಕಿದ್ದ ಝೂಮರ್ ಎಂದೋ ಕೆಟ್ಟು ಹೋಗಿತ್ತು ಅಥವಾ ಅದನ್ನು ಕೆಡಿಸಲಾಗಿತ್ತು!

ನಿಜಕ್ಕೂ ಅಬ್ಬಾಯಿ ಪ್ರಾಮಾಣಿಕನಾಗಿದ್ದರೆ ಕೆಟ್ಟ ಝೂಮರ್‌ಗಳನ್ನು ರಿಪೇರಿ ಮಾಡಿಸಬೇಕಿತ್ತು. ಅಥವಾ ಈ ಬಗ್ಗೆ ಇಲಾಖೆಗಾದರೂ ಬರೆಯಬೇಕಿತ್ತು. ಇದ್ಯಾವುದನ್ನೂ ಮಾಡದೇ ಜೈಲಿನ ಖೈದಿಗಳಿಗೆ ಮೊಬೈಲನ್ನೂ ಕಲ್ಪಿಸುತ್ತಾರೆಂದರೆ? ಈ ವಿಷಯದಲ್ಲಿ ಅಬ್ಬಾಯಿಯ ಪಾತ್ರವಿಲ್ಲದಿಲ್ಲ ಎಂಬ ನಿರ್ಧಾರಕ್ಕೆ ರಮೇಶ್ ಬಂದುಬಿಟ್ಟರು. ಈ ಬಗ್ಗೆ ತನಿಖಾ ತಂಡವನ್ನೂ ರಚಿಸಲಾಯ್ತು. ಅಬ್ಬಾಯಿಯನ್ನು ಕರೆದು ವಿಚಾರಣೆಯನ್ನೂ ನಡೆಸಲಾಯ್ತು. ಅಲ್ಲಿಗೆ ಖೈದಿಗಳ ಕೈಗೆ ಮೊಬೈಲ್ ಕಲ್ಪಿಸುವುದರಲ್ಲಿ ಅಬ್ಬಾಯಿಯ ಪಾತ್ರವಿದ್ದದ್ದು ಸ್ಪಷ್ಟವಾಗಿತ್ತು!

ಯಾವತ್ತು ಇಲಾಖಾ ತನಿಖೆಯ ಉರುಳು ಬಿಗಿಯಾಯಿತೋ ಅಬ್ಬಾಯಿಗೆ ತನ್ನ ಸಸ್ಪೆಂಡ್ ಗ್ಯಾರಂಟಿ ಎನ್ನಿಸಿದೆ. ತೆಲಗಿ ಕೇಸಿನಲ್ಲಿ ಜೈಲುಪಾಲಾದ ಜೈಲಧಿಕಾರಿಗಳಂತೆ ತಾನೂ ಕಂಬಿ ಎಣಿಸುವಂತಾದರೆ ಹೇಗೆ ಎಂಬ ಅಳುಕು ಕಾಡಿದೆ. ಕಂಡಕಂಡವರ ಕಾಲಿಗೆ ಬಿದ್ದಿದ್ದಾರೆ. ಗೃಹ ಮಂತ್ರಿ ಎಂ.ಪಿ. ಪ್ರಕಾಶ್‌ರನ್ನೇ ಕಂಡು ಕಣ್ಣೀರಿಟ್ಟಿದ್ದಾರೆ. ಏನೆಲ್ಲಾ ಮಾಡಬೇಕೋ ಎಲ್ಲವನ್ನೂ ಮಾಡಿಯೂ ಎಡಿಜಿಪಿ ರಮೇಶ್ ಪಟ್ಟು ಸಡಿಲಿಸದೇ ಹೋದಾಗ ತೀವ್ರ ಹತಾಶೆಗೆ ಬಿದ್ದಿದ್ದಾರೆ. ಬಹುಶಃ ಆತ್ಮಹತ್ಯೆಗೆ ಯತ್ನಿಸಿದಂತೆ ನಟಿಸುವುದು ಅವರ ಉದ್ದೇಶವಾಗಿತ್ತಾ? ಅಥವಾ ಬಚಾವಾಗುವ ಎಲ್ಲಾ ಬಾಗಿಲುಗಳು ಮುಚ್ಚಿ ಹೋಗಿತ್ತಾ?

ಅಂತಿಮವಾಗಿ ಆಗಸ್ಟ್ 4ರ ಶನಿವಾರ ರಾತ್ರಿ ಅಬ್ಬಾಯಿ ತಮ್ಮನ್ನು ತಾವೇ ಕೊಂದು ಕೊಂಡಿದ್ದಾರೆ. ನೇಣಿನ ಕುಣಿಕೆಯಲ್ಲಿದ್ದ ಅವರನ್ನು ಬದುಕಿಸುವ ಎಲ್ಲಾ ಯತ್ನಗಳೂ ವಿಫಲಗೊಂಡಿವೆ.

ಒಂದಂತೂ ಸತ್ಯ ಅಬ್ಬಾಯಿಯಂಥ ಇನ್ನೊಬ್ಬ ಸಿಗಲಾರ!

-ರಾ. ಸೋಮನಾಥ್

ಸ್ಟಾಲಿನ್ ಎಂಬ ಕಾಂಗ್ರೆಸ್ ಕಳೆ?


ಇವನು ಹೆಸರಿಗಷ್ಟೇ ಸ್ಟಾಲಿನ್!

ಗಾಂಧಿ ಎಂದು ಅರ್ಧ ಹೆಸರಿಟ್ಟುಕೊಂಡವರೆಲ್ಲ ಹೇಗೆ ಮಹಾತ್ಮಾರಾಗುತ್ತಾರೆ? ಹಾಗೇ ಸ್ಟಾಲಿನ್ ಎಂದ ಮಾತ್ರಕ್ಕೆ ರಷ್ಯನ್ ಕ್ರಾಂತಿನಾಯಕನಂತೆಯೋ ಅಥವಾ ತೆಲುಗಿನ ಚಿರಂಜೀವಿ ಸಿನಿಮಾದ ಪಾತ್ರದಂತೆಯೋ ಇರಬೇಕೆಂದಿಲ್ಲವಲ್ಲ?

ಆದರೆ ಈ ಕಾಂಗ್ರೆಸ್ ಪುಢಾರಿ ಸ್ಟಾಲಿನ್‌ಗೆ ಕೊಂಚ ತಾಳ್ಮೆ ಮತ್ತು ಕಲ್ಚರ್ ಇದ್ದಿದ್ದರೆ ಈ ರೀತಿ ಸಿಸಿಬಿ ಪೊಲೀಸರಿಂದ ಒದೆ ತಿಂದು, ಸ್ಲೇಟು ಸಮೇತ ಫೋಟೋ ತೆಗೆಸಿಕೊಂಡು, ಕ್ರಿಮಿನಲ್‌ಗಳ ಜೊತೆ ನಿಂತು ಪತ್ರಿಕೆಗಳಲ್ಲೂ ಮಿಂಚಬೇಕಾದ ದುರ್ಗತಿ ಬರುತ್ತಿರಲಿಲ್ಲ. ನಿರ್ಮಾಣ್ ಡೆವಲಪರ್ಸ್ ಮಾಲೀಕ ಲಕ್ಷ್ಮೀನಾರಾಯಣರಿಗೆ ಮುತ್ತಪ್ಪ ರೈ ಹೆಸರಲ್ಲಿ ಧಮಕಿ ಕೊಟ್ಟು, ಎರಡು ಕೋಟಿಯ ಒತ್ತೆಹಣಕ್ಕಾಗಿ ಡಿಮ್ಯಾಂಡಿಟ್ಟು, ಆ ಕಾರಣಕ್ಕೇ ಜೈಲು ಪಾಲಾದ ಜೋಸೆಫ್ ಸ್ಟಾಲಿನ್‌ಗೆ ತನ್ನ ಪ್ರತಿಷ್ಠೆ ಮತ್ತು ಸ್ಥಾನಮಾನದ ಪರಿವೆ ಕೂಡ ಇದ್ದಂತಿಲ್ಲ.

ಕಾಂಗ್ರೆಸ್ ಮಟ್ಟಿಗೆ ಆತನದು ಸಣ್ಣ ಹುದ್ದೆಯೇನಲ್ಲ. ರಾಷ್ಟ್ರ ಕಾಂಗ್ರೆಸ್ಸಿನ ಎಐಸಿಸಿ ಸದಸ್ಯರಾದ ಪೂಜಾರಿ, ಮೋಟಮ್ಮ, ಡಾ. ಪರಮೇಶ್ವರ್, ಲೇಟೆಸ್ಟ್ ಕೃಷ್ಣಪ್ಪ ಬಿ.ಕೆ. ಹರಿಪ್ರಸಾದ್ ಇತ್ಯಾದಿಗಳ ಪೈಕಿ ಈ ಸ್ಟಾಲಿನ್ ಕೂಡ ಒಬ್ಬ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಕಿಯೋನಿಕ್ಸ್ ಸಂಸ್ಥೆಯ ಅಧ್ಯಕ್ಷನಾಗಿದ್ದ. ಅದಕ್ಕೂ ಮುನ್ನ ರಾಜ್ಯ ಎನ್‌ಎಸ್‌ಯುಐಗೆ ಇದೇ ಸ್ಟಾಲಿನ್ ಅಧ್ಯಕ್ಷ.

ಆದರೆ ಹುಟ್ಟುಗುಣವಿತ್ತಲ್ಲ. ಯಾವತ್ತೂ ರೌಡಿ ಬೆಕ್ಕಿನ್ ಕಣ್ ರಾಜೇಂದ್ರನ ಜೊತೆ ಸ್ಟಾಲಿನ್ ಸುತ್ತಾಡುತ್ತಿದ್ದ. ಮತ್ತೊಬ್ಬ ರೌಡಿ ಕಾಲಾಪತ್ಥರ್ ಮುಂದೆ ಕೈಕಟ್ಟಿ ನಿಲ್ಲುತ್ತಿದ್ದ. ತನ್ನ ಕಾಂಗ್ರೆಸ್ ಸ್ಥಾನಮಾನಕ್ಕಿಂತಲೂ ರೌಡಿಗಳ ಜೊತೆ ಕಾಣಿಸಿಕೊಳ್ಳುವುದೇ ಶ್ರೇಯಸ್ಸೆಂದು ಸ್ಟಾಲಿನ್ ಭಾವಿಸಿದ್ದ. ಮೂಲತಃ ಕೇರಳದಿಂದ ವಲಸೆ ಬಂದಿದ್ದ ಆಲ್ಕೋ ಬ್ಯಾಟರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಕಾರ್ಮಿಕನೊಬ್ಬನ ಮಗನಾದ ಸ್ಟಾಲಿನ್‌ನನ್ನು ಬೆಳೆಸಿದ್ದು ಮತ್ತೊಬ್ಬ ಕಾಂಗ್ರೆಸ್ ನಾಯಕ ಸಲೀಂ ಅಹ್ಮದ್. ಎನ್‌ಎಸ್‌ಯುಐ ಪಡ್ಡೆಗಳ ಹಿಂಡಿನಲ್ಲಿ ಸಲೀಂ ಜಿಂದಾಬಾದ್ ಕೂಗಿಕೊಂಡಿದ್ದೇ ಒಂದು ಹಂತಕ್ಕೆ ಬೆಳೆದ ಸ್ಟಾಲಿನ್ ಕ್ರಮೇಣ ಸಲೀಂ ಬೆನ್ನಿಗೇ ಗುನ್ನ ಇಟ್ಟ. ಅದು ಆತನ ಹುಟ್ಟುಗುಣ. ಮುಂದೆ ಎಸ್.ಎಂ. ಕೃಷ್ಣರ ಕಾಲಿಗೆ ಬಿದ್ದು ಕಿಯೋನಿಕ್ಸ್ ಅಧ್ಯಕ್ಷನಾಗಿ ತನ್ನ ಛೇಂಬರ್ ನವೀಕರಣಕ್ಕೆಂದೇ ಎರಡು ಕೋಟಿಯ ಬೋಗಸ್ ಬಿಲ್ ಜಡಿದಿದ್ದ. ಅದನ್ನು ವಿರೋಧಿಸಿದ ಅಧಿಕಾರಿಯೊಬ್ಬರಿಗೆ ಶಿಷ್ಯರನ್ನು ಬಿಟ್ಟು ಹೊಡೆಸಿದ್ದ. ಮುಂದೆ ಧರ್ಮಸಿಂಗ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಕೃಷ್ಣ ಭಕ್ತಿಗೆ ಗುಡ್‌ಬೈ ಹೇಳಿ ಟ್ರಾನ್ಸ್‌ಫರ್ ದಂಧೆ, ಗ್ರಾನೈಟ್ ದಂಧೆ, ಲ್ಯಾಂಡ್ ಗ್ರ್ಯಾಬಿಂಗ್ ಇತ್ಯಾದಿ ದೋ ನಂಬರ್ ದಂಧೆಯಲ್ಲೇ ದುಡ್ಡು ಬಾಚಿಕೊಂಡ.



ನಿರ್ಮಾಣ್ ಡೆವಲಪರ್ಸ್ ಧಣಿ ಲಕ್ಷ್ಮಿ ನಾರಾಯಣ್ ಮತ್ತು ಸ್ಟಾಲಿನ್ ಸೆರೆಸಿಕ್ಕ ಬಸವನಗುಡಿಯ ನಿರ್ಮಾಣ್ ಭವನ

ಈ ಹಂತದಲ್ಲಿ ಈತನಿಗೆ ಜೊತೆಯಾದವನು ಜಯನಗರದ ಗ್ರಾನೈಟ್ ಕ್ರಿಮಿ ಸುರೇಶ. ಈತ ಮೂಲತಃ ತಮಿಳುನಾಡಿನ ಚೆಟ್ಟಿಯಾರ್!



ಸ್ಟಾಲಿನ್

ಇಬ್ಬರೂ ಸೇರಿ ಧರ್ಮಸಿಂಗ್ ಮೂಲಕ ಗಣಿ ಇಲಾಖೆ ನಿರ್ದೇಶಕ ಬಸಪ್ಪರೆಡ್ಡಿಯನ್ನು ಹಿಡಿದಿದ್ದಾರೆ. ಕೊಳ್ಳೇಗಾಲ ಮತ್ತು ಮಲೆ ಮಾದೇಶ್ವರ ಬೆಟ್ಟದ ತಪ್ಪಲಿನ ಶಿಲಾ ಬೆಟ್ಟಗಳಿಗೆ ವಕ್ಕರಿಸಿ ಸಿಕ್ಕಷ್ಟು ದೋಚಿದ್ದಾರೆ. ಹಾಗೇ ಕೊಳ್ಳೇಗಾಲದ ಕಾಡು ಸುತ್ತಾಡಿಕೊಂಡಿದ್ದ ಸ್ಟಾಲಿನ್‌ಗೆ ಡಾ. ರಾಜ್ ಅಪಹರಣದ ರೂವಾರಿ ಮತ್ತು ಎಲ್‌ಟಿಟಿಇ ಬೆಂಬಲಿಗ ಷಣ್ಮುಗ ಸುಂದರಂ ಜೊತೆಯಾಗಿದ್ದು ಕೂಡ ಆಕಸ್ಮಿಕವಾಗಿರಲಿಲ್ಲ. ಈತನ ಮೂಲಕ ವಿನ್ಯಾಸ್ ಕನ್‌ಸ್ಟ್ರಕ್ಷನ್‌ನ ಶ್ರೀಧರ್ ಎಂಬಾತನ ದೋಸ್ತಿಯಾಗಿದೆ.

ಬಸವನಗುಡಿಯ ಕಾರ್ಪೊರೇಷನ್ ಮಾರ್ಕೆಟ್ಟಿನ ಹಿಂದೆ ಯಾವುದೋ ಕಾಲಕ್ಕೆ ಆಫೀಸ್ ಹೊಂದಿದ್ದ ವಿನ್ಯಾಸ್ ಕನ್‌ಸ್ಟ್ರಕ್ಷನ್ ಕಣ್ಣುಮುಚ್ಚಿ ಅದೆಷ್ಟೋ ವರ್ಷಗಳಾದರೂ ಅದಕ್ಕೆ ತನ್ನ ತಂದೆ ಡೈರೆಕ್ಟರಾಗಿದ್ದರು ಎಂಬುದನ್ನೇ ನೆಪ ಮಾಡಿಕೊಂಡು ಶ್ರೀಧರ್ ಲ್ಯಾಂಡ್ ಡೀಲಿಗಿಳಿದಿದ್ದಾರೆ. ಅಷ್ಟಕ್ಕೂ ವಿನ್ಯಾಸ್ ಕನ್‌ಸ್ಟ್ರಕ್ಷನ್‌ನಿಂದ ನಿರ್ಮಾಣ್ ಶೆಲ್ಟರ್ಸ್‌ನ ಲಕ್ಷ್ಮೀನಾರಾಯಣ ಖರೀದಿಸಿದ್ದು ಕೇವಲ ಹದಿಮೂರು ಎಕರೆ ಮಾತ್ರ. ಅದರ ಬಾಬ್ತನ್ನು ಯಾವತ್ತೋ ಪಾವತಿಸಿದ್ದಾಗಿದೆ. ಹಾಗಿದ್ದೂ ಅದೇ ಜಮೀನನ್ನು ಸೈಟೆಂದು ತೋರಿಸಿ ಯಾರಿಗೆಲ್ಲ ವಿನ್ಯಾಸ್ ಖದೀಮರು ವಂಚಿಸಿದ್ದರೋ ಲಕ್ಷ್ಮೀನಾರಾಯಣ್ ಅವರಿಗೂ ಸೈಟು ಕೊಟ್ಟಾಗಿದೆ.

ಶ್ರೀಧರ್‌ಗೂ ವಿನ್ಯಾಸ್ ಕಂಪೆನಿಗೂ ಯಾವುದೇ ಸಂಬಂಧವಿರಲಿಲ್ಲ. ಹಾಗಿದ್ದೂ ಲಕ್ಷ್ಮೀನಾರಾಯಣರಿಂದ ಗಂಟು ದೋಚುವ ಮಾಸ್ಟರ್ ಪ್ಲಾನ್ ರೂಪಿಸಿದ ಪಾಖಂಡಿ ಶ್ರೀಧರ ಅದಕ್ಕೆಂದು ಸ್ಟಾಲಿನ್‌ನನ್ನು ಮುಂದಿಟ್ಟುಕೊಂಡ. ಸ್ಟಾಲಿನ್ ಕೂಡ ಪದೇಪದೇ ಮುತ್ತಪ್ಪ ರೈ ಅಡ್ಡೆಗೆ ಹೋಗಿ ಬಂದು ಮಾಡಿಕೊಂಡಿದ್ದನಲ್ಲ ಅದನ್ನು ಶ್ರೀಧರ್ ನಂಬಿಬಿಟ್ಟ. 'ನನ್ನ ತಂದೆ ಬದುಕಿದ್ದಾಗ ನೀನು ಅವರಿಗೆ ಎರಡು ಕೋಟಿ ಕೊಡಬೇಕಾಗಿತ್ತಲ್ಲ, ಅದನ್ನು ಮುತ್ತಪ್ಪ ರೈ ಮುಂದೆಯೇ ಸೆಟಲ್ ಮಾಡು' ಎಂದು ಶ್ರೀಧರ್ ರೋಪು ಹಾಕುತ್ತಿದ್ದರೆ, ಸ್ಟಾಲಿನ್ ಫೋನೆತ್ತಿಕೊಂಡು ತನ್ನನ್ನೇ ರೈ ಕಳಿಸಿದ್ದಾರೆಂದು ಹೂಂಕರಿಸಿದ್ದ.

ಇಷ್ಟೇ ಆಗಿದ್ದರೆ ನಿರ್ಮಾಣ್ ಧಣಿ ನಂಬುತ್ತಿರಲಿಲ್ಲ. ಆದರೆ ಸ್ಟಾಲಿನ್ ಅದಕ್ಕೆಂದು ಆನೇಕಲ್ ಬಿಜೆಪಿ ಶಾಸಕ ನಾರಾಯಣಸ್ವಾಮಿಯನ್ನು ಮುಂದಿಟ್ಟುಕೊಂಡ. ನಾರಾಯಣಸ್ವಾಮಿಯೇ ಫೋನ್ ಮಾಡಿ 'ನಾನು ಮುತ್ತಪ್ಪ ರೈ ಕಡೆಯವರನ್ನು ಕಳಿಸುತ್ತಿದ್ದೇನೆ, ಮಾತಾಡಿ ಸೆಟಲ್ ಮಾಡ್ಕೋ' ಎಂದು ಲಕ್ಷ್ಮೀನಾರಾಯಣ್‌ಗೆ ಫೋನ್ ಮಾಡಿದ್ದಕ್ಕೆ ದಾಖಲೆಗಳಿವೆ. ಎಮ್ಮೆಲ್ಲೆಯೇ ಫೋನ್ ಮಾಡಿದ ಮೇಲೆ ಇನ್ನೇನು?

ಇದೇ ಹುಮ್ಮಸ್ಸಿಗೆ ಬಿದ್ದ ಸ್ಟಾಲಿನ್ 'ಎರಡು ಕೋಟಿ ರೆಡಿ ಮಾಡ್ಕೋ ಸಂಜೆ ಬರ್ತೀನಿ' ಎಂದಿದ್ದಾನೆ. ಆಗಸ್ಟ್ ಒಂದನೇ ತಾರೀಖಿನ ರಾತ್ರಿ ಶ್ರೀಧರನ ಜೊತೆ ಎಂಟು ಮಂದಿ ಪೋರ್ಕಿಗಳನ್ನು ರೆಡಿ ಮಾಡಿಕೊಂಡ ಸ್ಟಾಲಿನ್ ಇನ್ನೇನು ಬಸವನಗುಡಿಯ ನಿರ್ಮಾಣ್ ಭವನವನ್ನು ಹೊಕ್ಕಿ ಲಕ್ಷ್ಮೀನಾರಾಯಣ್‌ನನ್ನು ಹೊತ್ತೊಯ್ಯಬೇಕೆನ್ನುವಷ್ಟರಲ್ಲಿ ಸಿಸಿಬಿಯ ಡಿಸಿಪಿ ರವಿಕಾಂತೇಗೌಡರ ಪಡೆ ಸುತ್ತುವರಿದಿದೆ. ಎಳೆದೊಯ್ದು ಲಾಕಪ್ ಸನ್ಮಾನವನ್ನೂ ಮಾಡಿದೆ.

ಸ್ಟಾಲಿನ್‌ಗಿದು ಬೇಕಿತ್ತಾ? ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುತ್ತಾ? ನಿಜಕ್ಕೂ ಬಿಲ್ಡರ್‌ನನ್ನು ಆತ ರೈ ಬಳಿ ಎಳೆದೊಯ್ಯುತ್ತಿದ್ದನಾ? ಅಥವಾ ಇದು ಆನೇಕಲ್ ಬಿಜೆಪಿ ಶಾಸಕ ನಾರಾಯಣಸ್ವಾಮಿ ಮತ್ತು ಸ್ಟಾಲಿನ್ ಸೇರಿಕೊಂಡೇ ಎರಡು ಕೋಟಿ ದೋಚಲು ಹಾಕಿದ ಸ್ಕೆಚ್ಚಾ?

ಪೊಲೀಸರೇ ಉತ್ತರಿಸಬೇಕು.

-ರಾ.ಸೋ.

ಮುಂಗಾರು ಮಳೆಯೂ... ಸುಬ್ಬರಾವ್‌ನ ಕೊಲೆಯೂ...!

ಮಂಗಳೂರು

ಆಷಾಢ ಮಾಸದ ಭರ್ಜರಿ ಮಳೆಯಲ್ಲೂ ಮಂಗಳೂರಿನಲ್ಲಿ ಮಾತ್ರ ಎಲ್ಲರ ಬಾಯಲ್ಲೂ ಮುಂಗಾರು ಮಳೆಯದ್ದೇ ಮಾತು. ಮಂಗಳೂರಿನಲ್ಲಿ ಮುಂಗಾರು ಮಳೆಯನ್ನು ಮೇನಿಯಾ ಮಾಡಿದ್ದು ವಂದನಾ, ಶೃತಿ ಮತ್ತು ಸ್ವಾತಿ ಹೆಸರಿನ ಜವ್ವನೆಯರು ನಟಿಸಿದ ಬ್ಲೂಫಿಲಂ ಸಿ.ಡಿ. ವಂದನಾ ಮಂಗಳೂರಿನ ಬೆಸೆಂಟ್ ಶಾಲೆಯ ಬಳಿಯ ಫ್ಯಾನ್ಸಿ ಅಂಗಡಿ ಒಂದರಲ್ಲಿ ಹೆಸರಿಗೆ ಸೇಲ್ಸ್ ಗರ್ಲ್. ಆಕೆ ಕಂಡುಬರುವುದು ಪಕ್ಕದ ಜಿಮ್ ಒಂದರಲ್ಲಿ ಜಾಸ್ತಿ. ಕಾಲೇಜು ಹುಡುಗಿ ಕಾರ್ ಸ್ಟ್ರೀಟ್‌ನ ಸ್ವಾತಿ ಪೈ, ಕೆ. ಐ. ವಿದ್ಯಾರ್ಥಿನಿ ಪುತ್ತೂರಿನ ಶೃತಿ ಮಂಗಳೂರಿನಲ್ಲಿ ಇತ್ತೀಚೆಗೆ ಹಣ ಮತ್ತು ಶೋಕಿಗಾಗಿ ಹಾದಿ ತಪ್ಪುತ್ತಿರುವ ಅನೇಕ ಹುಡುಗಿಯರ ಪೈಕಿ ಮೂವರಷ್ಟೆ. ಆದರೆ ಬೇರ್‍ಯಾರಿಗೂ ಸಿಗದ ಪ್ರಚಾರ, ಏನೂ ಉಳಿಯದಂತೆ ವಿವರ, ಅಷ್ಟಗಲ ಫೋಟೋಗಳು ಪ್ರಕಟವಾಯಿತ್ತಲ್ಲದೇ, ಟಿವಿ 9ನ 'ವಾರೆಂಟ್'ನಲ್ಲಿ ಇವರು ನಟಿಸಿದ ಬ್ಲೂಫಿಲಂನ ಸ್ಟಿಲ್‌ಗಳೂ ಬಿತ್ತರಗೊಂಡ ಮೇಲೆ ಕೇಳಬೇಕೆ?


200 ದಿನ ದಾಟಿದ ಮುಂಗಾರು ಮಳೆ ಸಿನಿಮಾವನ್ನು ಮೀರಿ ಪ್ರಸಿದ್ಧಿ ಪಡೆದ ಮುಂಗಾರು ಮಳೆಯನ್ನು ವಿಲಕ್ಷಣವಾಗಿ ಪ್ರಸ್ತುತಪಡಿಸಲು ಹೋದ ಟಿವಿ9ಗೆ ಬ್ಲೂಫಿಲಂನ ಹೀರೋ ಹೀರೋಯಿನ್ ಥರಾ ಚಿತ್ರಿಸಲು ಸಿಕ್ಕಿದ್ದು ಮಾತ್ರ ಶಾಪಿಂಗ್‌ಗೆ ಬೈಕ್‌ನಲ್ಲಿ ಬಂದು ಹಿಂತಿರುಗುತ್ತಿದ್ದ ದಂಪತಿಗಳು. ಪ್ರಕರಣದ ಕಾಮೆಂಟರಿಗೆ ಪದೇ ಪದೇ ತೋರಿಸುತ್ತಾ ಪುಕ್ಕಟೆ ಆಹಾರವಾದರು. ಅದರ ಪರಿಣಾಮವೇ ಮರುದಿನ ಟಿವಿ9ನ ಕಚೇರಿ ಅಪ್ಪಚ್ಚಿಯಾದದ್ದು. ಗಂಡ-ಹೆಂಡತಿ ಮನೆಯಲ್ಲಿ ರಾತ್ರಿ ಊಟ ಮಾಡಿ ನಿದ್ದೆಗೆ ಜಾರುವ ಮುನ್ನ ಟಿ.ವಿ. ನೋಡುತ್ತಾ ಸ್ವತಃ ಬ್ಲೂಫಿಲಂನ ಹೀರೋ ಹೀರೋಯಿನ್ ಆಗಿ ಬಿಂಬಿತವಾದರೆ ಅವರ ಮನಸ್ಥಿತಿ ಹೇಗಿರಬೇಡ?

ಒಟ್ಟಾರೆ ಈ ದಾಳಿ ಸದರಿ ವರದಿಯನ್ನು ಚಿತ್ರಿಸಿದ ವರದಿಗಾರನ ಅವಿವೇಕದ ಫಲ. ಹಾಗಂತ ಈ ದಾಳಿ ಸಮರ್ಥ ನ್ಯಾಯವೇನಲ್ಲ. ಈ ದಾಳಿಯ ನಂತರ ನಡೆದ ಖಂಡನೆಯ ಹೈಪೋಟ ಮಾತ್ರ ಹೇಸಿಗೆ ಹುಟ್ಟಿಸುವಂತಹುದು. ಸುದ್ದಿ ಕೇಳಿದ ಕ್ಷಣದಲ್ಲೇ ಉಳ್ಳಾಲದ ಶಾಸಕ ಯು.ಟಿ. ಖಾದರ್ ಎಲ್ಲವನ್ನು ಬಿಟ್ಟು ಅಲ್ಲಿ ಹಾಜರಾದರೆ, ರಮಾನಾಥ ರೈ ಕೂಡ ಎದ್ದನೋ ಬಿದ್ದನೋ ಎಂದು ಧಾವಿಸಿ ಬಂದರು. ಅದೆಲ್ಲಾ ಟಿ.ವಿ.ಯಲ್ಲಿ ಬಿತ್ತರಗೊಳ್ಳಲು ತೊಡಗಿದೊಡನೆ ಘಟನೆಯನ್ನು ಖಂಡಿಸಲು ಮಂಗಳೂರಿನ ರಾಜಕಾರಣಿಗಳಲ್ಲಿ ಸ್ಪರ್ಧೆಯೇ ಏರ್ಪಟ್ಟಿತು. ಅಸಹ್ಯದಿಂದ ಹಾಸಿಗೆ ಹಿಡಿದವರು ಕೂಡಾ ದಡಬಡಾಯಿಸಿ ಓಡಿ ಬಂದು ಮೊಸಳೆ ಕಣ್ಣೀರು ಸುರಿಸಿ ಹೋದರು.

ಆದರೆ ಅದೇ ದಿನ ಮಂಗಳೂರಿನ ಬೆಸೆಂಟ್ ಸ್ಕೂಲ್ ಬಳಿ 'ಮಾಜಾ' ಹೆಸರಿನ ಹುಡುಗರ ಹಾಸ್ಟೆಲ್‌ವೊಂದರ ಮೇಲೆ ರ್‍ಯಾಗಿಂಗ್ ನೆಪದಲ್ಲಿ ದಾಳಿ ನಡೆದಿತ್ತು. ಮುಸ್ಲಿಮರು ನಡೆಸುವ ಈ ಹಾಸ್ಟೆಲ್‌ಗೆ ನುಗ್ಗಿ ದಾಂಧಲೆ ಎಬ್ಬಿಸಿದ್ದು ಭಜರಂಗಿಗಳು. ಅಲ್ಪಸಂಖ್ಯಾತರ ಹಿತರಕ್ಷಕನಂತೆ ಪೋಸು ಕೊಡುವ ರಮಾನಾಥ ರೈಯಾಗಲೀ, ಯು.ಟಿ.ಖಾದರ್ ಆಗಲೀ ಅತ್ತ ತಲೆಯೇ ಹಾಕಲಿಲ್ಲ. ಟಿವಿ9 ದಾಳಿಯ ನಡುವೆ ಹಾಸ್ಟೆಲ್ ದಾಳಿ ದೊಡ್ಡ ಸುದ್ದಿಯೇ ಆಗಲಿಲ್ಲ.

ಮಳೆಯಲ್ಲಿ ತೊಯ್ದು ತಣ್ಣಗಾದ ಪೊಲೀಸರು

ಮೇಯಲು ಹುಲುಸಾದ ಹುಲ್ಲುಗಾವಲಿನಂತಿರುವ (ಡಿ.ಸಿ.ಐ.ಬಿ.) ಅಪರಾಧ ಪತ್ತೆ ದಳದಲ್ಲಿ ಒಳ್ಳೆ ಸ್ಥಾನ



ಕೊಲೆಯಾದ ಸುಬ್ಬರಾವ್

ಗಿಟ್ಟಿಸಿಕೊಂಡ ಪೊಲೀಸಪ್ಪರಿಗೆ ಅಲ್ಲಿಂದ ಕದಲಲು ಮನಸ್ಸೇ ಆಗಲ್ಲ. ಪ್ರವೃತ್ತಿಯಲ್ಲಿ ಬಡ್ಡಿ ದಂಧೆ ಮಾಡುತ್ತಾ ದುಂಡಗಾಗುತ್ತಿರುವ ಇಲ್ಲಿನ ಪೊಲೀಸರ ಬಗ್ಗೆ ಬರೆದರೆ ಅದೇ ಒಂದು ಪುರಾಣ. ಇವರಿಗೆ ಪ್ರಮುಖ ಆದಾಯ ಮೂಲವೇ ವೇಶ್ಯಾವಾಟಿಕೆಯಿಂದ ಬರುವ ಮಾಮೂಲು.

ಯಾವಾಗ ಮುಂಗಾರು ಮಳೆ ಫೇಮಸ್ ಆಯಿತೋ, ಡಿ.ಸಿ.ಐ.ಬಿ. ಪೊಲೀಸರು ಮೂವರು ಹುಡುಗಿಯರನ್ನು ಬಂಧಿಸಿ ಪರಾಕ್ರಮ ತೋರಿದರು. ತನಿಖೆಯೂ ಸ್ವಲ್ಪ ಜೋರಾಗಿಯೇ ನಡೆಸಿ ಸಿಡಿ ಪೊಲೀಸರ ಕೈಗೆ ಹಸ್ತಾಂತರಿಸಿದರು. ಲಾಡ್ಜೊಂದರಲ್ಲಿ ಕೂಡಿ ಹಾಕಿ ತನಿಖೆ ನೆಪದಲ್ಲಿ ಮಾಡಬಾರದ್ದನ್ನೆಲ್ಲಾ ಮಾಡಿದ್ದಾರೆ. ಶ್ರೀಮಂತ ಹೆಣ್ಣು ಬಾಕ ಗಿರಾಕಿಗಳನ್ನು ಕರೆಸಿ ಕಮಾಯಿಸಿದ್ದಾರೆ ಎನ್ನುವ ಸುಳಿವು ಸಿಕ್ಕಿದೆ. ಸದ್ಯ ಹುಡುಗಿಯರು ರಿಮ್ಯಾಂಡ್ ಹೋಂನಲ್ಲಿದ್ದಾರೆ. ಅಪರಾಧ ಪತ್ತೆ ದಳದ ಪೋಲಿ ಪೊಲೀಸರನ್ನು ತನಿಖೆ ಮಾಡುವುದಕ್ಕೆ ಯಾರು ಬರಬೇಕು?



ವಂದನಾ

ತಾನೇ ಹೆಣೆದ ಬಲೆಗೆ ಬಿದ್ದು ಹೆಣವಾದ ಸುಬ್ಬರಾವ್!

ಮುಂಗಾರು ಮಳೆಯ ವಿಚಾರ ತಣ್ಣಗಾಗಬೇಕಾದರೆ ಮಂಗಳೂರಿನಲ್ಲಿ ಬಿಲ್ಡರ್ ಸುಬ್ಬರಾವ್‌ನ ಹೆಣ ಬೀಳಬೇಕಾಯಿತು. ಮಂಗಳೂರಿನ ಮಟ್ಟಿಗೆ ಬ್ಲೂಫಿಲಂಗೆ ಈ ಸುಬ್ಬರಾವ್‌ನೇ ಪಿತಾಮಹ. ಜಮಾನದಲ್ಲಿ ಮಂಗಳೂರಿನಲ್ಲಿ ಸೊಪ್ಪು ಮಾರುತ್ತಿದ್ದ ಸುಬ್ಬರಾವ್ ಅದೇ ಸೆಂಟ್ರಲ್ ಮಾರ್ಕೆಟ್‌ನ ಹಾದಿಯಲ್ಲಿ ಸಣ್ಣದೊಂದು ಕ್ಯಾಸೆಟ್ ಅಂಗಡಿ ಇಟ್ಟು ಕೂತವ ಮತ್ತೆ ತಿರುಗಿ ಹಿಂದಕ್ಕೆ ನೋಡುವ ಪ್ರಮೇಯವೇ ಬರಲಿಲ್ಲ. ಕ್ಯಾಸೆಟ್ ಮಾರುತ್ತಲೇ ದಕ್ಷಿಣ ಭಾರತದ ಹಿಂದಿ ಕ್ಯಾಸೆಟ್‌ಗಳ ಡೀಲರ್ ಆದ. ಮಯೂರ ಹೆಸರಿನ ವೀಡಿಯೋ ಸಂಸ್ಥೆ ಕಟ್ಟಿದ. ಬ್ಲೂಫಿಲಂಗಳನ್ನು ಸ್ವತಃ ನಿರ್ಮಿಸಿ, ತನ್ನದೇ ವಿಡಿಯೋ ಪಾರ್ಲರ್‌ಗಳಲ್ಲಿ ಪ್ರದರ್ಶಿಸಿ ಕಮಾಯಿಸಿದ. ಸುಬ್ಬರಾವ್ ಬ್ಲೂ ಫಿಲಂಗಳಿಗಿಂತಲೂ ಹೆಚ್ಚು ಕಮಾಯಿ ಮಾಡಿದ್ದು ನಕಲಿ ಸಿನಿಮಾ ವಿಡಿಯೋ ಸಿ.ಡಿ.ಗಳ ತಯಾರಿಕೆಯಲ್ಲಿ. ನಕಲಿ ಕ್ಯಾಸೆಟ್, ಬ್ಲೂಫಿಲಂ ಎಂದು ಪೊಲೀಸರು ರೇಡ್ ಮಾಡೋದು, ಸಿಕ್ಕಿ ಬಿದ್ದು ಬಂಧನವಾಗೋದು ಸುಬ್ಬರಾವ್‌ಗೆ ಮಾವನ ಮನೆಗೆ ಹೋಗಿ ಬಂದಷ್ಟೇ ಸಲೀಸಾಗಿತ್ತು.

ಕೊನೆಗೆ ಪೊಲೀಸರ ಕಾಟದಿಂದ ರಕ್ಷಣೆ ಪಡೆಯಲು ತನ್ನ ಸಖ ಸುದೇಶ್‌ಕುಮಾರನನ್ನು ಮುಂದೆ ಬಿಟ್ಟು ಕರಾವಳಿ ಮಾರುತ ಎಂಬ ಸಂಜೆ ದೈನಿಕವನ್ನು ಹೊರತಂದ. ಆನಂತರ ಪೊಲೀಸರ ಕಾಟ ಕೊಂಚ ತಪ್ಪಿತ್ತಾದರೂ, ಪತ್ರಿಕಾ ಪ್ರತಿಸ್ಪರ್ಧಿ 'ಕರಾವಳಿ ಅಲೆ'ಯ ಕಾಟ ಶುರುವಾಯಿತು. ಕರಾವಳಿ ಅಲೆಯಲ್ಲಿ ಸುಬ್ಬರಾವ್‌ನ ರೋಚಕ ಸುದ್ದಿಗಳು ಧಾರಾವಾಹಿಯಂತೆ ಪ್ರಕಟವಾಗಲು ಶುರುವಾಯಿತು. ಇದರಿಂದ ಹೈರಾಣಾದ ಸುಬ್ಬರಾವ್ ಸಂಜೆ ಪತ್ರಿಕೆಗೆ ಇತಿಶ್ರೀ ಹೇಳಿ ಅದನ್ನೇ ವಾರಪತ್ರಿಕೆ ಮಾಡಿ ಅಲೆಯ ಕಾಟದಿಂದ ಚೇತರಿಸಿಕೊಂಡ. ಅಷ್ಟೊತ್ತಿಗೆ ದೋ ದಂಧೆಯಿಂದ ಸಾಕಷ್ಟು ಹಣ ಮಾಡಿದ್ದ ಸುಬ್ಬರಾವ್‌ಗೂ ಅದು ಸಾಕಾಗಿತ್ತು. ಬಸ್ಸುಗಳು, ಫೈನಾನ್ಸ್, ಕುರಿ ಫಂಡು ಎಂದೆಲ್ಲಾ ಹಣ ತೊಡಗಿಸಿ ಸಭ್ಯತೆಯ ದಾರಿ ಹಿಡಿದು ತನ್ನ ಊರಾದ ಬಂಟ್ವಾಳದ ಕನಪಾಡಿಯಲ್ಲಿ ದೇವಸ್ಥಾನದ ಪೂಜಾರಿ ಸ್ಥಾನ ಪಡೆದು ದೇವರ ಸೇವೆಗೆ ನಿಂತ. ಕಳೆದೆರಡು ವರ್ಷಗಳಿಂದ ಬ್ಲೂಫಿಲಂ ಸುಬ್ಬರಾವ್ ಹಳೆಯ ಇಮೇಜಿನಿಂದ ಮುಕ್ತನಾಗಿ ಬಿಲ್ಡರ್ ಸುಬ್ಬರಾವ್ ಎಂದೇ ಮಂಗಳೂರಿನಲ್ಲಿ ಪ್ರಚಲಿತನಾದ. ಸುಬ್ಬರಾವ್ ಕಪ್ಪು ದಂಧೆ ಬಿಟ್ಟು ವೈಟ್ ಆದದ್ದೇ ಭೂಗತ ನೆರಳು ಹಿಂಬಾಲಿಸತೊಡಗಿತು. ಎರಡು ವರ್ಷಗಳ ಹಿಂದೆ ದುಬೈಯಲ್ಲಿ ಕೂತ ಉದು ಪಿಯ ಕೊರಗ ಶೆಟ್ಟಿ ದೊಡ್ಡ ಮೊತ್ತಕ್ಕಾಗಿ ಪೀಡಿಸಿದಾಗ ಹಣ ಕೊಟ್ಟು ಸೆಟ್ಲ್ ಮಾಡಿಸಿಕೊಂಡಿದ್ದ. ಇದು ತಿಳಿದದ್ದೇ ದೊಡ್ಡ ಮೊತ್ತದ ಡೀಲ್‌ಗೆ ಇಳಿದದ್ದು ಬನ್ನಂಜೆ ರಾಜಾ. ಬನ್ನಂಜೆ ಶಿಷ್ಯ ಪಾಜೆ ಎಂಬಾತ ಸುಬ್ಬರಾವ್ ಬೆನ್ನಿಗೆ ಬಿದ್ದು ಹಫ್ತಾಕ್ಕಾಗಿ ಪೀಡಿಸತೊಡಗಿದ.

ಆದರೆ ಪಾಜೆಯ ಥ್ರೆಟ್‌ಗೆ ಜಗ್ಗದ ಸುಬ್ಬರಾವ್ ತನ್ನ ಸಖ ಸುದೇಶ್‌ಕುಮಾರ್ ಮೂಲಕ ಪೊಲೀಸರಿಗೆ ಫಿಟ್ಟಿಂಗ್ ಇಟ್ಟ. ಅದೊಂದು ದಿನ ಈತನನ್ನು ಉಪಾಯವಾಗಿ ಬಂಧಿಸಿದ ಬಂದರು ಸಬ್‌ಇನ್ಸ್‌ಪೆಕ್ಟರ್ ಪಿ.ಎ. ಹೆಗ್ಡೆ ಸುಬ್ಬರಾವ್‌ನ ಕಚೇರಿ ಸಮೀಪವೇ ಇರುವ ವಸಂತ ಮಹಲ್‌ನ ರೂಮೊಂದರಲ್ಲಿ ಕೂಡಿಹಾಕಿ ಬಾಯಿ ಬಿಡಿಸಿದ್ದ. ಎಲ್ಲಾ ವಿವರ ಪಡೆದು ಎನ್‌ಕೌಂಟರ್‌ನಲ್ಲಿ ಪರಲೋಕಕ್ಕಟ್ಟಿದ್ದರು. ಈ ಎಲ್ಲಾ ವಿವರಗಳು ಹೊರ ದೇಶದಲ್ಲಿ ಕುಳಿತೇ ಸಂಗ್ರಹಿಸಿದ ಬನ್ನಂಜೆ ರಾಜನಿಗೆ ತೀವ್ರ ಮುಖಭಂಗವಾಗಿತ್ತು. ತನ್ನ ಮಾರ್ಕೆಟ್ ಉಳಿಯಬೇಕಾದ್ರೆ ಸುಬ್ಬರಾವ್‌ನನ್ನು ಮುಗಿಸೋದು ಬನ್ನಂಜೆ ರಾಜನಿಗೆ ಬೇಕಾಗಿತ್ತು. ಆ ಕೆಲಸವನ್ನು ತನ್ನ ಸಹಚರರ ಕೈಯಲ್ಲಿ ನೀಟಾಗಿ ಮುಗಿಸಿದ ಬನ್ನಂಜೆ ಇದೀಗ ಸುಬ್ಬರಾವ್‌ನನ್ನು ಕೊಂದಿದ್ದು ನಾನೇ ಎಂದು ಫೋನ್‌ನಲ್ಲಿ ಸ್ವತಃ ಮಾಧ್ಯಮದ ಮಂದಿಗೆ ತಿಳಿಯಪಡಿಸುತ್ತಿದ್ದಾನೆ. ಬ್ಲೂಫಿಲಂನಿಂದ ಭಡ್ತಿ ಹೊಂದಿ ಬಿಲ್ಡರ್ ಆದ ಸುಬ್ಬರಾವ್‌ನ ಕೊಲೆಯಿಂದ ಮಂಗಳೂರಿನ ಬಿಲ್ಡರ್‌ಗಳಿಗೆ, ರಿಯಲ್ ಎಸ್ಟೇಟ್ ಒಡೆಯರುಗಳಿಗೆ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವವಾಗಿದೆ.

-ಭೂಮಿಕಾ

ಗ್ರಹವನ್ನೇ ನಾಶ ಮಾಡುತ್ತಾ ಅದರ ಮೇಲೊಂದು ಸುಂದರ ಗೃಹವನ್ನು ನಿರ್ಮಿಸಿದರೆ ಏನು ಪ್ರಯೋಜನ? -ಹೆನ್ರಿ ಡೇವಿಡ್ ಥೊರೋ

ಟಗರುಗಳ ಕಾಳಗದಲ್ಲಿ ಸಿಕ್ಕಿಕೊಂಡ ಎಸ್ಪಿ ರಮೇಶ್

ಹಾವೇರಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಎಸ್ಪಿಯೇ ಇರಲಿಲ್ಲ. ಆ ಜಾಗೆಯನ್ನು ಮೊನ್ನೆ ಜಿ. ರಮೇಶ್ ಅಲಂಕರಿಸಿ ಮಟ್ಕಾ, ಜೂಜು, ಅಕ್ರಮ ಬಿಲ್ಡರ್‌ಗಳನ್ನೆಲ್ಲ ರಾತ್ರೋರಾತ್ರಿ ಅಂದರ್ ಹಾಕಿ ಜಿಲ್ಲೆಯ ಜನರಲ್ಲಿ ಆಶಾಭಾವನೆಯನ್ನು ಮೂಡಿಸಿದ್ದರು. ಆದರೆ ಈಗ ನೋಡಿದರೆ ನಿಜವಾದ ಮತ್ತು ರಾಜಕೀಯವಾದ ಟಗರುಗಳ ಕಾಳಗದಲ್ಲಿ ಸಿಕ್ಕಿಹಾಕಿಕೊಂಡು ವಿಲವಿಲ ಒದ್ದಾಡುತ್ತಿದ್ದಾರೆ.




ಅದು ಆದದ್ದು ಹೀಗೆ.....

ಇತ್ತೀಚೆಗೆ ಟಗರುಗಳ ಮೇಲೆ ಬಾಜಿ ಕಟ್ಟುವ ಜೂಜು ದಂಧೆ ಎಲ್ಲೆಡೆಯಿಂದ ಮರೆಯಾಗುತ್ತಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಇದು ಸದ್ದಿಲ್ಲದೇ ನಡೆಯುತ್ತಿದೆ ಮಾತ್ರವಲ್ಲ ಇದನ್ನು ಹಿರಿಯ ರಾಜಕಾರಣಿಗಳ ಸಂಬಂಧಿಕರು ನಡೆಸುತ್ತಿದ್ದು ಲಕ್ಷಾಂತರ ರೂಪಾಯಿಗಳ ಲಾಭ ತರುವ ದಂಧೆಯಾಗಿದೆ. ಉದಾಹರಣೆಗೆ ಮಾಜಿ ಮದ್ಯದ ದೊರೆ ಹಾಗೂ ಹಾಲಿ ಎನ್.ಡಬ್ಲ್ಯೂ.ಎಸ್.ಆರ್.ಟಿ.ಸಿ.ಯ ಅಧ್ಯಕ್ಷ ಚೆಡ್ಡಿ ಅಶೋಕ ಕಾಟ್ವೆ ಎಂಬಾತನ ಮಗ ವೆಂಕಟೇಶ ಕಾಟ್ವೆ ಹರಿಹರದ ಸುರೇಶ ಎಂಬುವನೊಂದಿಗೆ ಸೇರಿ ರಾಣೆಬೆನ್ನೂರ ಮತ್ತು ಹುಬ್ಬಳ್ಳಿ ನಡುವೆ ಹೆದ್ದಾರಿಗೆ ಹೊಂದಿಕೊಂಡ ಜಾಗೆಗಳಲ್ಲಿ ಈ ಟಗರಿನ ಕಾಳಗಗಳನ್ನು ಏರ್ಪಡಿಸುತ್ತಾರೆ. ವಾರಕ್ಕೊಮ್ಮೆ ಕೇವಲ ಒಂದು ತಾಸು ನಡೆಯುವ ಈ ದಂಧೆಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಗಳಿಸುತ್ತಿದ್ದಾರೆ. ವೆಂಕಟೇಶ ಕಾಟ್ವೆ ಜೊತೆ ಈ ದಂಧೆಯಲ್ಲಿ ಕಂದಾಯ ಮಂತ್ರಿ ಜಗದೀಶ ಶೆಟ್ಟರನ ಸಹೋದರನ ಮಗರೋಹಿತ ಅಶೋಕ ಶೆಟ್ಟರ, ವಿಕ್ಕಿ ಖೋಡೆ, ದೀಪಕ ಮತ್ತು ಅನಿಲ ಮೆಹರ್ವಾಡೆ, ಗದಗಿನ ಸಂಜೀವ ಬೇವಿನಕಟ್ಟಿ, ಹಾವೇರಿಯ ಜಾಕೀರ್ ಹುಸೇನ್ ಭಾಗಿದಾರರಾಗಿದ್ದಾರೆ.

ಮೊದಲು ಹುಬ್ಬಳ್ಳಿ ಹತ್ತಿರದ ವರೂರ, ತಡಸ ಕ್ರಾಸ್, ನಂತರದಲ್ಲಿ ಹಾವೇರಿ ಹತ್ತಿರದ ದೇವಗೇರಿಗೆ ಸ್ಥಳಾಂತರಗೊಂಡ ಈ ದಂಧೆ ಆನಂತರ ಶಿಗ್ಗಾವಿಯ ಬಿಸನಳ್ಳಿಯಲ್ಲಿ ಠಿಕಾಣಿ ಹೂಡಿತು. ಹುಬ್ಬಳ್ಳಿಯ ಕಮರಿಪೇಟೆಯ ತನ್ನ ಚೆಡ್ಡಿ ದೋಸ್ತ್ ವಿನಾಯಕ ಬದ್ದಿಯ ಟಗರಿಗೆ 'ಕರ್ನಾಟಕ ಸುಪುತ್ರ' ಎಂದು ಹೆಸರಿಟ್ಟು, ಅದಕ್ಕೆ ಎದುರಾಳಿಯಾಗಿ ಮಧು ಎಂಬುವವನಿಗೆ ಸೇರಿದ 'ಬಸ್ಯಾ' ಎಂಬ ಹೆಸರಿನ ಇನ್ನೊಂದು ಟಗರಿನ ನಡುವೆ ಕಾಳಗಗಳು ಏರ್ಪಡುತ್ತಿದ್ದವು. ಕನಿಷ್ಠವೆಂದರೂ ಒಂದು ಆಟಕ್ಕೆ ಒಂದು ಟಗರಿನ ಮೇಲೆ 20 ಲಕ್ಷ ಬೆಟ್ಟಿಂಗ್ ಆಗುತ್ತಿತ್ತು ಎಂದು ಹೇಳಲಾಗುತ್ತಿದೆ. ಏಕೆಂದರೆ ಸಾಹುಕಾರರೂ ಈ ಜೂಜಿನಲ್ಲಿ ಪಾಲ್ಗೊಳ್ಳುವುದು ಈಗ ಹೆಚ್ಚಾಗಿದೆ. ಮೊನ್ನೆ ರೇಡ್ ಆದಾಗ ಸಿಕ್ಕಿದ್ದ ವಾಹನಗಳ ಕಿಮ್ಮತ್ತೇ ಒಂದು ಕೋಟಿ ರೂಪಾಯಿಗಳನ್ನು ಮೀರುತ್ತಿತ್ತು ಎಂದರೆ ನೀವೇ ಲೆಕ್ಕ ಹಾಕಿ.

ಮಾರುವೇಷದಲ್ಲಿ ಎಸ್ಪಿ

ಬಿಸನಳ್ಳಿಯ ಹತ್ತಿರ ಇಂತಹದ್ದೊಂದು ಜೂಜು ನಡೆಯಲಿದೆ ಎಂದು ಸುಳಿವು ಸಿಕ್ಕಾಗ ಎಸ್ಪಿ ರಮೇಶ್ ಮಾರುವೇಷದಲ್ಲಿ ಅಲ್ಲಿಗೆ ಹೋಗಿದ್ದಾರೆ. ಸ್ವಲ್ಪಕಾಲ ತಾವೂ ಅದರಲ್ಲಿ ಭಾಗವಹಿಸಿ ರೇಡ್ ಮಾಡಿದ್ದಾರೆ. ಆಗ ಬೈಕ್ ಇದ್ದವರು ಪೊಲೀಸರ ಕೈಗೆ ಸಿಕ್ಕಿಹಾಕಿಕೊಳ್ಳದೆ ಎಸ್ಕೇಪ್ ಆದರೆ, ಕಾರು ಮತ್ತು ಜೀಪುಗಳಲ್ಲಿ ಬಂದಿದ್ದವರು ಸಿಕ್ಕಿಹಾಕಿಕೊಂಡಿದ್ದಾರೆ. ರೇಡ್‌ನಲ್ಲಿ ಸಿಕ್ಕಿದ್ದವರನ್ನೆಲ್ಲ ಶಿಗ್ಗಾವಿ ಸ್ಟೇಷನ್‌ಗೆ ಎಳೆದು ತಂದು ಅವರಿಂದ ಹಣ, ಬೆಳ್ಳಿ, ಬಂಗಾರವನ್ನೆಲ್ಲ ವಶಪಡಿಸಿಕೊಂಡು ಗುಡ್ಡೆ ಹಾಕಿ ಲೆಕ್ಕಹಾಕಿದ್ದಾರೆ. ಅವತ್ತು ಪತ್ರಿಕಾ ಗೋಷ್ಠಿ ನಡೆಸಿ "ಒಟ್ಟು 1.5 ಲಕ್ಷ ರೂ., 4 ಲಕ್ಷ ಬಂಗಾರ, ವಾಹನ, ಮೊಬೈಲ್ ಎಲ್ಲ ಸೇರಿ




60 ಲಕ್ಷ ಹಿಡಿದಂತಾಯಿತು" ಎಂದು ರಮೇಶ್ ಬೀಗಿದ್ದರು.

ತಮಾಷೆಯ ಸಂಗತಿ ಎಂದರೆ ಪೊಲೀಸರ ಈ ಲೆಕ್ಕ ಕೇಳಿದ ರೇಡಿನಲ್ಲಿ ಸಿಕ್ಕಿಬಿದ್ದಿದ್ದ ಜನ ಖಾಕಿಗಳೊಂದಿಗೆ ಜಗಳಕ್ಕೆ ಬಿದ್ದರು. "ಹರಿಹರ ಮತ್ತು ದಾವಣಗೆರೆಯ ಜನ ಬಾಜಿಗಿಟ್ಟಿದ್ದೇ ಮೂರರಿಂದ ನಾಲ್ಕು ಲಕ್ಷ ರೂಪಾಯಿಗಳಿದ್ದವು. ಅದರೊಂದಿಗೆ ಹುಬ್ಬಳ್ಳಿ, ಬೆಳಗಾವಿ, ಹಾವೇರಿಯಿಂದ ಬಂದಿದ್ದ ಹಣ ಸೇರಿಸಿದರೆ ಏಳರಿಂದ ಎಂಟು ಲಕ್ಷವಾಗುತ್ತದೆ. ಇದಿಷ್ಟೇ ಅಲ್ಲದೆ ನನ್ನಿಂದ ಹತ್ತು ತೊಲ ಚಿನ್ನ, ಅವನಿಂದ 300 ಗ್ರಾಂ..." ಎಂದೆಲ್ಲ ಲೆಕ್ಕನೀಡಲಾರಂಭಿಸಿದರು. ಶಿಗ್ಗಾವಿಯ ಕೋರ್ಟಿನಲ್ಲೂ ಈ ಜಗಳ ಮುಂದುವರೆದು ಜಾಮೀನಿಗಾಗಿ ಕಾದು ನಿಂತಿರುವಾಗಲೂ ಯಾವ ಪೊಲೀಸ್ ಅಧಿಕಾರಿ ಎಷ್ಟು ಕದ್ದ ಎಂದು ದಂಧೆಕೋರರು ಚರ್ಚಿಸುತ್ತಿದ್ದದ್ದೂ, ಇದರ ಮಧ್ಯೆ ಶಿಗ್ಗಾವಿ ಪೊಲೀಸರು ತಮಗೆ ಒಂದು ನಯಾ ಪೈಸೆಯೂ ಸಿಕ್ಕಲ್ಲ ಎಂದು ಲಟಿಕೆ ಮುರಿಯುತ್ತಿದ್ದದ್ದೂ ಮಜವಾಗಿತ್ತು.

ಚೆಡ್ಡಿಗಳ ಪಾತ್ರ

ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವವರೆಲ್ಲ 'ದೇಶಭಕ್ತ' ಪಕ್ಷವಾದ ಬಿಜೆಪಿಯ ನಾಯಕಮಣಿಗಳ ಮಕ್ಕಳು ಅಥವಾ ಅವರ ಸಂಘ ಪರಿವಾರದ ವಿವಿಧ ಸಂಘಟನೆಗಳ ಸದಸ್ಯರು ಎಂಬುದೂ ಮೋಜಿನ ಸಂಗತಿಯಾಗಿದೆ. ಆದರೆ "ಯಾರೂ ಮಾಡಲಾಗದಿದ್ದುದನ್ನು ನಾನು ಮಾಡ್ದೆ ಮಟ್ಕಾ ಮತ್ತು ಅಕ್ರಮ ಬಿಲ್ಡರಗಳ ಮೇಲೆ ಕೇಸ್ ಬುಕ್ ಮಾಡ್ದೆ" ಎಂದು ಬೀಗುತ್ತಿದ್ದ ಖಡಕ್ ಎಸ್ಪಿ ರಮೇಶ ಠುಸ್ ಆಗಿದ್ದು ಈ



ಕಾರಣದಿಂದಾಗಿಯೇ. ಇವರನ್ನೆಲ್ಲ ಬಂಧಿಸಿದ್ದಕ್ಕೆ, ಜಿಲ್ಲೆ[...] ನಾಲ್ಕು ಜನ ಶಾಸಕರು, ಮಂತ್ರಿ ಉದಾಸಿ, ಕಂದಾ[...] ಮಂತ್ರಿ ಜಗದೀಶ ಶೆಟ್ಟರ, ಸಂಸದ ಪ್ರಹ್ಲಾದ ಜೋ[...] ಮಂಜುನಾಥ ಕುನ್ನೂರ ಎಲ್ಲರೂ ಫೋನ್ ಮಾಡಿ ಎ[...] ರಮೇಶ್‌ಗೆ ಡೈರೆಕ್ಟಾಗಿ ಧಮಕಿ ಹಾಕಿದ್ದಾರೆ.

ಇವತ್ತು ಏನಾಗಿದೆ ಎಂದರೆ ಸಂಘಪರಿವಾರ[...] ಪುಂಡರು ಇನ್ನಿಲ್ಲದಂತೆ ಚಿಗುರಿಕೊಂಡಿದ್ದಾರೆ. ಹೇಗಿದ್ದರ[...] ತಮ್ಮದೇ ಸರ್ಕಾರವಿದೆ, ಅಷ್ಟೇ ಅಲ್ಲದೆ ಇತ್ತೀಚೆಗೆ ತಮ್ಮ[...] ಮೇಲಿರುವ ಕೇಸುಗಳನ್ನು ಸಚಿ[...] ಸಂಪುಟದ ಒಪ್ಪಿಗೆಯೊಂದಿಗೇ ಹಿಂದ[...] ಪಡೆಯಲಾಗಿದೆ, ತಮ್ಮ ಮೇಲೆ ಕೇಸ[...] ಹಾಕುವ ಧೈರ್ಯ ಯಾರೂ ತೋರಿಸ[...] ವುದಿಲ್ಲ ಎಂದೆಲ್ಲ ಬೀಗುತ್ತಿರುವ ಚೆಡ್ಡಿಗ[...] ಮತ್ತವರ ಪುಂಡರು ಹಲವಾರು ಅಕ್ರಮ[...] ದಂಧೆಗಳಲ್ಲಿ ವೀರಾವೇಷದಿಂದ ಭಾ[...] ವಹಿಸುತ್ತಿದ್ದಾರೆ.

ಅದು ನಿಜ ಎಂಬುದನ[...] ಶಿಗ್ಗಾವಿಯ ಟಗರಿನ ಕಾಳಗದಲ[...] ಸಾಬೀತಾಗಿದೆ. ಇಂತಹ ಜೂಜನ[...] ಆಯೋಜಿಸಿ ಲಕ್ಷಾಂತರ ಹಣ[...] ಲೂಟಿಗೆ ನಿಂತಿದ್ದ ವೆಂಕಟೇಶ ಕಾಟ್ವೆ, ರೋಹಿತ ಶೆಟ್ಟರನಂತ[...] ಬೆಟ್ಟಿಂಗ್ ಭಂಟರ ಮೇಲೆ ಒಂದು ಕೇಸನ್ನೂ ಪೊಲೀಸರ[...] ಹಾಕಿಲ್ಲ, ಉಪ ಮುಖ್ಯಮಂತ್ರಿ ಯಡಿಯೂರಪ್ಪನ ಮ[...] ಪ್ರವೇಶದಿಂದ ಅರೆಸ್ಟ್ ಆಗಿದ್ದ 32 ಜನರಲ್ಲಿ 28 ಜನ[...] ಮೇಲೆ ಪ್ರಾಣಿ ಹಿಂಸೆ ಪ್ರಕರಣ ದಾಖಲಿಸಿ ಕೈಬಿಡಲಾಗಿದ[...]

ಕಾಟ್ವೆನ ಗೋಲ್ಡು ಪೊಲೀಸರು ಕದ್ರಾ

ಬಂಧಿಸಿದ್ದ ಎಲ್ಲಾ ಆರೋಪಿಗಳ ಜೇಬಿನಲ್ಲಿದ್ದ ಹಣ[...] ಮೈಮೇಲೆ ಇದ್ದ ಬಂಗಾರ ಹಾಗೂ ದುಬಾರಿ ಮೊಬೈಲ[...] ಗಳನ್ನ ಶಿಗ್ಗಾವಿ ಪೊಲೀಸರು ಜಪ್ತಿ ಮಾಡಿದ್ದರು. ಅದ[...] ರೀತಿ ಕಾಟ್ವೆ ಪುತ್ರ ವೆಂಕಟೇಶ ಹಾಗೂ ಶೆಟ್ಟರ ಸಂಬಂ[...] ರೋಹಿತನ ಆಭರಣಗಳನ್ನೂ ವಸೂಲಿ ಮಾಡಿದ್ದರು[...] ಆಗ ಇವರಿಬ್ಬರು ತಮ್ಮ ಬಳಿ ಕರ್ಚೀಫ್ ಇಲ್ಲಾ ಎಂದ[...] ಕಾಲಲ್ಲಿದ್ದ ಸಾಕ್ಸ್‌ನಲ್ಲಿ ಸುಮಾರು 250 ಗ್ರಾಂ ಬಂಗಾ[...] ಹಾಗೂ ಒಂದು ಡೈಮಂಡ್ ರಿಂಗು ಹಾಕಿ ಕೊಟ್ಟಿದ್ದರಂತ[...]

ಬಿಡಿ ಚಿತ್ರಗಳು

● ಪಾರ್ವತೀಶ ●

ಹೀಗೊಂದು ಪೊಲೀಸ್ ವಿಚಾರಣೆ

ಚೆಡ್ಡಿಗಳ ಚಿತಾವಣೆಯಿಂದ 'ಅನುದೇವಾ ಹೊರಗಣವನು' ಕೃತಿ ಮುಟ್ಟುಗೋಲಿಗೆ ಒಳಗಾಗುವ ಒಂದೆರಡು ದಿನಗಳ ಮೊದಲು ನಡೆದ ಘಟನೆ ಇದು.

ಇಬ್ಬರು ಪೊಲೀಸ್ ಅಧಿಕಾರಿಗಳು ಅನುದೇವಾ ಪುಸ್ತಕ ಹಿಡಿದು ಕುಳಿತಿದ್ದಾರೆ. ಎದುರಿಗೆ ಸಂಶೋಧಕ ಡಾ. ಬಂಜಗೆರೆ ಜಯಪ್ರಕಾಶ್‌ರನ್ನು ಕೂರಿಸಲಾಗಿದೆ.

ಪೊಲೀಸ್ 1: (ಪುಸ್ತಕದ ಎರಡೂ ಬದಿ ರಕ್ಷಾಪುಟ ನೋಡುತಾ) ಇದ್ರಲ್ಲಿ ಅಂತಾದ್ದೇನೂ...ಬೇಜಾರಾಗೋಂತಾದ್ದೇನೂ ಇಲ್ಲಾ ಬಿಡಿ.

ಪೊಲೀಸ್ 2: ಹೌದೌದು, ನಾನೂ ಸಾಹಿತ್ಯಾನೆ, ಬರಗೂರ್ ಸ್ಟೂಡೆಂಟು, ಪಿಚ್ಚರಲ್ಲೂ ಮಾಡಿದ್ದೀನಿ.

ಜೆಪಿ: ನನ್ನನ್ಯಾಕೆ ಕರೆಸಿದ್ದು, ವಿಷಯ ಏನಂತ ನೇರವಾಗಿ ಹೇಳಿ.

ಪೊಲೀಸ್ 1: ಅಲ್ಲಾ ಬೇಕಂದ್ರೆ ನಿಮ್ಮುನ್ನ ಈಗ್ಲೆ ಅರೆಸ್ಟ್ ಮಾಡಿಬಿಡಬಹುದು. ಜೆಪಿನಗರದವರು ಯಾರೋ ಐದು ಜನ ನಿಮ್ಮ ಮೇಲೆ ಕಂಪ್ಲೇಂಟ್ ಕೊಟ್ಟು ಹೋಗಿದ್ದಾರೆ.

ಜೆಪಿ: ಹಾಗಿದ್ರೆ ಮಾಡಿಬಿಡಿ!

ಪೊಲೀಸ್ 2: ಛೇ, ಛೆ ಅದು ಹಾಗಲ್ಲ.

ಜೆಪಿ: ಮತ್ತೇನು ಹೇಳಿ.

ಪೊಲೀಸ್ 1: ನೋಡಿ ಈ ವ್ಯಾಸ ಹೆಂಗುಟ್ಟಿದ?

ಜೆಪಿ: ......!

ಪೊಲೀಸ್ 2: ...... ವಾಲ್ಮಿಕಿ ಹೆಂಗುಟ್ಟಿದ?

ಜೆಪಿ: ....!!

ಪೊಲೀಸ್ 1: ..... ಬಸವಣ್ಣಾನೂ ಅಂಗೇ ಹುಟ್ಟಿದ್ದು. ಅದಕ್ಕೆ ನೀವ್ಯಾಕ್ ಇಷ್ಟೊಂದು ತಲೆ ಕೆಡಿಸಿಕೊಬೇಕು ಹೇಳಿ?

ಜೆಪಿ: ....!!!

Cultural policing ಅಂದರೆ ಹೇಗಿರುತ್ತೆ ಎನ್ನುವುದರ ಸಣ್ಣ ಸ್ಯಾಂಪಲ್ ಇದು. ಇನ್ನು ಇದರ ಜೊತೆಗೆ ಸದ್ಯದಲ್ಲೇ ಅಧಿಕಾರಕ್ಕೇರಲಿರುವ ಸಂಘ ಪರಿವಾರಿಗಳೂ ಸೇರಿಕೊಂಡರೆ ಏನಾಗಬಹುದು ಯೋಚಿಸಿ.

ಕೆ.ಬಿ. ಸಿದ್ದಯ್ಯನವರ ಸಹನಾ ಸಿದ್ಧಾಂತ


'ಸಹನೆ ಎನ್ನುವುದನ್ನು ಲಿಂಗಾಯತರು ಬ್ರಾಹ್ಮಣರನ್ನು ನೋಡಿ ಕಲಿಯಬೇಕು' ಅಂತಾ ಕವಿ ಕೆ.ಬಿ. ಸಿದ್ದಯ್ಯ ತುಮಕೂರಿನಿಂದ ಅಪ್ಪಣೆ ಕೊಡಿಸಿದ್ದು ಮೊನ್ನೆ ಸುದ್ದಿಯಾಗಿದೆ.

ಲೋಹಿಯಾವಾದ-ಗಾಂಧಿವಾದದ ಮಿಶ್ರ ಬೇಸಾಯಗಾರ ಸಿದ್ದಯ್ಯನವರಿಗೆ ಲಿಂಗಾಯತರು ಟೀಕೆ ವಿಮರ್ಶೆಗಳನ್ನು ಸಹಿಸಿಕೊಳ್ಳುವುದನ್ನು ಕಲಿಯಲಿ ಎಂಬ ಆಶಯ ಇದ್ದರೆ ತಪ್ಪೇನಿಲ್ಲ. ಆದರೆ ಆ ಮೌಲ್ಯಗಳನ್ನು ಬ್ರಾಹ್ಮಣರಿಂದ ಕಲಿಯಬಹುದು ಎಂಬ ನಿರೀಕ್ಷೆಯಿರುವುದು ಮಾತ್ರ ಆಶ್ಚರ್ಯಕರವಾಗಿದೆ. ಎಷ್ಟು ಟೀಕಿಸಿದರೂ ಬ್ರಾಹ್ಮಣರು ಕೆರಳುವುದಿಲ್ಲ ಎಂಬುದು ಸಿದ್ದಯ್ಯನವರ ಅಂಬೋಣ. ಆದರೆ ಪೇಜಾವರ ಸ್ವಾಮಿ, ಪ್ರಮೋದ್ ಮುತಾಲಿಕ್, ಎಸ್.ಎಲ್. ಭೈರಪ್ಪನಂಥವರ ಚಟುವಟಿಕೆಗಳು, ಮೀಸಲಾತಿ ವಿರೋಧ, ಹಿಂದೂ ಫ್ಯಾಸಿಸ್ಟರನ್ನು ಬೆಂಬಲಿಸುವ ಅನೇಕ ಜಾತಿವಾದಿ ಅಸಹಿಷ್ಣುಗಳಾದ ಬ್ರಾಹ್ಮಣರು ನಮ್ಮಲ್ಲಿದ್ದಾರೆ. ಇಂತವರಿಂದಲೂ ಜನ ಕಲಿಯುವಂತಾದ್ದೇನಿದೆಯೋ ಕಾಣೆ.

ಹಾಗೆ ನೋಡಿದರೆ ಈ ಸಹನೆಗೆ ಲೋಹಿಯಾವಾದಿಗಳೇ ಒಂದು ಭರ್ಜರಿ ಮಾಡೆಲ್ ಆಗಬಹುದು. ಏಕೆಂದರೆ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡರೂ ಅವರು ಸಹನೆ ಕಳೆದುಕೊಳ್ಳುವುದಿಲ್ಲ, ಜನ ದಿವಾಳಿಯಾಗಿ, ಹಳ್ಳಿಗಳು ನಾಶವಾಗಿ, ಪೊಲೀಸರು ಮುಗ್ಧ ಜನರನ್ನು ಗುಂಡಿಟ್ಟು ಕೊಂದಾಗಲೂ ಅವರು ಉಸಿರೆತ್ತದೆ ಸಹನೆಯಿಂದಲೇ ಇರುತ್ತಾರೆ.

ಯಾರಾದರೂ ಸಹನೆ ಎಂಬ ಬೆಳೆ ತೆಗೆಯ ಬಯಸಿದರೆ ಈ ಮಿಶ್ರ ಬೆಳೆಗಾರರಿಗಿಂತ ಬೇರೆ ಮಾಡೆಲ್ ಬೇಕಿಲ್ಲ ಅನ್ನಿಸುತ್ತೆ.

ಶಾಸಕರ ನುಡಿಮುತ್ತುಗಳು



ನಮ್ಮ ಶಾಸನಸಭೆ ಅಧಿವೇಶನಗಳಿಗೆ ಪ್ರತಿದಿನ ಲಕ್ಷಾಂತರ ರೂಪಾಯಿ ಖರ್ಚಾಗುವ ಸಂಗತಿ ನಿಮಗೂ ಗೊತ್ತಿರಬಹುದು. ಅಧಿವೇಶನಗಳ[...] ಏನೇನು ಚರ್ಚೆಯಾಗಿದೆ, ಪ್ರಶ್ನೋತ್ತರಗಳು ನಡೆದಿವೆ ಎಂಬ ಮಾಹಿ[...] ಸಂಗ್ರಹಿಸಲು ಹೊರಟಾಗ ನಮಗೆ ಸಿಕ್ಕ ಕೆಲವು ಅಪರೂಪದ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಿದ್ದೇವೆ. ಮೊದಲನೆಯದಾಗಿ ಬಿಜೆಪಿ ಎಂಎಲ್‌ಸಿ ಮುಖ್ಯಮಂ[...] ಚಂದ್ರುರವರದ್ದು.

ಚಂದ್ರು: ಬೆಂಗಳೂರಿನ ಭೂ ಕಬಳಿಕೆಯಲ್ಲಿ ರಷ್ಯಾದ ಕೆಜಿ[...] (ಗೂಢಚರ್ಯ ಸಂಸ್ಥೆ) ಪಾತ್ರ ಇರುವ ಬಗ್ಗೆ ಅಮೆರಿಕದ ಸಿಐಎ (ಅಲ್ಲಿ[...] ಘಾತಕ ಗೂಢಚರ್ಯೆ ಸಂಸ್ಥೆ) ವರದಿ ನೀಡಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೆ[...]

ಸರ್ಕಾರದ ಉತ್ತರ : ಮಾಹಿತಿ ಇಲ್ಲ.

ಚಂದ್ರು: ರಷ್ಯಾದ ಕೆಜಿಬಿ ಮೂಲಕ ಕರ್ನಾಟಕದ ಮಾವೋವಾದಿಗಳಿಗೆ ಈ ವ್ಯವಹಾರದಲ್ಲಿ ಹಣ ಸೇರುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಸರ್ಕಾರದ ಉತ್ತರ : ನಿಖರ ಮಾಹಿತಿ ಇಲ್ಲ.

–ಇಲ್ಲಿ ಸರ್ಕಾರ ಮೊದಲ ಹಾಗೂ ಎರಡನೇ ಪ್ರಶ್ನೆಗೆ ಉತ್ತರ ನೀಡುವಲ್ಲಿ ಇರುವ ವ್ಯತ್ಯಾ[...] ಗಮನಿಸಿ. ಮಾವೋವಾದಿಗಳಿಗೆ ಕೆಜಿಬಿ ಹಣ ಸೇರುತ್ತಿದೆಯಾ ಎಂದರೆ 'ನಿಖರ ಮಾಹಿತಿ ಇಲ್ಲ' ಎನ್ನುವಾಗಲೇ ಅಂಥವೊಂದು ಸಾಧ್ಯತೆಯನ್ನು ಮುಂದೆಂದಾದರೂ 'ಗುಮ್ಮ'ನ ರೀತಿ ಬಳಸಬಹುದೇ[...] ಎಂಬ ದುರಾಲೋಚನೆ ವ್ಯಕ್ತವಾಗಿದೆ.


ಅಂದಹಾಗೆ ತಲ್ಲೂರಂಗಡಿಯಲ್ಲಿ ನಕ್ಸಲರು 4 ಮನೆ ದೋಚಿದರೆಂಬ ಸುದ್ದಿಯೊಂದಿಗೆ ಈ[...] ದರೋಡೆಯಲ್ಲಿ ಕೆಜಿಬಿ ಕೈವಾಡ ಎಂತಲೂ ಕಲ್ಪಿಸಿಕೊಳ್ಳಲು ಏನಡ್ಡಿಯಿಲ್ಲ ಅಂತಾ ಅಸಲಿ ಡಕಾಯಿತರಾದ ಮಂಗಳೂರಿನ ಭಜರಂಗದಳದವರು ಕುಣಿದಾಡಬಹುದು.

ಇನ್ನೊಂದು ಮಜಾ ಎನಿಸುವ ಪ್ರಶ್ನೋತ್ತರದಲ್ಲಿ ಎಂಎಲ್‌ಸಿ ಶ್ರೀನಾಥ್ ಯಾನೆ ವಿಗ್ನಾರಾಯಣ[...] ಸ್ವಾಮಿ (ಶ್ರೀನಾಥರ ಮೂಲ ಹೆಸರು ನಾರಾಯಣಸ್ವಾಮಿ+ವಿಗ್) ಪಾಲ್ಗೊಂಡಿದ್ದಾರೆ.

ಪರಿಷತ್‌ನ ಕ್ಯಾಂಟೀನ್‌ನಲ್ಲಿ ಕನ್ನಡದಲ್ಲಿ ತಿಂಡಿ ಕಾಫಿ ಕೇಳಿದರೆ ಸಿಬ್ಬಂದಿಗೆ ಅರ್ಥವಾಗದೆ ತಮಗೆ[...] ಶ್ಯಾನೆ ತೊಂದರೆಯಾಗಿದೆ ಅಂತ ಶ್ರೀನಾಥ್ ಆಕ್ಷೇಪಿಸಿದ್ದಾರೆ.

ಶಾಸಕರಾದಾಗಿನಿಂದ ಶ್ರೀನಾಥ್ ಬಾಯಿ ತೆರೆದಿರುವುದು ಇದೇ ಮೊದಲ ಬಾರಿ. ಅಂದಹಾಗೆ ಅವರು ಬಾಯಿ ತೆರೆದದ್ದು ತಿಂಡಿ ತಿನ್ನಲು. ಆದರೆ ಅದು ಸಿಗದೇ ಹೋದ ಕಾರಣ ತಿನ್ನಲು ತೆರೆದಿದ್ದ ಬಾಯಲ್ಲೇ ಈ ಅಣಿಮುತ್ತು ಉದುರಿಸಿದ್ದಾರೆ ಅಂತ ನಮ್ಮ ಅನುಮಾನ.

Tempt to murder



ಕುರುಬ ಮಠಾಧೀಶರಾದ ಬಸವರಾಜ ದೇವರು ಒಮ್ಮೆ ನಾಗಮಂಗಲ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದಾಗ ಭಜರಂಗ ದಳದವರು ಅಡ್ಡಗಟ್ಟಿ ಗಲಾಟೆ ಮಾಡಿದ್ದರು. ನಂತರ 'ಸ್ವಾಮೀಜಿ ಮೇಲೆ ಹಲ್ಲೆ' ಅಂತ ಪತ್ರಿಕೆಗಳಲ್ಲಿ ವರದಿ ಬಂತಾದರೂ ಅಲ್ಲಿ ನಡೆದದ್ದೇ ಬೇರೆ[...] ಸ್ವತಃ ದೇವರೇ ಒಂದಿಬ್ಬರು ಭಜರಂಗಿಗಳಿಗೆ ಹೊಡೆದು ಕಳಿಸಿದ್ದರು. ಅವರ ಮೇಲೆ **attempt to murder** ಕೇಸೂ ಆಯಿತು[...] ಆಮೇಲೆ ಈ ಘಟನೆ ಯಾಕಾಯಿತು ಅನ್ನೋ ಬಗ್ಗೆ ರೈತ ಸಂಘದ ಪುಟ್ಟಣ್ಣಯ್ಯ ಒಂದು ಮಜವಾದ ವಿವರಣೆ ಕೊಟ್ಟರು.

"ಇದು ಸ್ವಾಮಿಗಳು ಮಾಡಿದ **attempt to murder** ಅಲ್ಲ, **Tempt to murder** ಅಂತ ಭಜರಂಗಿಗಳ ಮೇಲೆ ಕೇಸ್[...] ಹಾಕಬೇಕು. ಯಾಕಂದ್ರೆ ಈ ಚೆಡ್ಡಿಗಳ ಜಾತಕ ನೋಡ್ತಾ ಇದ್ರೆ ಯಾವನಿಗಾದ್ರೂ ಅವರ್ನ ಮರ್ಡರ್ ಮಾಡಿ ಬಿಡಬೇಕು ಅಂತ **temp**[...] ಆಯ್ತದೆ ಕಣ್ರಿ" ಅಂದಿದ್ದರು.

ಅಂತ ಗಾಂಧಿವಾದಿ ಪುಟ್ಟಣ್ಣಯ್ಯನವರಿಗೇ ಹೀಗನ್ನಿಸಬೇಕಾದ್ರೆ.....



ಮಾರನೇ ದಿನ ತಮ್ಮನ್ನು ಕೇಸಿನಿಂದ ಕೈಬಿಟ್ಟ ವಿಚಾರ ತಿಳಿದು ತಮ್ಮ ವಸ್ತುಗಳನ್ನು ಹಿಂದಕ್ಕೆ ಕೊಡುವಂತೆ ಕೇಳಿದ್ದಾರೆ. ಆದರೆ ಜಪ್ತಿ ಮಾಡಿದ ವಸ್ತುಗಳಲ್ಲಿ ಕಾಟ್ವೆನ ಸಾಕ್ಸ್ ನಾಪತ್ತೆಯಾಗಿದೆ. ಎಸ್.ಐ. ಪ್ರಶಾಂತ ನಾಯ್ಕ ಹಾಗೂ ಸಿ. ಐ. ವೇಣುಗೋಪಾಲ "ಜಪ್ತಾದ ಎಲ್ಲಾ ಐಟಂಗಳು ಹಾವೇರಿ ಎಸ್ಪಿ ಆಫೀಸಿನಲ್ಲಿವೆ" ಎಂದು ಹೇಗೋ ಎರಡು ದಿನ ನೂಕಿದ್ದಾರೆ. ಶಿಗ್ಗಾವಿ ಠಾಣೆಗೆ ಅಲೆದು ಸುಸ್ತಾದ ವೆಂಕಟೇಶ ಕೊನೆಗೆ ತನ್ನ ತಂದೆಯನ್ನೇ ಛೂ ಬಿಟ್ಟಿದ್ದಾನೆ. ಶಿಗ್ಗಾವಿ ಠಾಣೆಯಲ್ಲಿ ರಿಕಾಣಿ ಹೂಡಿದ ಅಶೋಕ ಕಾಟ್ವೆ "ನಮ್ಮವು ಏನ್ ಆದಾವು ಮೊದಲ್ ಮುಂದಿಟ್ ಆಮ್ಯಾಲೆ ಮಾತಾಡ್" ಎಂದು ಎಸ್ಸೈನಿಂದ ಎಸ್ಪಿವರೆಗೂ ಬಾಯಿಗೆ ಬಂದಂತೆ ಬೈದಿದ್ದಾನೆ.


ಇದ್ದವರಲ್ಲಿ ಕದ್ದವರಾರು ಎಂದು ಮೈಪರಚಿಕೊಂಡ ಪೊಲೀಸರು ಕೊನೆಗೆ ದುಡ್ಡು ಕೊಟ್ಟು ಡೀಲ್ ಮುಗಿಸಿಕೊಳ್ಳಲು ಮುಂದಾಗಿದ್ದಾರೆ. ಆದರೆ ತಕ್ಷಣಕ್ಕೇ ಸಂಪೂರ್ಣ ಹಣ ಬೇಕೆಂದು ಕಾಟ್ವೆ ಹಠ ಹಿಡಿದಾಗ, ಸ್ಥಳೀಯ ಚಡ್ಡಿ ಧುರೀಣ ಸೋಮಣ್ಣ ಬೇವಿನಮರದ ಬಂದು "ಈಗ 40 ಸಾವಿರ ತಗೊಳ್ಳಿ, ಉಳಿದಿದ್ದಕ್ಕೆ ಸಮಯ ಕೊಡಿ" ಎಂದು ಮಧ್ಯಸ್ಥಿಕೆ ವಹಿಸಿಕೊಂಡನಂತೆ.

ಇದೆಲ್ಲವಾದ ನಂತರ ಮತ್ತೊಂದು ಬೆಳವಣಿಗೆಯಾಗಿದೆ. ಅದೇನೆಂದರೆ ಟಗರುಗಳ ಕಾಳಗದ ಪ್ರಕರಣದಲ್ಲಿ ವೆಂಕಟೇಶ ಕಾಟ್ವೆ ಮತ್ತು ರೋಹಿತ ಶೆಟ್ಟರ್ ಇಬ್ಬರೂ ಇರಲೇ ಇಲ್ಲ. ಅವರು ಅಮಾಯಕರು ಎಂದು ಹೇಳಿ ಅವರಿಬ್ಬರ ಹೆಸರುಗಳನ್ನು ಕೈಬಿಡಲಾಗಿದೆ.

ಖಡಕ್ ಎನಿಸಿಕೊಂಡಿದ್ದ ಎಸ್ಪಿ ರಮೇಶ್ ಚಡ್ಡಿಗಳ ಮುಂದೆ ಇಷ್ಟು ಹೀನಾಯವಾಗಿ ಮಂಡಿಯೂರಿ ಕೂರಬಾರದಿತ್ತು, ಛೇ.

–ಹುರುಳಿಕುಪ್ಪಿ ವಿನಯ

ಸಾಹಿತ್ಯ ಸಮ್ಮೇಳನಾಧ್ಯಕ್ಷ ಆರ್‌ಎಸ್‌ಎಸ್ ಹೈದ



ವಿಮರ್ಶಕ ಎಲ್.ಎಸ್. ಶೇಷಗಿರಿರಾವ್ ಉಡುಪಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಕುರ್ಚಿ ಮಂಜೂರು ಮಾಡಿಸಿಕೊಂಡಿದ್ದಾರೆ. ಒಂಭತ್ತು ವಿರೋಧ, 11 ತಟಸ್ಥ ಹಾಗೂ 13 ಸಮ್ಮತಿಯ ಓಟುಗಳಿಂದ ಎಲ್‌ಎಸ್ ಆಯ್ಕೆಯಾಗಿದ್ದಾರೆ. ಅಂದರೆ ಕಸಾಪ ಕಾರ್ಯಕಾರಿ ಸಮಿತಿಯ ಬಹುತೇಕರಿಗೆ ಈತ ಬೇಡದ ಅಭ್ಯರ್ಥಿ. ವ್ಯಾಸರಾಯ ಬಲ್ಲಾಳರ ಪರ ಬಹುತೇಕರ ಒಲವಿತ್ತು. ಇಂಥ ವಿರೋಧದ ನಡುವೆಯೂ ಆಯ್ಕೆಯಾದಾಗ ಅಧ್ಯಕ್ಷಗಿರಿ ಬೇಡವೆನ್ನಲು ಕೊಂಚ ಸ್ವಾಭಿಮಾನ ಇರಬೇಕಾಗುತ್ತದೆ. ಅದೂ ಇಲ್ಲದ ಶೇಷಗಿರಿರಾವ್‌ರಿಂದ ಏನನ್ನು ನಿರೀಕ್ಷಿಸಲು ಸಾಧ್ಯ?

LSS ಬಹಳ ಕಾಲ ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷನಾಗಿದ್ದಾತ. RSS ನ ಈ ಸಂಸ್ಥೆಯ ಪುಸ್ತಕಗಳು ಜಾತಿವಾದ-ಧರ್ಮಾಂಧತೆಯ ವಿಷ ಕಳೆಯನ್ನಷ್ಟೆ ಉತ್ಪಾದಿಸಿವೆ. ಈ ಗಬ್ಬು ಕೆಲಸ ಮಾಡಿಕೊಂಡಿದ್ದ ಶೇಷಗಿರಿರಾವ್ ಸಾಹಿತ್ಯ ವಿಮರ್ಶೆ ಮಾಡಿದ್ದಕ್ಕಿಂತ ಇನ್ನೊಬ್ಬ ಮತಾಂಧ ಚಿದಾನಂದಮೂರ್ತಿ ಜೊತೆ ಸೇರಿ ಚಿಲ್ಲರೆ ಕೆಲಸಗಳನ್ನು ಮಾಡುತ್ತಾ ತಮ್ಮ ಆಯಸ್ಸು, ಶಕ್ತಿಯನ್ನು ಖರ್ಚು ಮಾಡಿಕೊಂಡಿದ್ದಾರೆ.

ಕಸಾಪ ಸಭೆಯಲ್ಲಿ ಎಲ್‌ಎಸ್ ಬಗ್ಗೆ ಚರ್ಚೆ ನಡೆದಾಗ ಬೆಂಗಳೂರು ನಗರದ ಪಾರ್ಶ್ವನಾಥ್ ಈತನ ದುಷ್ಟಬುದ್ಧಿಯನ್ನು ವಿವರಿಸಿ ಬೇಡ ಅಂದಿದ್ದಾರೆ. ಆದರೆ ಲಲಿತಾನಾಯಕ್, ಪ್ರಭಾಕರ್ ರೆಡ್ಡಿ ಎಲ್‌ಎಸ್ ಪರವಾಗಿ ಪೆದ್ದುಪೆದ್ದಾಗಿ ಮಾತಾಡಿ ತಮ್ಮ ಬುದ್ಧಿಹೀನತೆ ತೋರಿಸಿಕೊಂಡಿದ್ದಾರೆ.

ಈ ಬಾರಿಯ ಸಮ್ಮೇಳನದ ಗೌರವಾಧ್ಯಕ್ಷನನ್ನಾಗಿ ವಿಶ್ವಹಿಂದೂ ಪರಿಷತ್ತಿನ ಉಪಾಧ್ಯಕ್ಷ ಪೇಜಾವರ ಸ್ವಾಮಿಯನ್ನೇ ನೇಮಿಸಲಾಗಿದೆ.


ಸ್ವಾಗತ ಸಮಿತಿಗೆ ಬಿಜೆಪಿಯ ವಿ.ಎಸ್. ಆಚಾರ್ಯ ಮುಖ್ಯಸ್ಥ. ಈಗಾಗಲೇ ಕರಾವಳಿ ಮತ್ತು ಕರ್ನಾಟಕದ ಎಲ್ಲೆಡೆ ಇದನ್ನು ಅಪ್ಪಟ ಹಿಂದೂ ಕೋಮುವಾದಿ ಸಾಹಿತ್ಯ ಸಮ್ಮೇಳನವಾಗಿ ರೂಪಾಂತರಿಸುವ ತಯಾರಿ ಶುರುವಾಗಿದೆ.

ಪ್ರಗತಿಪರರು, ಅಪ್ಪಟ ಸಾಹಿತ್ಯ ಒಲವಿನ ಜನ ಸಹ ಇದನ್ನು ಪ್ರತಿಭಟಿಸಬೇಕಿದೆ.

ಕನ್ನಡ ವಿಶ್ವವಿದ್ಯಾಲಯ

ವಾಕ್ಯ ರಚಿಸಲಾಗದವರು ವಿವಿ ನಡೆಸುತ್ತಾರೆಯೇ?


ಕನ್ನಡ ವಿಶ್ವವಿದ್ಯಾಲಯವು ತನ್ನ ಸಂಶೋಧನೆ, ವಿದ್ವತ್ ಚಟುವಟಿಕೆ ಮತ್ತು ಪ್ರಕಟಣೆಗಳಿಂದಾಗಿ ನಾಡಿನಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಆದರೆ ಈ ವಿಶ್ವವಿದ್ಯಾಲಯಕ್ಕೆ ಪ್ರತಿ ಮೂರು ವರ್ಷಕ್ಕೊಮ್ಮೆ ಜ್ವರ ಬರುತ್ತದೆ. ಕರ್ನಾಟಕದ ಬೇರೆ ವಿಶ್ವವಿದ್ಯಾಲಯಗಳಿಗಿಂತ ಕನ್ನಡ ವಿಶ್ವವಿದ್ಯಾಲಯ ಭಿನ್ನವಾದುದು. ಬೇರೆ ವಿವಿಗಳಲ್ಲಿ ಪಾರಂಪರಿಕ ಪದವಿಗಳನ್ನು ಕೊಡುವುದೇ ಪ್ರಧಾನವಾದರೆ, ಕನ್ನಡ ವಿವಿಯಲ್ಲಿ ಸಂಶೋಧನೆ ಮುಖ್ಯವಾದುದು. ಬೇರೆ ವಿವಿಗಳಲ್ಲಿ ಕುಲಪತಿಯವರ ಆಲೋಚನೆಗಳು, ಧೋರಣೆಗಳು ಆಡಳಿತಾತ್ಮಕವಾಗಿ ಮಾತ್ರ ಆಕಾರ ಪಡೆಯಬಲ್ಲವು. ಆದರೆ ಕನ್ನಡ ವಿವಿಯಲ್ಲಿ ಕುಲಪತಿ ಆದವರ ಆಲೋಚನೆಗಳು, ಧೋರಣೆಗಳು, ಅಲ್ಲಿ ಕೈಗೊಳ್ಳುವ ಸಂಶೋಧನೆಗಳ ದಿಕ್ಕುದೆಶೆಗಳನ್ನು ರೂಪಿಸಬಲ್ಲವು. ಹಾಗಾಗಿ ಕನ್ನಡ ವಿವಿಯಲ್ಲಿ ಕುಲಪತಿ ಆಗುವವರ ಬೌದ್ಧಿಕತೆ, ದೃಷ್ಟಿ ಧೋರಣೆಗಳು ಮುಖ್ಯವಾಗುತ್ತವೆ. ಆದರಿಂದ ಅಲ್ಲಿರುವ ವಿದ್ವಾಂಸರು ಒಬ್ಬ ಕುಲಪತಿಯವರ ಅವಧಿ ಮುಗಿದು ಮತ್ತೊಬ್ಬ ಕುಲಪತಿಯವರು ಆಯ್ಕೆ ಆಗುವ ಸಂದರ್ಭದಲ್ಲಿ ಜ್ವರ ಬಂದವರಂತೆ ನರಳಾಡುತ್ತಾರೆ. ಪ್ರಸ್ತುತ ಈಗಲೂ ಹಾಗೇ ಆಗಿದೆ.



ಕನ್ನಡ ವಿವಿಯಲ್ಲಿ ಈಗಾಗಲೆ ಚಂದ್ರಶೇಖರ ಕಂಬಾರ, ಎಂ. ಎಂ. ಕಲಬುರ್ಗಿ, ಲಕ್ಕಪ್ಪಗೌಡ ಮತ್ತು ವಿವೇಕ ರೈ ಅವರು ತಮ್ಮದೇ ಆದ ಬೌದ್ಧಿಕ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಈಗ ಮತ್ತೊಬ್ಬ ಕುಲಪತಿಯವರ ಆಯ್ಕೆಗೆ ಜಾಗ ತೆರವಾಗಿದೆ. ಕನ್ನಡ ವಿವಿಯ ವಿದ್ವಾಂಸರು ಮಾತ್ರವಲ್ಲ; ನಾಡಿನ ನೂರಾರು ಸಂವೇದನಾಶೀಲ ಚಿಂತಕರು, ನಾಡಿನ ಬಗ್ಗೆ ಕಾಳಜಿ ಉಳ್ಳವರು ಈಗ ಎಂತವರು ಕನ್ನಡ ವಿವಿಗೆ ವಕ್ಕರಿಸಿಕೊಳ್ಳುತ್ತಾರೊ ಎಂಬ ಆತಂಕದಲ್ಲೂ; ಒಳ್ಳೆಯ ವಿದ್ವಾಂಸರೊಬ್ಬರು ಬರಲಿ ಎಂಬ ಆಸೆಯಲ್ಲೂ ತೊಡಗಿದ್ದಾರೆ.

ಸದ್ಯ ಈಗ ಕನ್ನಡ ವಿವಿಗೆ ಕುಲಪತಿ ಸ್ಥಾನಕ್ಕೆ ಕೇಳಿಬರುತ್ತಿರುವ ಹೆಸರುಗಳೆಂದರೆ, ಡಾ. ನಾರಾಯಣ, ಡಾ. ಕಾಳೇಗೌಡ ನಾಗವಾರ ಮತ್ತು ಮಲ್ಲೇಪುರಂ ಜಿ. ವೆಂಕಟೇಶ್. ಕನ್ನಡ ವಿವಿಯ ಒಳಗಿನವರೂ ಸೇರಿದಂತೆ, ಇಡೀ ಕನ್ನಡದ ಬೌದ್ಧಿಕ ವಲಯ ಡಾ. ಕೆ. ವಿ. ನಾರಾಯಣ ಅವರು ಕನ್ನಡ ವಿವಿಗೆ ಕುಲಪತಿ ಆಗಲಿ ಎಂಬ ಒತ್ತಾಸೆಯಿಂದ ಕಾಯುತ್ತಿದ್ದಾರಲ್ಲದೆ, ಯಾವುದೇ ಕಾರಣಕ್ಕೂ ಮಲ್ಲೆಪುರಂ ಅಲ್ಲಿಗೆ ವಕ್ಕರಿಸದಿರಲಿ ಎಂದು ಆಶಿಸುತ್ತಿದ್ದಾರೆ.

ಡಾ. ನಾರಾಯಣ ಬೌದ್ಧಿಕ ಆಳ ಮತ್ತು ವಿಸ್ತಾರವನ್ನು ಹೊಂದಿರುವವರು, ನಾಡಿನ ಹಿರಿಯ ವಿದ್ವಾಂಸರು, ಸಂಶೋಧಕರು, ಶಿಕ್ಷಣ ತಜ್ಞರು, ಮೀಮಾಂಸಕರು, ಚಿಂತಕರು ಮತ್ತು ತತ್ವಶಾಸ್ತ್ರಜ್ಞರು. ಸಾಹಿತ್ಯ, ಭಾಷಾಶಾಸ್ತ್ರ, ವಿಮರ್ಶೆ, ಜಾನಪದ, ಬುಡಕಟ್ಟು ಅಧ್ಯಯನ, ಅಭಿವೃದ್ಧಿ ಅಧ್ಯಯನ, ಶಾಸನಶಾಸ್ತ್ರ ಹಸ್ತಪ್ರತಿ, ಪುರಾತತ್ವ, ಪಾಶ್ಚಾತ್ಯ ಆಧುನಿಕ ಚಿಂತನೆಗಳು, ಕಂಪ್ಯೂಟರ್ ಜ್ಞಾನ–ಇವೆಲ್ಲವುಗಳಲ್ಲಿ ಪರಿಣತಿ ಹೊಂದಿರುವವರು. ಅವರ ಇತ್ತೀಚಿನ ಪುಸ್ತಕ 'ಕನ್ನಡ ಜಗತ್ತು: ಅರ್ಧ ಶತಮಾನ' ಪುಸ್ತಕ ಇದಕ್ಕೆ ಒಂದು ಉದಾಹರಣೆ. ಜಾಗತೀಕರಣದ ಈ ಹೊತ್ತಿನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳೊಂದಿಗೆ ಆಧುನಿಕ ಜ್ಞಾನಶಿಸ್ತುಗಳನ್ನು ವಿವಿಯಲ್ಲಿ ಅನುಷ್ಠಾನಗೊಳಿಸುವುದು ಸುಲಭದ ಕೆಲಸವೇನಲ್ಲ. ಆದರೆ ಡಾ. ಕೆವಿಎನ್ ಇದನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದ್ದಾರೆ. ಏಕೆಂದರೆ ಕಂಬಾರರ ಮೊದಲ ಅವಧಿಯಲ್ಲಿ ಮತ್ತು ಲಕ್ಕಪ್ಪಗೌಡರ ಪೂರ್ಣ ಅವಧಿಯಲ್ಲಿ ಕುಲಸಚಿವರಾಗಿ ಯಶಸ್ವಿಯಾಗಿ ಆಡಳಿತ ನಿರ್ವಹಿಸಿರುವ ಅನುಭವ ಡಾ. ಕೆವಿಎನ್ ಅವರಿಗಿದೆ. ಹಾಗಾಗಿ ಅವರು ಕನ್ನಡ ವಿವಿಯನ್ನು ಬೌದ್ಧಿಕವಾಗಿ ಮತ್ತು ಆಡಳಿತಾತ್ಮಕವಾಗಿ ಸರಿಯಾದ ದಾರಿಯಲ್ಲಿ ಮುನ್ನಡೆಸಬಲ್ಲರು.



ಆದರೆ ಮಲ್ಲೇಪುರಂ ಅವರು ಕನ್ನಡ ವಿವಿಗೆ ವಿಸಿ ಆಗಲು ಪ್ರಯತ್ನಿಸುತ್ತಿದ್ದಾರೆ ಎಂಬ ಸುದ್ದಿಯನ್ನು ಕೇಳಿ ವಿವಿಯ ಒಳಗಿನ ಮತ್ತು ಹೊರಗಿನ ಅನೇಕರು ಗಹಗಹಿಸಿ ನಗುತ್ತಿದ್ದಾರೆ. ಯಾಕೆಂದರೆ ಯಾವ ದಿಕ್ಕಿನಿಂದ ನೋಡಿದರೂ ಆ ಹುದ್ದೆಯನ್ನು ಅಲಂಕರಿಸುವ ಯಾವ ಗುಣಗಳೂ ಅವರಲ್ಲಿ ಕಂಡುಬರುತ್ತಿಲ್ಲ.

ಕನ್ನಡ ವಿವಿಯ ಮೊದಲ ಕುಲಪತಿ ಕಂಬಾರರ ಕಾಲದಲ್ಲಿ ಎಲ್ಲೊ ಹೈಸ್ಕೂಲಿನಲ್ಲಿದ್ದ ಮಲ್ಲೇಪುರಂ, ಯಾವುದೊ ಮರ್ಜಿಯಿಂದ ಕನ್ನಡ ವಿವಿಯನ್ನು ಪ್ರವೇಶಿಸಿದರು. ಇವರು ಇದುವರೆಗೂ ಕನ್ನಡ ವಿವಿಯಲ್ಲಿ ಒಂದೇ ಒಂದು ಸಂಶೋಧನಾ ಯೋಜನೆಯನ್ನೂ ಮುಗಿಸಿಲ್ಲ. 1992ರಲ್ಲಿ ಮಂಟಪ ಮಾಲೆಯಲ್ಲಿ ಪ್ರಕಟವಾದ 26 ಪುಟಗಳ 'ಸ್ಫೋಟವಾದ' ಎಂಬ ಪುಸ್ತಕವನ್ನು ಬಿಟ್ಟರೆ, 2000 ದಲ್ಲಿ 'ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ' ಎಂಬ ಎರವಲು ವಿಚಾರಗಳ ಪುಸ್ತಕವನ್ನು ವಿವಿಯಲ್ಲಿ ಪ್ರಕಟಿಸಿದ್ದಾರೆ.

ಇದು ಬಿಟ್ಟರೆ ಕನ್ನಡ ವಿವಿಯಲ್ಲಿ ಕಳೆದ 15 ವರ್ಷಗಳಲ್ಲಿ ಮಲ್ಲೇಪುರಂ ಅವರ ಶೈಕ್ಷಣಿಕ ಪ್ರಗತಿ ಶೂನ್ಯ. ಕನ್ನಡ ವಿವಿಯಲ್ಲೇ ಆಗಲಿ ಅಥವಾ ನಾಡಿನ ಯಾವುದೆ ಭಾಗದಲ್ಲೇ ಆಗಲಿ ಮಲ್ಲೇಪುರಂ ಅವರ ಆಲೋಚನಾಧಾರೆ ಎಂತಹದ್ದು ಮತ್ತು ವಿದ್ವತ್ತು ಯಾವ ಮಟ್ಟದ್ದು ಎಂದು ಇನ್ನೂ ಎಲ್ಲೂ ದಾಖಲಾಗಿಲ್ಲ. 1990ರಲ್ಲಿ ಕರೆಸ್ಪಾಂಡೆನ್ಸ್ ಮೂಲಕ ಎಂಎ ಪದವಿ ಪಡೆದ ಇವರು, 1997ರಲ್ಲಿ (ಅಂದರೆ ಎಂಎ ಮಾಡಿ ಕೇವಲ 7 ವರುಷಗಳಲ್ಲಿ) ಪ್ರಾಧ್ಯಾಪಕರಾದುದು ಒಂದು ಪವಾಡವೇ ಸರಿ. ಯಾಕೆಂದರೆ ಅಷ್ಟು ಬೇಗ ಪ್ರಾಧ್ಯಾಪಕರಾಗಲು ಇವರಿಗೆ ಶೈಕ್ಷಣಿಕ ಅರ್ಹತೆಯೇ ಇರಲಿಲ್ಲ, ಈಗಲೂ ಕುಲಪತಿ ಸ್ಥಾನಕ್ಕೆ ಏರಲು ಅಗತ್ಯವಾಗಿರುವ ಡಾಕ್ಟರೇಟ್ ಡಿಗ್ರಿ ಅವರಿಗಿಲ್ಲ. ಕಳೆದ ಬಾರಿ ಈ ಕಾರಣದಿಂದಲೆ ಅವರ ಕಹಾಯಗಾಯ ಪ್ರಯತ್ನ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಗಿತ್ತು, ಈ ಸಲವೂ ಹಾಗೇ ಆಗಲಿ ಎಂದು ವಿವಿಯ ಹಿತಚಿಂತಕರು ಆಶಿಸುತ್ತಿದ್ದಾರೆ.

ಅಷ್ಟಕ್ಕೂ ಮಲ್ಲೇಪುರಂ ಅವರಿಗೆ ಇರುವ ವಿದ್ವತ್ ಆದರೂ ಏನು? 1993ರಲ್ಲಿ ಕಂಬಾರರು 'ಕನ್ನಡ ವಾರ್ಷಿಕ' ಎಂಬ ಸಂಚಿಕೆಯನ್ನು ಸಂಪಾದನೆ ಮಾಡಲು ಮಲ್ಲೇಪುರಂಗೆ ಕೊಟ್ಟರು. ಕೆಲವು ಲೇಖನಗಳನ್ನು ಸಂಗ್ರಹಿಸಿದ ಶ್ರೀಯುತರಿಗೆ ಅದಕ್ಕೊಂದು ನೀಟಾದ ಪ್ರಸ್ತಾವನೆಯನ್ನೂ ಬರೆಯಲು ಬರಲಿಲ್ಲ. ಅಂದರೆ ಒಂದು ಸಂಕಲನಕ್ಕೆ ಒಂದು ಪ್ರಸ್ತಾವನೆ ಬರೆಯುವ ಬೌದ್ಧಿಕ ಶಕ್ತಿ ಕೂಡ ಅವರಿಗಿರಲಿಲ್ಲ. ಹಾಗಾಗಿ ಪ್ರಕಟಗೊಂಡ ಆ ಪುಸ್ತಕವನ್ನು ಕಂಬಾರರು ಮಾರಾಟಕ್ಕೆ ಬಿಡದೆ, ಬೇರೊಂದು ಪುಸ್ತಕವನ್ನು ಸಿದ್ಧ ಮಾಡಿಸಿ ಪ್ರಕಟಿಸಿದರು. ಒಂದೇ ರೀತಿಯ ಮುಖಪುಟದ (ಪುಟ 12,326, ಬೆಲೆ 80-00, ಪುಟ 14, 320, ಬೆಲೆ 75-00) ಎರಡು ಕನ್ನಡ ವಾರ್ಷಿಕ ಸಂಚಿಕೆಗಳು ಮಲ್ಲೇಪುರಂ ಅವರ, ಕೇವಲ ಒಂದು ಪ್ರಸ್ತಾವನೆ ಬರೆಯಲಾರದ ಕಳಪೆ ಬೌದ್ಧಿಕತೆಗೆ ಮೇರುಸಾಕ್ಷಿಯಾಗಿ ನಿಂತಿವೆ.

ಮಲ್ಲೆಪುರಂ ಅವರಿಗೆ ಕನ್ನಡ ವಾಕ್ಯಗಳನ್ನೆ ಸರಿಯಾಗಿ ಬರೆಯಲು ಬರುವುದಿಲ್ಲ. ಅಂತಹ ಕೆಲವು ಸ್ಯಾಂಪಲ್‌ಗಳನ್ನು ನೋಡಬಹುದು. 'ಈ ಕ್ರಮವನ್ನು ನಾನು ಪ್ರೊ. ಓ. ಎಲ್. ನಾಗಭೂಷಣಸ್ವಾಮಿ ಅವರು ಸಿದ್ಧಪಡಿಸಿರುವ 'ವಿಮರ್ಶೆಯ ಪರಿಭಾಷೆ' ಗ್ರಂಥದಿಂದ ಪ್ರೇರಣೆ ಪಡೆದಿದ್ದೇನೆ'. (ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ, ಮುನ್ನುಡಿ, ಪುಟ 9); 'ಚರಿತ್ರೆಯನ್ನು ಸೃಜನಶೀಲ ಕೃತಿಗಳ ಪುನರನುಸಂಧಾನದಲ್ಲಿ ನಡೆಸುವುದು ತಿಳಿವ ತೇಜದ ಬೆಳಕಿನ ಮುಂದೆ ಮುಖವೊಡ್ಡುವುದರಲ್ಲಿ ಇರುವ ಸುಖ ವಿಲಕ್ಷಣವಾದುದು' (ಪುಟ 8, ತಿಳಿವ ತೇಜದ ಮುಂದೆ); 'ಆಧುನಿಕತೆ ಎಂಬುದು ಒಂದು ರೋಗ. ಅದು ಇರಕೂಡದೆಂದು ನಾನು ಪಾತಿವ್ರತ್ಯದ ಭಾವದ ಹಿನ್ನೆಲೆಯಲ್ಲಿ ಮಾತನಾಡುತ್ತಿಲ್ಲ' (ಪುಟ 6, ತಿಳಿವ ತೇಜದ ಮುಂದೆ). ಈ ಸಾಲುಗಳಲ್ಲಿ ಗ್ರಹಿಕೆಯ ದೋಷ ಮತ್ತು ವಾಕ್ಯ ದೋಷ ಎರಡೂ ಇವೆ. ಅಥವಾ ಅಸಂಬದ್ಧ ಗ್ರಹಿಕೆ ಮತ್ತು ಅಸಂಬದ್ಧ ವಾಕ್ಯಗಳಿವು. ಇವರ ಬರವಣಿಗೆಯಲ್ಲಿ ಇವುಗಳದ್ದೇ ಸಿಂಹಪಾಲು. ಇಂತಹ ವಿದ್ವಾಂಸರು ಇತ್ತೀಚೆಗೆ ಮಿಸ್ಟಿಸಿಸಂ ಮೇಲೆ ಇಂಗ್ಲಿಷಿನಲ್ಲಿ ಗ್ರಂಥವನ್ನು ಬರೆದಿದ್ದಾರೆ ಎಂಬುದಕ್ಕಿಂತ, ಬೇರೆಯವರಿಂದ ಬರೆಸಿದ್ದಾರೆ ಎಂಬದೇ ಬಹುತೇಕರ ಅಭಿಪ್ರಾಯವಾಗಿದೆ.

ಹೀಗೆ, ಕುಲಪತಿ ಸ್ಥಾನಕ್ಕೆ ಏರಲು ಯಾವುದೇ ಅರ್ಹತೆ ಇಲ್ಲದಿರುವುದರಿಂದ ಬೀದರ್‌ನಿಂದ ಕೊಡಗಿನವರೆಗಿನ ರಾಜಕಾರಣಿಗಳನ್ನು, ಕೆಲವು ಮಠಾಧೀಶರನ್ನು ಮತ್ತು ಕೆಲವು ಬುದ್ಧಿಜೀವಿಗಳನ್ನು ದುಂಬಾಲು ಬಿದ್ದಿದ್ದಾರೆ. ಹೇಗಾದರು ಮಾಡಿ ತನ್ನನ್ನು ಕುಲಪತಿ ಮಾಡಬೇಕೆಂದು ಕಾಡಿಬೇಡುತ್ತಿದ್ದಾರೆ. ಹೀಗೆ ಕಾಡಿಬೇಡಿ ವಿಸಿ ಆಗುವವರು ವಿವಿಯನ್ನು ಉಳಿಸಿ ಬೆಳೆಸುವುದುಂಟೆ?

ಇನ್ನು ಕಾಳೇಗೌಡ ನಾಗವಾರ ಅವರೂ ಕುಲಪತಿ ಸ್ಥಾನಕ್ಕೆ ಪ್ರಯತ್ನಿಸುತ್ತಿದ್ದಾರೆ. ಕಂಬಾರರ ಎರಡನೆ ಅವಧಿಯಲ್ಲಿ ಕೆಲವು ಕಳಪೆ ನೇಮಕಾತಿಗಳಲ್ಲಿ ಒಳ್ಳೆಯ ರುಚಿ ಕಂಡಿರುವ, ಓದು ಬರಹವನ್ನು 15-20 ವರುಷಗಳ ಹಿಂದೆಯೇ ನಿಲ್ಲಿಸಿರುವ ಕಾಳೇಗೌಡರು ಆಕಸ್ಮಾತಾಗಿ ವಿವಿಗೆ ವಕ್ಕರಿಸಿದರೆ, ಕನ್ನಡ ವಿವಿಯು ನಿರುದ್ಯೋಗಿ, ನಿರುಪದ್ರವಿ ಚಿಂತಕರೊಬ್ಬರಿಗೆ ವಿಶ್ರಾಂತಿ ಧಾಮವಾಗುವುದಂತೂ ದಿಟ!

ಈಗ ಕನ್ನಡ ವಿವಿಗೆ ಮುಂದಿನ ಕುಲಪತಿ ಯಾರು ಎಂಬುದರ ಮೇಲೆ ಅದರ ಅಳಿವು-ಉಳಿವು ನಿರ್ಧಾರವಾಗಲಿದೆ. ಕುಲಪತಿ ಆಯ್ಕೆ ಸಮಿತಿಯಲ್ಲಿ ಇಬ್ಬರು ಹಿರಿಯ ಸಂಶೋಧಕರಾದ ಹಂಪನಾ ಮತ್ತು ಎಂ. ಎಂ. ಕಲಬುರ್ಗಿ ಅವರು ಇರುವುದು ಸಾಂಸ್ಕೃತಿಕ ಲೋಕದ ಪುಣ್ಯ. ಅವರು ಯಾರನ್ನು ರಾಜ್ಯಪಾಲರ ಅನುಮೋದನೆಗೆ ಆಯ್ಕೆ ಮಾಡುತ್ತಾರೆ ಎಂಬುದರ ಮೇಲೆ ಅವರ ಘನತೆಯೂ, ಕನ್ನಡ ವಿವಿಯ ಭವಿಷ್ಯವೂ ನಿರ್ಧಾರವಾಗಲಿದೆ.

ಇವರಿಬ್ಬರು ಯಾವುದೇ ಕಾರಣಕ್ಕೂ ಮಲ್ಲೇಪುರಂ ಅವರ ಹೆಸರನ್ನು ಪ್ಯಾನಲ್‌ಗೆ ತರಬಾರದು; ಡಾ. ಕೆ ವಿ ನಾರಾಯಣ ಅವರನ್ನು ಪ್ಯಾನಲ್‌ಗೆ ತರಬೇಕು ಎಂಬುದೇ ಎಲ್ಲರ ಒತ್ತಾಸೆಯಾಗಿದೆ. ಹಾಗೆಯೇ ಮಲ್ಲೇಪುರಂ ಪರವಾಗಿ ಯಾರಿಂದಲೇ ಒತ್ತಡ ಬಂದರೂ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು ಅದನ್ನು ಪರಿಗಣಿಸದೆ ಡಾ. ಕೆ ವಿ ನಾರಾಯಣ ಅವರನ್ನು ರಾಜ್ಯಪಾಲರ ಸಹಿಗೆ ಅನುಮೋದಿಸಬೇಕಿದೆ. ಒಂದು ಪ್ರಮುಖ ವಿಶ್ವವಿದ್ಯಾಲಯವನ್ನು ಕಾಪಾಡುವ ಹೊಣೆ ತಮ್ಮ ಮೇಲಿದೆ ಎಂಬುದನ್ನು ಅವರೆಲ್ಲರೂ ಅರಿಯಬೇಕಿದೆ. ಅದು ಅವರಿಂದ ಸಾಧ್ಯವೇ....?

– ವರದಿಗಾರ


ಯಾವಾಗಲೂ ಮೂರು ಗಿಡಗಳನ್ನು ಬೆಳೆಯಿರಿ. ಒಂದು ನೆರಳಿಗೆ, ಒಂದು ಹಣ್ಣಿಗೆ, ಒಂದು ಸೌಂದರ್ಯಕ್ಕೆ-ಆಫ್ರಿಕಾದ ನಾಣ್ಣುಡಿ



ಕನಕಪುರ ಕುಮಾರಣ್ಣನ ಪಟಾಲಂ


ಹಾಗೆ ನೋಡಿದರೆ ಕನಕಪುರದಲ್ಲಿ ಜಾತ್ಯತೀತ ದಳಕ್ಕೆ ಒಬ್ಬ ನಾಯಕ ಅಂತ ಯಾರೂ ಇಲ್ಲ. ಸಿಂಧ್ಯಾರನ್ನು ಪಾತಾಳಕ್ಕೆ ತುಳಿದು ಬಿಡಬೇಕೆಂಬ ಹಠ ದೇವೇಗೌಡರಿಗಿದೆಯಾದರೂ ಅದಕ್ಕೊಬ್ಬ ಸ್ಥಳೀಯ ದಂಡನಾಯಕ ಇರಬೇಕಲ್ಲ.

ತಾಲ್ಲೂಕಿನಲ್ಲೀಗ ದಳದ ಕನಿಷ್ಠ ಐದು ಗುಂಪುಗಳಿವೆ. ತೆಂಗುನಾರು ಮಂಡಲಿ ಅಧ್ಯಕ್ಷ ದೂಂತೂರು ವಿಶ್ವನಾಥ್, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಿದ್ಧಮರಿಗೌಡ, ಮಾಜಿ ಕಾಂಗ್ರೆಸ್ ಎಂಎಲ್‌ಸಿ ಮರಿಲಿಂಗೇಗೌಡ, ಟೌನ್‌ನಲ್ಲೊಬ್ಬ ಪುಟ್ರಾಜ ಹಾಗೂ ಅರ್ಬನ್ ಬ್ಯಾಂಕಿನ ಕಳ್ಳ ನಾರಾಯಣಗೌಡ- ಇವರೇ ಆ ಪಂಚಪಾಂಡವರು.


ವಿಶ್ವನಾಥ

ಇವರಲ್ಲಿ ವಿಶ್ವನಾಥ್ ಹೊರತುಪಡಿಸಿದರೆ ಉಳಿದವ್ಯಾರಿಗೂ ಮಾತುಗಾರಿಕೆಯಾಗಲಿ, ನಯನಾಜೂಕು, ಸಂಸ್ಕೃತಿ ಎಂತದ್ದೂ ಇಲ್ಲ. ಪುಟ್ರಾಜನಂತೂ ಅಮ್ಮ, ಅಕ್ಕ, ನನ್ಮಕ್ಳಾ ಅನ್ನದೇ ಮಾತೇ ಶುರು ಮಾಡುವವನಲ್ಲ. ಇಂಥ ಖತರ್‌ನಾಕ್‌ಗಳನ್ನು ಕುಮಾರಸ್ವಾಮಿ ಇಲ್ಲಿ ಬೆಳೆಸುತ್ತಿದ್ದಾರೆ. ಈ ಹಿಂದೆ ಯು.ಕೆ. ಸ್ವಾಮಿ ದಳದ ಲೀಡರ್ ಆಗಿ ಭಾರಿ ಹೆಸರು ಮಾಡಿದ್ದರಾದರೂ ನಂತರ ದೇವೇಗೌಡರೊಂದಿಗಿನ ಅವರ ಸಂಬಂಧ ಹಳಸಿಕೊಂಡಿತ್ತು.

ಬಿಜೆಪಿ ಜೊತೆ ಮಿಲಾಕತ್ ಆಗುವಾಗಲೇ ಸಿಂಧ್ಯಾರನ್ನು ವಂಚಿಸಿದ ಕುಮಾರಸ್ವಾಮಿ, ಕನಕಪುರದಲ್ಲಿ ಮಾಡಿದ್ದೆಲ್ಲವೂ ಥರ್ಡ್ ಗ್ರೇಡ್ ರಾಜಕೀಯವನ್ನೆ.


ಪುಟ್ಟರಾಜು

ಹಾಗೆ ಹೇಳಬೇಕೆಂದರೆ ಕುಮಾರಸ್ವಾಮಿ ರಾಜಕೀಯಕ್ಕೆ ಕಾಲಿಟ್ಟದ್ದೆ ಕನಕಪುರದಲ್ಲಿ. ಸಾತನೂರು ಅಸೆಂಬ್ಲಿಯಿಂದ ಡಿ.ಕೆ. ಶಿವಕುಮಾರ್ ಎದುರು ಒಮ್ಮೆ ಸ್ಪರ್ಧಿಸಿ ಸೋತಿದ್ದ ಕುಮಾರಸ್ವಾಮಿ ನಂತರ ಕನಕಪುರದಿಂದ ಸ್ಪರ್ಧಿಸಿ ಎಂಪಿಯಾಗಿದ್ದರು.

ಕುಮಾರಸ್ವಾಮಿ ಪ್ರಕಾರ ಚುನಾವಣೆ ಅಂದರೆ ಜಾತಿ-ದುಡ್ಡು-ತೋಳ್ಬಲ ಈ ಮೂರೇ ಆಗಿವೆ. ಮುಂದೆ ಈ ಅನಿಷ್ಟಗಳನ್ನೇ ಬಳಸಿ ಕನಕಪುರವನ್ನು ರಣರಂಗ ಮಾಡಲು ಕುಮಾರಸ್ವಾಮಿ ರೆಡಿಯಾಗುತ್ತಿದ್ದಾರೆ.

ಮೊನ್ನಿನ ಗ್ರಾಮ ವಾಸ್ತವ್ಯ ಇದರ ಒಂದು ಭಾಗ ಅಷ್ಟೇ. ■

ಪ್ರತ್ಯಕ್ಷ ವರದಿ


ಪುಂಡರ ನಾಯಕನ ಗ್ರಾಮ ವಾಸ್ತವ್ಯ

ಅದು ಜಟ್ಟಿ ದೊಡ್ಡಿ.


ಮುಖ್ಯಮಂತ್ರಿ ಕುಮಾರಸ್ವಾಮಿ ಗ್ರಾಮ ವಾಸ್ತವ್ಯಕ್ಕೆ ಆರಿಸಿಕೊಂಡಿದ್ದ ಒಂದು ಪುಟ್ಟ ಹಳ್ಳಿ. ಗೌಡರ ವಿರೋಧಿಗಳಾದ ಸಿಂಧ್ಯಾ ಹಾಗೂ ಡಿ.ಕೆ. ಶಿವಕುಮಾರ್ ಇಲ್ಲಿ ಕಟ್ಟಿಕೊಂಡಿರುವ ಭದ್ರಕೋಟೆಗಳನ್ನು ಕೆಡುವುವ ಅಸಲಿ ಉದ್ದೇಶವೇ ಈ ಗ್ರಾಮವಾಸ್ತವ್ಯದ್ದಾಗಿತ್ತು. ಬೆಂಗಳೂರು-ಕನಕಪುರ ಹೆದ್ದಾರಿಯ ಮಧ್ಯೆ ಸಿಗುವ ಹಾರೋಹಳ್ಳಿಯಲ್ಲಿ ಎಡಕ್ಕೆ ತಿರುಗಿ 10 ಕಿ.ಮೀ. ಸಾಗಿ ನಂತರ ಮತ್ತೆ ಪೂರ್ವ ದಿಕ್ಕಿನೆಡೆ ಎಡಕ್ಕೆ ತಿರುಗಿ ಆರು ಕಿಲೋಮೀಟರ್ ಪ್ರಯಾಣಿಸಿದರೆ ಸಿಗುವುದೇ ಈ ಜಟ್ಟಿ ದೊಡ್ಡಿ. ಅಲ್ಲಿಂದ ಎರಡೇ ಫರ್ಲಾಂಗ್ ಮುಂದಕ್ಕೆ ಒಂದು ಭಾರಿ ಎಸ್ಟೇಟ್ ಇದೆ. ಕರ್ನಾಟಕದ ಭಾವೀ ಮುಖ್ಯಮಂತ್ರಿ ಎಂದೇ ಪ್ರಚಾರಕ್ಕೆ ಬರುತ್ತಿರುವ ಕೇಂದ್ರ ಸಚಿವ ಎಂ.ವಿ. ರಾಜಶೇಖರನ್‌ರ ಎಸ್ಟೇಟ್ ಅದು. ಆದರ ಬಹುಪಾಲು ಜಾಗ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿದ್ದಾಗಿದೆ.

■ ಬಿಳಿದಾಳೆ ಈಶ

ಕುಮಾರಸ್ವಾಮಿ ಬಿಟ್ಟುಬಿಡದೆ ಮಾಡುತ್ತಿರುವ ಗ್ರಾಮ ವಾಸ್ತವ್ಯ ಎಂಬ ಪ್ರೋಗ್ರಾಂನ ಅಸಲಿ ಗುಣಲಕ್ಷಣ ಏನು, ಜನರಿಗಾಗುವ ಉಪಯೋಗವೇನೆಂದು ಪತ್ತೆಹಚ್ಚಲೆಂದೇ 'ಲಂಕೇಶ್' ತಂಡ ಆಗಸ್ಟ್ 3 ರ ಸಂಜೆಯೇ ಜಟ್ಟದೊಡ್ಡಿಯಲ್ಲಿತ್ತು. ಆ ಗ್ರಾಮದ ಲಕ್ಕಣ್ಣ-ಲಕ್ಷ್ಮಿದೇವಮ್ಮರ ಮನೆಯಲ್ಲೇ ರಾತ್ರಿ ಸಿಎಂ ಉಂಡು-ನಿದ್ದೆ ಮಾಡುವುದಿತ್ತು. ಸಂಜೆಯ ವೇಳೆಗಾಗಲೇ ಹತ್ತಾರು ಸರ್ಕಾರಿ ಕಾರು-ಜೀಪುಗಳು ಅರ್ಜೆಂಟಾಗಿ ಓಡಾಡುತ್ತಾ ಹಾಸಿಗೆ, ದಿಂಬು, ಫ್ಯಾನು, ಸಿಂಹಾಸನದಂತಹ ಕುರ್ಚಿಗಳನ್ನು ತಂದು ಇಳಿಸುತ್ತಿದ್ದವು. ಸರ್ಕಾರದ ಮುಖ್ಯಸ್ಥನೊಬ್ಬ ತಾನೇ ಕುಗ್ರಾಮವೊಂದಕ್ಕೆ ಬಂದು, ಜನರೊಂದಿಗೆ ಬೆರೆತು ಅವರ ಕಷ್ಟ-ಸುಖ ಕೇಳಿದರೆ ಅದು ಮೆಚ್ಚಬೇಕಾದ ವಿಚಾರ ಹೌದು. ಆದರೆ ಕುಮಾರಸ್ವಾಮಿಗಾಗಲಿ ಮತ್ತವರ ಚೇಲಾ ಪುಢಾರಿ ಪಟಾಲಂಗಾಗಲಿ ಅದು ಬೇಕಿರಲಿಲ್ಲ ಎಂಬುದಕ್ಕೆ ಪ್ರತಿ ಹತ್ತು ಹೆಜ್ಜೆಗೊಂದರಂತೆ ತಲೆ ಎತ್ತಿ ನಿಂತಿದ್ದ ಕಟೌಟ್, ಬ್ಯಾನರ್, ವಿನಯಲ್‌ಗಳೇ ಸಾಕ್ಷಿಯಾಗಿದ್ದವು. ಒಂದೊಂದು ಹಳ್ಳಿಯಲ್ಲೂ ನಾಲ್ಕಾರು ವಿನಯಲ್‌ಗಳು, ಅದರೊಳಗೆ ಲೋಕನಾಯಕನ ರೀತಿ ಕೈ ಅಲ್ಲಾಡಿಸುತ್ತಿರುವ ಕುಮಾರಣ್ಣನೂ, ಉಳಿದ ಜಾಗಪೂರ್ತಿ ಆಯಾ ಊರಿನ ಹುಡುಗರ ನಾಲ್ಕಾಕೆ ಸ್ಟೈಜಿನ ಫೋಟೋಗಳೇ ತುಂಬಿದ್ದವು. ಈ ಹದಿವಯಸ್ಸಿನ ಹುಡುಗರಲ್ಲಿ ಬಹುಪಾಲು ನಿರುದ್ಯೋಗಿಗಳಾಗಿದ್ದು, ಭವಿಷ್ಯದ ಪುಢಾರಿ ಕಳೆ ರಾರಾಜಿಸುವಂತೆ ಫೋಟೋ ತೆಗೆಸಿಕೊಂಡು ಬೀಗುತ್ತಿದ್ದರು. ಇಡೀ ಕನಕಪುರ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಸಾವಿರ ಇಂಥ ವಿನಯಲ್‌ಗಳು ನೇತಾಡುತ್ತಿದ್ದವು. ಒಂದೊದಕ್ಕೂ ಎರಡು ಸಾವಿರ ಖರ್ಚೆಂದು ಲೆಕ್ಕ ಹಾಕಿದರೆ ಅದೇ ಎರಡು ಲಕ್ಷದಷ್ಟಾಗುತ್ತದೆ.




ಕುಮಾರಸ್ವಾಮಿ ಹೊರಟದ್ದು ಹಳ್ಳಿಯ ಬಡರೈತನೊಬ್ಬನ ಮನೆಗಾದರೂ ಇಡೀ ವಾತಾವರಣದಲ್ಲಿ ಒಂಥರಾ ಎಲೆಕ್ಷನ್ ಅಮಲಿತ್ತು. ಸಂಜೆ ಏಳೂವರೆಗೆ ಬರಬೇಕಿದ್ದ ಸಿ.ಎಂ. ಜಟ್ಟದೊಡ್ಡಿ ತಲುಪಿದ್ದು ನಡುರಾತ್ರಿ ಒಂದೂವರೆಗೆ. ಈತ ಕನಕಪುರ ತಾಲ್ಲೂಕಿನ ಗಡಿ ಪ್ರವೇಶಿಸಿದ್ದು ರಾತ್ರಿ 9 ಕ್ಕೆ ಆದರೂ, ಅಲ್ಲಿಂದ ಕೇವಲ 20 ಕಿ.ಮೀ. ದೂರದಲ್ಲಿದ್ದ ಜಟ್ಟದೊಡ್ಡಿ ಸೇರಲು 5 ಗಂಟೆ ಏಕೆ ಬೇಕಾಯಿತೆಂಬುದೇ ಪ್ರಶ್ನಾರ್ಹ.



ದಾರಿಯುದ್ದಕ್ಕೂ ಜನರ ಅಹವಾಲು ಸ್ವೀಕರಿಸುವ ನಾಟಕ ನಡೆದೇ ಇತ್ತಾದರೂ ಗಬ್ಬಾಡಿ, ಹಾರೋಹಳ್ಳಿ, ಮರಳವಾಡಿ, ಅಂಜಿಬಾರೆ, ಚಿಕ್ಕಸದೊಡ್ಡಿ, ಅತ್ತಿಗುಪ್ಪೆ, ಜುಟ್ಟೇಗೌಡನ ಪಲಸೆ, ಕಮಲಾಪುರಗಳಲ್ಲಿ ಜಾತ್ಯತೀತ ದಳದವರ ಶಕ್ತಿ ಪ್ರದರ್ಶನವೇ ಎದ್ದು ಕಾಣುತ್ತಿತ್ತು. ದಾರಿ ನಡುವೆ ಸಿಗುವ ಸ್ವಲ್ಪ ದೊಡ್ಡ ಹಳ್ಳಿಗಳಾದ ಹಾರೋಹಳ್ಳಿ-ಮರಳವಾಡಿಯ ಬಾರ್‌ಗಳು, ವೈನ್‌ಸ್ಟೋರ್‌ಗಳಲ್ಲಿ ಭಾರಿ ಜನಜಂಗುಳಿ, ಜೆಡಿಎಸ್‌ನ ಸ್ಥಳೀಯ ಪುಢಾರಿಗಳ ಲೆಕ್ಕದಲ್ಲಿ ಅಲ್ಲಿಗೆ ಬಂದವರಿಗೆಲ್ಲಾ ಪುಕ್ಕಟೆ ಲಿಕ್ಕರ್ ಸರಬರಾಜು ನಡೆದಿತ್ತು.

ಇಂಥ ಅಬ್ಬರ, ಅಮಲಿನ ರಾಶಿಯಲ್ಲಿ ಕುಂದುಕೊರತೆ ಹೇಳಿಕೊಳ್ಳುವಷ್ಟು ಎಚ್ಚರವಾದರೂ ಜನರಿಗೆ ಹೇಗೆ ಬರಬೇಕು?

ಒಟ್ಟಾರೆ ಇಂಥ ಅಸಂಬದ್ಧ ಸನ್ನಿವೇಶದಲ್ಲೇ ಕುಮಾರಸ್ವಾಮಿ ತಮ್ಮ ಹಿಂದೆ ಅರವತ್ತು ಕಾರುಗಳ ಮೆರವಣಿಗೆಯಲ್ಲಿ ಜಟ್ಟದೊಡ್ಡಿ ಪ್ರವೇಶಿಸಿದಾಗ ನಡುರಾತ್ರಿ ಎರಡು ಸಮೀಪಿಸುತ್ತಿತ್ತು. ಅಷ್ಟರಲ್ಲಾಗಲೇ ಜಡಿಮಳೆ, ಕೆಸರು, ಚಳಿ, ಬಳಲಿಕೆಗಳಿಂದ ಜನ, ಅಧಿಕಾರಿಗಳು, ಪೊಲೀಸರೆಲ್ಲಾ ಸುಸ್ತಾಗಿದ್ದರೂ ಸಿ.ಎಂ. ಕುಮಾರಸ್ವಾಮಿ ಮಾತ್ರ ತಮ್ಮ ನಡುರಾತ್ರಿಯ ಮೀಟಿಂಗ್ ಶುರು ಮಾಡೇಬಿಟ್ಟರು. ಆದರೆ ಅಲ್ಲಿ ಗ್ರಾಮಸ್ಥರಿಗಿಂತಾ ಲೋಕಲ್ ಪುಢಾರಿಗಳಾದ ಭುಜಂಗಯ್ಯ, ಜುಂಜೇಗೌಡ, ಮರಿಲಿಂಗೇಗೌಡ, ಸಿದ್ಧಮರಿಗೌಡರೊಂದಿಗೆ ಮಾತಾಡಿದ್ದೇ ಹೆಚ್ಚು. ಶತ್ರು ಸಂಹಾರದ ವಿಚಾರ ಬಂದಾಗ (ಕನಕಪುರದಲ್ಲಿ ಅವತ್ತಿನ ಮಟ್ಟಿಗೆ ಸಿಂಧ್ಯಾ ಎಂದುಕೊಳ್ಳಿ) ದೇವೇಗೌಡ & ಸನ್ಸ್‌ಗೆ ಊಟ, ನಿದ್ರೆ ಯಾವುದು ಲೆಕ್ಕಕ್ಕಿಲ್ಲ. ಹೀಗಾಗಿ ಭಾರಿ ಅಬ್ಬರದ ಪ್ರಚಾರ ಪಡೆದುಕೊಂಡಿದ್ದ ಸಿ.ಎಂ. ಗ್ರಾಮ ವಾಸ್ತವ್ಯವು ಒಂದಷ್ಟು ಸ್ಥಳೀಯ ಪುಂಡು-ತುಂಡು ಲೀಡರ್‌ಗಳೊಂದಿಗೆ ಕುಮಾರಸ್ವಾಮಿ ನಡೆಸಿದ ಸಮಾಲೋಚನಾ ಸಭೆಯಾಗಷ್ಟೇ ಕೊನೆಯಾಯಿತು.



ಈ ಭೇಟಿಯಿಂದಾಗಿ ಜಟ್ಟದೊಡ್ಡಿಗೆ ಒಂದು ಅತೀ ಉತ್ತಮವಾದ ಟಾರು ರಸ್ತೆಯಾಯಿತು. ಅಲ್ಲಿದ್ದ ಹತ್ತಾರು ಮನೆಗಳಿಗೆ ಶೌಚಾಲಯ


ರಾಜಶೇಖರನ್‌ರವರ ಎಸ್ಟೇಟ್ ಗೇಟನ್ನೂ ದಾಟಿ ಸಾಗುವ ಸರ್ಕಾರಿ ಟಾರ್ ರಸ್ತೆ


ಕೂಲಿಗಳ ಮನೆ ಬಾಗಿಲಿನ ತನಕ ಬಂದಿರುವ ರಸ್ತೆ

ಕುಮಾರಸ್ವಾಮಿಯ ಜಟ್ಟದೊಡ್ಡಿ ಗ್ರಾಮ ವಾಸ್ತವ್ಯದಿಂದ ಅತೀ ಹೆಚ್ಚಿನ ಲಾಭ ಪಡೆದವರೆಂದರೆ ಕಾಂಗ್ರೆಸ್‌ನ ಕೇಂದ್ರ ಸಚಿವ ಎಂ.ವಿ. ರಾಜಶೇಖರನ್!

17 ಲಕ್ಷ ರೂಪಾಯಿ ಸರ್ಕಾರಿ ಖರ್ಚಿನಲ್ಲಿ 50 ಎಂಎಂ ದಪ್ಪದ ಒಂದು ಸೊಗಸಾದ ಟಾರ್ ರಸ್ತೆ ಈಗ ರಾಜಶೇಖರನ್‌ರ ಎಸ್ಟೇಟ್ ಮನೆ ಬಾಗಿಲಿನವರೆಗೂ ಬಂದಿದೆ. ಈ ಜಟ್ಟದೊಡ್ಡಿ ಗ್ರಾಮದಿಂದ ಮುಂದಕ್ಕೆ ಅರ್ಧ ಕಿಲೋಮೀಟರ್ ದೂರದಲ್ಲಿ ರಾಜಶೇಖರನ್‌ರ ಬೃಹತ್ ಎಸ್ಟೇಟ್ ಒಂದಿದೆ. ಕರ್ನಾಟಕ ತಮಿಳುನಾಡು ಗಡಿಯಂಚಿನಲ್ಲಿರುವ ಈ ಎಸ್ಟೇಟ್‌ನ ಬಹುಭಾಗ ಅರಣ್ಯ ಪ್ರದೇಶವಾಗಿದೆ. ಅರ್ಥಾತ್ ಇಲ್ಲಿ ಸರ್ಕಾರಿ ಭೂಮಿ ಕದ್ದು ತಮ್ಮ ವಿಸ್ತಾರವಾದ ಎಸ್ಟೇಟ್ ಅನ್ನು ರಾಜಶೇಖರನ್ ರೂಢಿಸಿಕೊಂಡಿದ್ದಾರೆ. ಕೆಲವರು ಇದು ನೂರೆಕರೆ ಅಂದರೆ, ಇನ್ನೂರೆಕರೆ ಅಂತಲೂ ಹೇಳುವವರಿದ್ದಾರೆ. ಆದರೆ ಅವರ ತೋಟದಲ್ಲೇ ಇರುವ ತುಮಕೂರಿನ ಕೂಲಿಯೊಬ್ಬಾಕೆ 'ಈ ತ್ವಾಟ ನಾಲ್ಕೂವರೆ ಕಿಲೋಮೀಟರ್ ಐತೆ ಸ್ವಾಮಿ' ಎಂದಳು. ಅಲ್ಲಿ ಕೂಲಿಗಳಿಗಾಗಿ ಎಂಟು ಮನೆ, ಕೊಟ್ಟಿಗೆ, ಸಾಹ್ಕಾರರ ಮನೆ, ಟ್ರ್ಯಾಕ್ಟರ್, ಬೋರ್‌ವೆಲ್, ಮಿನಿ ವಾಟರ್ ಟ್ಯಾಂಕ್ ಎಲ್ಲಾ ಇವೆ. ಆದರೆ ಟಾರು ರಸ್ತೆ ಮಾತ್ರ ಇರಲಿಲ್ಲ. ಮರಳವಾಡಿಯಿಂದ ಏಳು ಕಿಲೋಮೀಟರ್ ಮಣ್ಣುರಸ್ತೆ ಹಾದು ಈ ತೋಟ ತಲುಪಬೇಕಿದ್ದ ರಾಜಶೇಖರನ್‌ಗೆ ಇನ್ನು ಮುಂದೆ ಆ ಕಷ್ಟ ಇಲ್ಲ. ಜಟ್ಟದೊಡ್ಡಿಗೆ ಬರುವ ಮುನ್ನ ಮುಖ್ಯಮಂತ್ರಿ ನಿಧಿಯಿಂದ 17 ಲಕ್ಷ ಮಂಜೂರು ಮಾಡಿ, ಸೊಗಸಾದ ಟಾರು ರಸ್ತೆ ಮಾಡಿಸಿಕೊಟ್ಟಿದ್ದಾರೆ ಸಿ.ಎಂ. ಸಾಹೇಬರು. ಈ ರಸ್ತೆ ಮರಳವಾಡಿಯಿಂದ ಶುರುವಾಗಿ ಜಟ್ಟದೊಡ್ಡಿ ಹಾದು ರಾಜಶೇಖರನ್‌ರ ಎಸ್ಟೇಟ್‌ನೊಳಕ್ಕೂ ಒಂದು ಫರ್ಲಾಂಗು ಸಾಗಿ ಮನೆ ಬಾಗಿಲಿನವರೆಗೂ ಬಂದಿದೆ ಮತ್ತು ಅಲ್ಲಿಗೇ ಕೊನೆಯಾಗಿದೆ.

ಇಲ್ಲಿ ನಮ್ಮ ಪ್ರಶ್ನೆ ಇಷ್ಟೆ.

ಜಗತ್ತಿನ ಎಲ್ಲವೂ ಅವಲಂಬಿಸಿರುವ ನೀರು ಮತ್ತು ಗಾಳಿ ಇವತ್ತು ಕಸದತೊಟ್ಟಿಗಳಾಗಿವೆ-ಜಾಕ್ ಕೊಸ್ಟೋ

ಅರ್ಜಿ ಬರೆಯುವುದೇ ಒಂದು ದಂಧೆ

ಕುಮಾರಸ್ವಾಮಿ ಗ್ರಾಮ ವಾಸ್ತವ್ಯಕ್ಕೆಂದು ಕನಕಪುರಕ್ಕೆ ಬಂದು ಹೋಗಿದ್ದೇ ನೆಪವಾಗಿ ಇಡೀ ತಾಲ್ಲೂಕಿನ ಮುನ್ನೂರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಎಷ್ಟು ಅರ್ಜಿ ಅಹವಾಲುಗಳು ಸೃಷ್ಟಿಯಾಗಿವೆ ಗೊತ್ತೆ?

ಹತ್ತಿರತ್ತಿರ ಎಂಟು ಸಾವಿರ!

ಪ್ರತಿ ಹಳ್ಳಿಯ ಜೆಡಿಎಸ್ ತುಂಡು ನಾಯಕನೂ ವೃದ್ಧಾಪ್ಯ ವೇತನ, ಆಶ್ರಯ ಮನೆ, ಸೈಟು, ಹಸು, ಕುರಿ ಸಾಲ, ಅಂಗವಿಕಲರ ಮಾಶಾಸನ ಕೊಡಿಸುವುದಾಗಿ ಜನರನ್ನು ನಂಬಿಸಿ ಐವತ್ತು, ನೂರರಂತೆ ಹಣ ಕಿತ್ತಿದ್ದಾರೆ. ಕೋಳಗೊಂಡನಹಳ್ಳಿ, ಹುಣಸನಹಳ್ಳಿ, ಕೋಡಿಹಳ್ಳಿ, ದೊಡ್ಡಾಲಳ್ಳಿ, ಸಾತನೂರು, ಹಾರೋಹಳ್ಳಿ, ಮರಳವಾಡಿ, ಕಬ್ಬಾಳು, ಗಬ್ಬಾಡಿ ಗ್ರಾಮ ಪಂಚಾಯಿತಿ ಹೆಡ್‌ಕ್ವಾರ್ಟರ್‌ಗಳಲ್ಲಿ ಜುಜುಬಿ ಅರ್ಜಿ ಬರೆದುಕೊಟ್ಟೇ ನಾಲ್ಕೈದು ಸಾವಿರ ರೂಪಾಯಿ ಸಂಪಾದಿಸಿದ ಜನ ಇದ್ದಾರೆ. ನಾಲ್ಕಾರು ಕಡೆ ಕುಮಾರಸ್ವಾಮಿಯೇ ಜನರಿಂದ ಅರ್ಜಿ ಸ್ವೀಕರಿಸಿದರೂ ಉಳಿದವು ತುಂಡು ಲೀಡರ್‌ಗಳ ಮೂಲಕ ಅಧಿಕಾರಿಗಳ ಕೈ ಸೇರಿವೆ. ಅವಕ್ಕೆ ಮುಂದೆಂದೂ ಮೋಕ್ಷ ಸಿಗುವುದಿಲ್ಲ ಎಂಬುದು ಕುಮಾರಸ್ವಾಮಿಗೂ ಗೊತ್ತಿದೆ. ಉಳಿದಂತೆ ಆಗಸ್ಟ್ 4 ರಂದು ಕನಕಪುರದಲ್ಲಿ ನಡೆದ ಸಮಾವೇಶದಲ್ಲಿ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇವರೆಲ್ಲಾ ಸ್ತ್ರೀಶಕ್ತಿ ಸಂಘದವರು. ಕುಮಾರಣ್ಣ ನಿಮ್ಮ ಸಂಘಕ್ಕೆ ದುಡ್ಡು ಕೊಡುಸ್ತಾರೆ ಎಂದು ನಂಬಿಸಿ ಅವರನ್ನೆಲ್ಲಾ ಕರೆತರಲಾಗಿತ್ತು.

ಬಂತೆಂಬುದು ನಿಜ. ಆದರೆ ಇವಿಷ್ಟೇ ಹಳ್ಳಿಯೊಂದರ ಮೂಲ ರಚನೆಯನ್ನು, ಆರ್ಥಿಕ-ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾಯಿಸಿಬಿಡುವುದಿಲ್ಲ. ಇಷ್ಟಕ್ಕೂ 17 ಲಕ್ಷ ರೂ. ಖರ್ಚಿನಲ್ಲಿ ಒಂದೇ ವಾರದಲ್ಲಿ ಈ ರಸ್ತೆ ನಿರ್ಮಿಸಿದ್ದು ಗ್ರಾಮಸ್ಥರಿಗಾಗಲ್ಲ, ಬದಲಾಗಿ ಗೌಡರ ಹೊಸ ಕಾಂಗ್ರೆಸ್ ಕಾಲಾಳು ರಾಜಶೇಖರನ್‌ರ ತೋಟಕ್ಕೆ ಆ ಸೌಲಭ್ಯ ಕಲ್ಪಿಸಲು ಮಾತ್ರ. (ವಿವರಗಳಿಗೆ ಬಾಕ್ಸ್ ನೋಡಿ).

ಕುಮಾರಸ್ವಾಮಿಯ ರಾಜಕಾರಣದ ಶೈಲಿ ಹೇಗಿದೆ ಎಂದರೆ ಜಾತಿ ಭಾವನೆ ಕೆರಳಿಸುವುದು, ಯಥೇಚ್ಛ ಹಣ ಹರಿಸಿ ಹಳ್ಳಿ ಹಳ್ಳಿಗಳಲ್ಲಿ ಪುಂಡು ಬೆಂಬಲಿಗರ ಗುಂಪು ಕುಮಾರ ಸ್ವಾಮಿ ನಡೆಸಿದ್ದ ಪುಂಡು ರಾಜಕೀಯವನ್ನು ಇಡೀ ಕರ್ನಾಟಕ ನೋಡಿದ್ದಾಗಿದೆ. ಈಗ ಕನಕಪುರದಲ್ಲೂ ಅದೇ ಹೀನಪ್ರವೃತ್ತಿ ಕಾಣುತ್ತಿದೆ. ಮರಾಠ ಅಲ್ಪಸಂಖ್ಯಾತ ಜಾತಿಗೆ ಸೇರಿದ ಸಿಂಧ್ಯಾರನ್ನು ಮಣಿಸಲು ಜನರಲ್ಲಿ ಒಕ್ಕಲಿಗ ಜಾತಿ ಭಾವನೆಯನ್ನು, ಪ್ರಚೋದಿಸುವುದು, ಅತ್ತ ಡಿಕೆಶಿಯನ್ನು ಸುಸ್ತು ಮಾಡಿಸಲು ದುಡ್ಡು ಚೆಲ್ಲಿ ಜನರನ್ನು ಖರೀದಿಸುವುದು. ಈ ಮೂರನೇ ದರ್ಜೆ ರಾಜಕೀಯಕ್ಕೆ ಗ್ರಾಮ ವಾಸ್ತವ್ಯವೆಂಬ ಆದರ್ಶದ ಲೇಪನ ನೀಡಿ, ಪುಗಸಟ್ಟೆ ಪ್ರಚಾರ ಗಿಟ್ಟಿಸುವುದು ಕುಮಾರಸ್ವಾಮಿಯ ಅಸಲಿ ಉದ್ದೇಶ.



ಕನಕಪುರದಲ್ಲಿ ಕುಮಾರಣ್ಣನ ಪುಂಡರ ಕಟೌಟುಗಳದ್ದೇ ಕಾರುಬಾರು


ಕಟ್ಟಿಕೊಳ್ಳುವುದು, ಅಂಥ ಯುವಕರಿಗೆ ಪುಢಾರಿ ರಾಜಕೀಯವೇ ಫುಲ್‌ಟೈಂ ಕೆಲಸವಾಗುವಂತೆ ಮಾಡುವುದು... ಇವೇ ಈ ಘನನಾಯಕನ ಗ್ರಾಮವಾಸ್ತವ್ಯದ ಅಸಲಿ ಉದ್ದೇಶ.

ಕನಕಪುರ ಕ್ಷೇತ್ರದಲ್ಲೂ ಆಗುತ್ತಿರುವುದು ಇದೇನೆ. ಬಂಗಾರಪ್ಪ ಬಿಜೆಪಿಗೆ ರಾಜೀನಾಮೆ ಕೊಟ್ಟು ಮತ್ತೆ ಸಂಸತ್‌ಗೆ ಸ್ಪರ್ಧಿಸಿದಾಗ ಶಿವಮೊಗ್ಗದಲ್ಲಿ ದಳ ಲೆಕ್ಕಕ್ಕೂ ಇರಲಿಲ್ಲ. ಅಂತಲ್ಲೂ ಹದಿನೈದು ದಿನ ಠಿಕಾಣಿ ಹಾಕಿ, ಕೋಟ್ಯಂತರ ರೂಪಾಯಿ ಖರ್ಚು ಮಾಡಿ ದಳದ ಅಭ್ಯರ್ಥಿ ಲಕ್ಷಚಿಲ್ಲರೆ ಓಟು ಗಳಿಸಿ ಕಾಂಗ್ರೆಸ್ಸನ್ನು ಸೋಲಿಸಿದ್ದು ಇದೇ ಕುಮಾರ ಸ್ವಾಮಿ. ಇನ್ನು ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ

ಈ ದಿನ ಕನಕಪುರ ತಾಲ್ಲೂಕಿನ ಯಾವ ಮೂಲೆಗೆ ಹೋದರು ಕಾಣಸಿಗುವ ಜೆಡಿಎಸ್‌ನವರ ಕಟೌಟ್, ವಿನಯಲ್‌ಗಳನ್ನು ಅಲ್ಲಿ ಕಾಣಸಿಗುವ ಪಡ್ಡೆ ಹುಡುಗರನ್ನು ನೋಡಿದರೆ ಸಾಕು ಈ ನಾಡಿನ ಮುಖ್ಯಮಂತ್ರಿ ಕುಮಾರ ಸ್ವಾಮಿ ಒಬ್ಬ ಪುಂಡರ ನಾಯಕನಂತೆ ಮಾತ್ರ ಕಾಣುತ್ತಾರೇ ಹೊರತು ಪ್ರಬುದ್ಧ ನಾಯಕನಂತಲ್ಲ.

ಈ ಮದೋನ್ಮತ್ತರ ಅಬ್ಬರದಲ್ಲಿ ಜಟ್ಟಿದೊಡ್ಡಿಯಂತಹ ಗ್ರಾಮಗಳ, ಬಡರೈತರ, ಅರೆ ವಿದ್ಯಾವಂತ ಯುವ ಜನತೆಯರ, ಮಹಿಳೆಯ ಅಸಹಾಯಕತೆ, ಕಷ್ಟ ಕಾರ್ಪಣ್ಯಗಳು ಬಗೆಹರಿಯುತ್ತವೆಂಬುದು ಭ್ರಮೆ ಮಾತ್ರ. ■

ರಾಜಶೇಖರನ್‌ಗೆ ಅಡ್ವಾನ್ಸ್ ಗಿಫ್ಟ್!



ಜನರ ತೆರಿಗೆ ಹಣದಲ್ಲಿ ಸರ್ಕಾರಿ ರಸ್ತೆ ಮಾಡುವಾಗ ಅದನ್ನು ಖಾಸಗಿ ಎಸ್ಟೇಟ್‌ನೊಳಗೂ ವಿಸ್ತರಿಸಬಹುದೇ?

ದೇವೇಗೌಡರಿಗೆ ತಮ್ಮ ಹೊಸ ರಾಜಕೀಯ ದಾಳ ನಡೆಸಲು ಕಾಂಗ್ರೆಸ್‌ನ ರಾಜಶೇಖರನ್ ಸ್ನೇಹ ಬೇಕಿದ್ದಿರಬಹುದು. ಆದರೆ ಇದು ಸಾರ್ವಜನಿಕ ಹಣದ ದುರ್ಬಳಕೆ ಅಲ್ಲವೆ?

ಈ ಅಕ್ರಮ ಸವಲತ್ತು ಪಡೆದುಕೊಳ್ಳಲು ರಾಜಶೇಖರನ್‌ಗೆ ನಾಚಿಕೆಯಾಗಬೇಕಿತ್ತು.

ಅಂದಹಾಗೆ ಕೇವಲ ಐದು ದಿನದಲ್ಲೇ ಈ ರಸ್ತೆ ನಿರ್ಮಿಸಿದ್ದು ಕಾವೇರಿ ಕನ್‌ಸ್ಟ್ರಕ್ಷನ್ಸ್ ಎಂಬ ಖಾಸಗಿ ಸಂಸ್ಥೆ. ಗುತ್ತಿಗೆದಾರ ಮಾಲೀಕ ಬೇರ್‍ಯಾರೂ ಅಲ್ಲ, ಹಾಸನದಲ್ಲಿ ದೇವೇಗೌಡರ ಬಲಗೈ ಭಂಟರಾಗಿರುವ ಮಲ್ಲೇಶಪ್ಪ ಮತ್ತು ಬ್ರದರ್ಸ್.

ಕುಮಾರಸ್ವಾಮಿಯ ಜಟ್ಟಿದೊಡ್ಡಿ ಗ್ರಾಮ ವಾಸ್ತವ್ಯದಿಂದ ಲಕ್ಕಪ್ಪನಿಗೆ ಸಿಕ್ಕಿದ್ದು ಒಂದು ಜುಜುಬಿ ಟಾಯ್ಲೆಟ್ ಮಾತ್ರ. ಆದರೆ ಬೇರೆ ಇನ್ಯಾರ್‍ಯಾರಿಗೋ ಏನೇನೆಲ್ಲಾ ಸಿಕ್ಕಿದೆ ನೋಡಿ!

ಈಗ ಹೊಸದಾಗಿ ಏರ್ಪಡುತ್ತಿರುವ ಗೌಡ-ರಾಜಶೇಖರನ್ ಸ್ನೇಹ ಹಾಗೂ ಭವಿಷ್ಯದ ಅನೈತಿಕ ರಾಜಕೀಯ ಬಾಂಧವ್ಯಕ್ಕೆ ಅಡ್ವಾನ್ಸ್ ಆಗಿ ನೀಡಿರುವ ಸಣ್ಣ ಗಿಫ್ಟ್ ಇದಿರಬಹುದೆಂದೂ ಹೇಳಲಾಗುತ್ತಿದೆ.

ಹೌದಾ ಶರಣ ರಾಜಶೇಖರನ್‌ರವರೆ?

ಆತರ ಆಕ್ಟ್ ಮಾಡೋಕೆ ನಾನೇನು ರಾಜಕುಮಾರನ

ಎಡೂರಪ್ಪನನ್ನು ಮುಖ್ಯಮಂತ್ರಿ ಮಾಡಲು ಮೂರು ತಿಂಗಳ ಮೊದಲೇ ಭಜನೆ ಆರಂಭಿಸಿರುವ ಭಜರಂಗಿಗಳ ಪಿತಾಶ್ರೀಗಳು, ಕಂಡಕಂಡ ಜ್ಯೋತಿಷಿಗಳನ್ನೆಲ್ಲಾ ಸಂಧಿಸಿ "ಎಡೂರಪ್ಪ ಮುಖ್ಯಮಂತ್ರಿಯಾಗುವುದು ಅವರ ಜಾತಕದಲ್ಲೇ ಇರುವುದರಿಂದ ಅದನ್ನು ತಪ್ಪಿಸಲು ಯಾವ ಶನಿಯಿಂದಲೂ ಸಾಧ್ಯವಿಲ್ಲ ಬೇಕಿದ್ದರೆ ನೀವೇ ನೋಡಿಕೊಳ್ಳಿ" ಎಂದು ಎಡೂರಪ್ಪ ಮುಖ್ಯಮಂತ್ರಿಯಾಗಲು ಕೂಡಿಬಂದಿರುವ ಜಾತಕ ಫಲದ ಜೆರಾಕ್ಸ್ ಪ್ರತಿಯನ್ನು ಪದ್ಮನಾಭನಗರದ ಮನೆಯ ಕಾಂಪೌಂಡಿನಲ್ಲಿ ಬಿಸಾಡಿ ಹೋಗಿದ್ದರಂತಲ್ಲಾ. ಸದರಿ ಜೆರಾಕ್ಸ್ ಜನ್ಮಕುಂಡಲಿ ಎಸೆದವರೇ ಕೆರೆ ಹಾವನ್ನು ಎಸೆದು ಹೋಗಿರಬೇಕು, ನಾಗರಹಾವು ತಂದಿದ್ದರೆ ಅದು ಅವರನ್ನೆ ಕಚ್ಚುವ ಸಂಭವವಿತ್ತು, ಆದ್ದರಿಂದ ಕೆರೆ ಹಾವಿನವರದ್ದೇ ಈ ಕೆಲಸವೆಂದು ಗೌಡರ ಪರಿಚಾರಕರು ಪಿಸುಗುಟ್ಟುತ್ತಿದ್ದಾರಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

* * * * * * * * * * *

ಗೌಡರ ಕಾಂಪೌಂಡಿನಲ್ಲಿ ಸಿಕ್ಕ ಎಡೂರಪ್ಪನ ಜನ್ಮಕುಂಡಲಿಯ ಪ್ರಕಾರ,

"ಎಡೂರಪ್ಪ ಹುಟ್ಟಿರುವುದು ಅಕ್ಟೋಬರ್ ಒಂದರಂದು. ಮುಖ್ಯಮಂತ್ರಿ ಪದಗ್ರಹಣವಿರುವುದು ಅಕ್ಟೋಬರ್ ಮೂರರಂದು. ಈ ನಡುವಿನ ಅವಧಿಯಲ್ಲಿ ಕಾಕಾವಾಹನನ ಕಾಕದೃಷ್ಟಿಯಿಂದ ಅವರು ಆದಷ್ಟು ತಪ್ಪಿಸಿಕೊಂಡು ತಿರುಗಬೇಕಿದೆ. ಈಗಾಗಲೇ ಸದರಿ ಕಾಕಾವಾಹನ ಸಿಂಧ್ಯಾ, ಸಿದ್ರಾಮು, ಪ್ರಕಾಶ್ ಎಂಬ ಬುಧ, ಗುರು, ಶುಕ್ರ ಗ್ರಹಗಳನ್ನು ತನ್ನ ದೃಷ್ಟಿ ಮಾತ್ರದಿಂದಲೇ ದೂರ ಸರಿಸಿರುವುದರಿಂದ ಕರಂದ್ಲಾಜೆ ಕೃಪಾಶೀರ್ವಾದದಿಂದ ಮಂಗಳಕರವಾಗಿ ಮಿರುಗುತ್ತಿರುವ ಎಡೂರಪ್ಪನಿಗೆ ರಾಹು-ಕೇತುವಿನ ಅಡ್ಡಿಯಿದ್ದರೂ ಅವು ಏನೂ ಮಾಡಲಾರವು. ಅವು ಎಡೂರಪ್ಪನಿಗೆ ಅಡ್ಡ ಬಂದರೆ, ಅವೇ ನಾಶವಾಗಿ ಕೇವಲ 20 ಸೀಟು ಪಡೆದು ವಿರೋಧಿ ಪಾಳಯದ ಕುರ್ಚಿ ಅಲಂಕರಿಸುವಂತಹ ದುಸ್ಥಿತಿ ಬಂದುಬಿಡುತ್ತದೆ. ಆಗ ಅಧಿಕಾರರೂಢ ಎಡೂರಪ್ಪನ ಸೈನ್ಯ ತನಿಖಾ ಆಯೋಗಗಳನ್ನು ನೇಮಿಸಿ ತೊಂದರೆ ಕೊಡುವ ಸಂಭವವಿರುವುದರಿಂದ, ಶನಿಯ ಸುತ್ತ ಇರುವ ರಾಹು ಕೇತುಗಳು ಎಡೂರಪ್ಪನ ಅಧಿಕಾರ ಗ್ರಹಣಕ್ಕೆ ಯಾವ ತೊಂದರೆಯನ್ನು ಮಾಡಲಾರವು" ಎಂದು ಹೇಳಲಾಗಿದೆಯಲ್ಲಾ, ಥೂತ್ತೇರಿ!!



* * * * * * * * * * *

ಅತ್ತ ರಾಜಕಾರಣದ ರಾಡಿ ರಂಗೇರುತ್ತಿರುವಂತೆ, ಇತ್ತ ಕನ್ನಡ ಸಿನಿಮಾದವರ ಕತೆ ಬಲೇ ಮಜವಾಗಿದೆಯಂತಲ್ಲಾ, ಎಲ್ಲಾ ಕಚ್ಚಾಮಾಲಿನ ಕೊರತೆಯ ನಡುವೆಯೂ, ಕಾರ್ಖಾನೆಯೊಂದು ಯಾರೂ ಕೊಳ್ಳಲಾರದ ಮಾಲನ್ನು ಉತ್ಪಾದಿಸಿ ಎಸೆಯುವಂತೆ, ಪೈಪೋಟಿಯಿಂದ ಸಿನಿಮಾ ತೆಗೆದು ಬಿಸಾಡುತ್ತಿರುವವರ ಪೈಕಿ ಯಾರನ್ನಾದರೂ ಒಬ್ಬರನ್ನು ಮಾತನಾಡಿಸಿ ಕೃತಾರ್ಥರಾಗಬೇಕೆನಿಸಿತಲ್ಲಾ, ಆ ಕೂಡಲೇ ಹೊಳೆದ ಹೆಸರೆಂದರೆ ಕನ್ನಡ ಸಿನಿಮಾಕ್ಕೆ ಕಾಲಿಟ್ಟು ಇಪ್ಪತ್ತೈದು ವರ್ಷ ತುಂಬಿಸಿರುವ ರವಿಚಂದ್ರನ್. ನಮ್ಮ ಪತ್ರಿಕೆ ಸಿನಿಮಾ ವಿಭಾಗದವರಿಂದ ರವಿಚಂದ್ರನ್ ಫೋನ್ ನಂಬರ್ ಪಡೆದು ಫೋನ್ ಮಾಡಿದರೆ ಸಿಕ್ಕೇ ಬಿಡಬೇಕೇ......

"ಹಲೋ ಸಾರ್, ನಾನು ಲಂಕೇಶ್ ವಾರಪತ್ರಿಕೆಯ ಯಾಹೂ ಮಾತಾಡ್ತಾಯಿರೋದು, ಚೆನ್ನಾಗಿದೀರ ಸಾರ್?"

"ನನಗೇನಾಗಿದೆ, ಗುಂಡುಕಲ್ಲಿನಂಗಿದ್ದಿನಿ."

"ನೋಡಿದೆ ಸಾರ್. ತಲೆಕೂದ್ಲ ಮೊದಲಿಗಿಂತ ತುಂಬಾ ಬೆಳೆಸಿಕೊಂಡಿದ್ದೀರಲ್ಲ ಸಾರ್?"

"ಅದು ವಿಗ್ಗು ಕಂಡ್ರಿ."

"ಹಾಗಿದ್ರೆ ತಲೆಕೂದಲಿಲ್ವ ನಿಮಗೆ?"

"ಕಡಮೆ ಆಗಿದೆ."

"ಹಾಗಿದ್ರೆ ಪೂರಾ ಯರಿಸಿಬಿಡಿ ಸಾರ್. ಅದೇ ಒಂದು ಫ್ಯಾಷನ್ ಆಗುತ್ತೆ"

"ಒಳ್ಳೆ ಮಾತೇಳಿದ್ರಿ. ಕ್ಷೌರಿಕರ ಕತೆ ಏನ್ರೀ?"

"ಯಾಕೆ ಅವುರಿಗೇನು ಕಷ್ಟ ಸಾರ್?"

"ಒಮ್ಮೆ ಯರಿಸಿಕೊಂಡೋದೋನು ಇನ್ನ ಆರು ತಿಂಗ್ಳು ಬರಲ್ಲ, ಲಾಸಲ್ಲವೇನ್ರಿ?"

"ನಿಜ ಸಾರ್. ನೀವು ಸಿನಿಮಾಕ್ಕೆ ಬಂದು 25 ವರ್ಷ ಆಯ್ತಲ್ಲ, ಅದ್ಕೆ ಮಾತಾಡ್ಸನ ಅಂತ ಫೋನ್ ಮಾಡಿದೆ."

"ಮಾತಾಡ್ಸಿ...."

"ನಿಮ್ಮ ಮೆಚ್ಚಿನ ಸಿನಿಮಾ ಯಾವುದು ಸಾರ್?"

"ಏಕಾಂಗಿ!"

"ಯಾಕೆ ಸಾರ್ ಆ ಸಿನಿಮಾ ಮೆಚ್ಚಿಕೊಂಡ್ರಿ?"

"ಆ ಇಡೀ ಸಿನಿಮಾ ನನ್ನ ಕಲ್ಪನೆಯಿಂದ ಬಂದಿದ್ದು, ಅದರಲ್ಲಿ ನಾನೇ ಪೂರಾ ವರ್ಕು ಮಾಡಿದ್ದಿನಿ."

"ಅದ್ಕೆ ಆತರ ಪೇಲಾಯ್ತ ಸಾರ್?"

"ಅಂಗೇನಿಲ್ಲ, ಒಂಥರದಲ್ಲಿ ಸಕ್ಸಸ್."

"ಸಕ್ಸಸ್ಸೂ ಇಲ್ಲ ಏನೂ ಇಲ್ಲ, ಒಂಥರಾ ತಿಕ್ಲುತನದ ಪರಮಾವಧಿ ಅದು."

"ಯಾಕ್ರಿ ಹಾಗಂತಿರಿ?"

"ನೋಡಿ ಸಾರ್, ಸಿನಿಮಾ ಒಂದು ಟೀಂ ವರ್ಕು. ಅಲ್ಲಿ, ಅರ್ಥಪೂರ್ಣವಾಗಿ ಸಂಭಾಷಣೆ ಬರಿಯೋನಿರ್ತನೆ, ಹಾಗೆ ಇಂಪಾಗಿ ಹಾಡು ಬರಿಯೋರು, ರಾಗ ಸಂಯೋಜನೆ ಮಾಡೋರು ಇರ್ತಾರೆ. ಪ್ರತಿಯೊಂದು ವೃತ್ತಿಯಲ್ಲೂ ಪರಿಣಿತರಾದೋರೆಲ್ಲಾ ಸೇರಿ ಮಾಡೋದೆ ಸಿನಿಮಾ. ನೀವು ಆತರ ಮಾಡಿದ ಒಂದೇ ಸಿನಿಮಾ ಪ್ರೇಮಲೋಕ. ಅದಕ್ಕೆ ನೀವು ಇಷ್ಟು ವರ್ಷ ತಗದಿದ್ದು ಒಂದೇ ಸಿನಿಮಾ, ಆಕ್ಟ್ ಮಾಡಿದ್ದು ಒಂದೇ ಸಿನಿಮಾ. ನೀವು ಇಷ್ಟೊಂದು ಸಿನುಮ ತಗೆದು ಬಿಸಾಡದಕಿಂತ ಪ್ರೇಮಲೋಕದಂತವ್ ಐದು ಸಿನಿಮಾ ತಗೆದಿದ್ರೆ ಸಾಕಿತ್ತು."

"ನೀವೆಷ್ಟು ತಗೆದಿದ್ದಿರಿ?"

"ಇನ್ನು ತಗೆದಿಲ್ಲ."

"ಇಡ್ರಿ ಫೋನ್!"

"ಇನ್ನೊಂದು ಅಭಿನಂದನೆ ಸಾರ್."

"ಯಾಕೆ?"

"ಆಕ್ಟಿಂಗ್ ಬರದೇಯಿದ್ರು, ಇಷ್ಟು ಸಿನುಮ ತಗೆದರಲ್ಲಾ ಅದ್ಕೆ!"

"ಏನ್ರಿ ಆಕ್ಟಿಂಗ್ ಅಂದ್ರೆ?"

"ಕಲಾವಿದನಾದೋನು ಪ್ರೇಕ್ಷಕರನ್ನ ನಗಿಸಬೇಕು. ಅಳಿಸಬೇಕು, ರೋಷ ಉಕ್ಕಿಸಬೇಕು, ಅವನ ಮುಖಭಾವ ಹಲವಾರು ಸಂಗತಿಗಳನ್ನು ಹೇಳುವಂತಿರಬೇಕು."

"ಅಂಗೆ ಮಾಡಕ್ಕೆ ನಾನೇನು ರಾಜಕುಮಾರನಾ? ನನ್ನ ಕಾಸು, ನನ್ನ ಸಿನುಮ, ನನ್ನ ಹಾಡು, ನನ್ನ ಡೈಲಾಗು, ನನ್ನ ಮಜ, ಗೊತ್ತಾಯ್ತ? ಮುಚಗಂಡು ಫೋನಿಡಿ!"

"ಥೂತ್ತೇರಿ!!! ■

ನೆರಿಬಿಐಳಿ ನಂಬ ಬಿಟ್ಟರೆ ಬಡಿ; ಮಾತೆತ್ತಿದರೆ ಹೆಲಿಕಾಪ್ಟರು, ಎಡವಿಬಿದ್ದರೆ ಐಕಾನ್ ಕಾರಿನ ಆದಿ ಚುಂಚನಗಿರಿ ಉತ್ತರಾಧಿಕಾರಿ ಶೇಖರ್ ಸ್ವಾಮೀಜಿ ಗಂಜಿಗೂ ಗತಿಯಿಲ್ಲದ ಕಡುಬಡವರಂತೆ!

ನಿನ್ನೆಮೊನ್ನೆಯ ತನಕ ಅವರು ಕೆಂಗೇರಿ ಹೋಬಳಿಯ ಗಂಗಸಂದ್ರದ ನಾಲ್ಕೆಕರೆ ಸರ್ಕಾರಿ ಭೂಮಿಯನ್ನೇ ನಂಬಿ ಬೇಸಾಯ ಮಾಡಿಕೊಂಡಿದ್ದರಂತೆ!

ಅವರ ಪಕ್ಕದ ಸರ್ಕಾರಿ ಜಮೀನಿನಲ್ಲೇ ಆದಿಚುಂಚನ ಗಿರಿ ಬಾಲಗಂಗಾಧರನಾಥರ ಬಲಗೈ ಬಂಟ ಚಿಕ್ಕೇ ಗೌಡರೂ ನೇಗಿಲು ಹಿಡಿದು ಹೊಲ ಉತ್ತುಕೊಂಡಿದ್ದರಂತೆ ಮತ್ತು ಅವರೂ ನಿರ್ಗತಿಕ ರೈತರಂತೆ!

ಹಾಗೆಂದು ಕೊಟ್ಟ ಬೋಗಸ್ ದಾಖಲೆಗಳನ್ನೇ ಪರಮಸತ್ಯ ಎಂದು ಆಣೆ ಪ್ರಮಾಣ ಮಾಡಿ, ಶೇಖರ್ ಸ್ವಾಮಿಗೆ ನಾಲ್ಕೆಕರೆ ದಲಿತರ ಭೂಮಿಯನ್ನೂ, ಚಿಕ್ಕೇಗೌಡರಿಗೆ ಮೂರೆಕರೆ ಬಗರ್‌ಹುಕುಂ ಜಮೀನನ್ನು ಮಂಜೂರು ಮಾಡುತ್ತಾರೆ ಆಶೋಕ್!

ಇದು ಆರೋಗ್ಯ ಮಂತ್ರಿ ಆಶೋಕ್ ಮತ್ತು ಬಿಜೆಪಿಯ ಭೂಕಂಟಕರ ಹಿಂದಿನ ಅಗಾಧ ಭೂಕಬಳಿಕೆಯ ಸಾಹಸಗಾಥೆಯ ಎರಡನೇ ಕಂತು-

ಬೆಂಗಳೂರು ಸೆರಗಿನ ಉತ್ತರಹಳ್ಳಿ ಕ್ಷೇತ್ರದ, ಎಕರೆಯೊಂದಕ್ಕೆ ಕೋಟಿ ಲೆಕ್ಕದ ಬೆಲೆಯುಳ್ಳ, ನಾಲ್ಕೂವರೆ ಸಾವಿರ ಎಕರೆಗಳ ಪೈಕಿ ಸರಿಸುಮಾರು ಎಂಟು ನೂರು ಎಕರೆಗಳಷ್ಟು ಬಗರ್‌ಹುಕುಂ ಭೂಮಿಯನ್ನು ದೋಚಿದ ಆಶೋಕ್ ಪಟಾಲಮ್ಮಿನಲ್ಲಿ ಆದಿಚುಂಚನಗಿರಿ ಉತ್ತರಾಧಿಕಾರಿ ಶೇಖರ್‌ಸ್ವಾಮಿಯೂ ಸೇರಿದ್ದಾರೆಂದರೆ ಆದರ ಸೆಳೆತಕ್ಕೆ ಇನ್ನೆಂಥ ಘಟಾನುಘಟಿಗಳು ಬಿದ್ದಿರಬೇಕು? ಲಾಭ ಆದೆಷ್ಟು ಆಕರ್ಷಕವಾಗಿರಬೇಡ?



ಶೇಖರ್ ಸ್ವಾಮಿ

ಭಾಗ-2

ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆ



ಡೆವಲಪರ್ಸ್ ಧಣಿ, ರಾಮನಗರದ ಖದೀಮ ಎಂ. ರುದ್ರೇಶ, ತಟ್ಟಗುಪ್ಪೆಯ ಕಳ್ಳಭಟ್ಟ ದೊರೆ ಅಂತಪ್ಪ, ಪಾಖಂಡಿ ಭೂಗಳ್ಳ ರಾಮೋಹಳ್ಳಿಯ ವೇಣು, ಬೆಂಗಳೂರು ಸಿಟಿ ಬಿಜೆಪಿಯ ಅಭಿಸಾರಿಕೆ ಪ್ರಭಾಕೆಂಚಪ್ಪ, ಜರಗನಹಳ್ಳಿಯ ಪ್ರಖ್ಯಾತ ವೈದ್ಯ ಡಾ. ಪ್ರಸಾದ್‌ನ ಮಗ ವಿಷ್ಣು ಇತ್ಯಾದಿ ಬಿಜೆಪಿ ಪಾಳಯದ ಖದೀಮರೆಲ್ಲರಿಗೂ ತಂತಮ್ಮ ಶಕ್ತ್ಯಾನುಸಾರ ಬಡಬಗ್ಗರ ಭೂಮಿ ದೋಚುವ ಸುವರ್ಣಾವಕಾಶವನ್ನು ಸ್ವತಃ ಆರೋಗ್ಯಮಂತ್ರಿ ಆಶೋಕ್ ಸಾಹೇಬರೇ ಕಲ್ಪಿಸಿಕೊಟ್ಟದ್ದಾರೆ.

ಇವರ್‍ಯಾರೂ ನಿರ್ಗತಿಕರಲ್ಲ, ಬಗರ್‌ಹುಕುಂ ಜಮೀನಿಗೆ ಹಕ್ಕುದಾರರೂ ಅಲ್ಲ, ಹಾಗಿಲ್ಲದ ಮೇಲೆ ಇನ್ನಾವ ಕಾರಣಕ್ಕೆ ಇವರಿಗೆ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸರ್ಕಾರಿ ಜಮೀನನ್ನು ಭೂಮಂಜೂರಾತಿ ಸಮಿತಿಗೆ ಅಧ್ಯಕ್ಷರಾಗಿದ್ದ ಆಶೋಕ್ ಬರೆದುಕೊಟ್ಟದ್ದಾರೆಂದು ಯಾರೇ ಹುಡುಕ ಹೊರಟರೂ ಸಿಗುವುದು ಲೋಡುಗಟ್ಟಲೇ ಬೋಗಸ್ ದಾಖಲೆಗಳು ಮಾತ್ರ!

ಆದಿಚುಂಚನಗಿರಿ ಉತ್ತರಾಧಿಕಾರಿ ಶೇಖರ್ ಸ್ವಾಮಿ ತಾವು ಕೆಂಗೇರಿ ಹೋಬಳಿಯ ಗಂಗಸಂದ್ರದ ಸರ್ವೆ

ರಾ. ಸೋಮನಾಥ್

ನಂಬರ್ 34 ರಲ್ಲಿ ಹತ್ತಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದೆ. ತಾನೊಬ್ಬ ಕಡುಬಡವ, ತಾನು ಇದೇ ಗಂಗಸಂದ್ರದ ಕಾಯಂ ನಿವಾಸಿ. ಹುಟ್ಟಾ ರೈತ; ಎಂದೆಲ್ಲಾ ಖೊಟ್ಟಿ ದಾಖಲೆಗಳನ್ನು ಕೊಟ್ಟದ್ದಾರೆ. ಆದರೆ ಹೆಸರನ್ನು ಶೇಖರ್ ಬಿನ್ ರಾಮೇಗೌಡ ಎಂದು ತೋರಿಸಿದ್ದಾರೆ. ಜೊತೆಗೆ ನಟಿಯೊಬ್ಬಳ ಅಣ್ಣ ಬೆಳ್ಳಿಯಪ್ಪನ ಮಗ ಎಚ್.ಬಿ. ಶಿವರಾಮ್ ಎಂಬಾತನಿಗೂ ಗಂಗಸಂದ್ರದ ಇದೇ ಸರ್ವೆ ನಂಬರಿನಲ್ಲಿ ಎರಡು ಎಕರೆ ಮೂವತ್ತು ಗುಂಟೆ ಭೂಮಿ ಕೊಡಿಸಿದ್ದಾರೆ.

ಆದಿಚುಂಚನಗಿರಿ ಬಾಲಗಂಗಾಧರನಾಥರ ಬಲಗೈ ಬಂಟ ಚಿಕ್ಕೇಗೌಡ ಬಿನ್ ದೊಡ್ಡೇಗೌಡರು ತಾವೂ ನಿರ್ಗತಿಕ ರೈತರೆಂದೂ ತಮ್ಮ ವಾರ್ಷಿಕ ಆದಾಯ ಹನ್ನೆರಡು ಸಾವಿರಕ್ಕಿಂತಲೂ ಕಮ್ಮಿಯೆಂದೂ, ತಾನು ಹತ್ತಾರು ವರ್ಷಗಳಿಂದ ಇದೇ ಗಂಗಸಂದ್ರದಲ್ಲಿದ್ದುಕೊಂಡು ಕೂಲಿ ಕೆಲಸ ಮಾಡಿಕೊಂಡಿದ್ದೆ ಎಂದೂ ಬೋಗಸ್ ಇನ್‌ಕಂ ಸರ್ಟಿಫಿಕೇಟ್, ರೇಷನ್‌ಕಾರ್ಡ್, ಸಾಗುವಳಿ ಚೀಟಿ ಇತ್ಯಾದಿಯನ್ನೆಲ್ಲ ಆಶೋಕ್ ಕೈಗಿತ್ತಿದ್ದಾರೆ!

ಇಂಥ ಬೋಗಸ್ ದಾಖಲೆಗಳ ಅಸಲಿಯತ್ತನ್ನು ಪರಿಶೀಲಿಸಬೇಕಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಚಿಕ್ಕಬೆಟ್ಟಯ್ಯನೇ ಹುಟ್ಟಾ ಲ್ಯಾಂಡ್ ಗ್ರ್ಯಾಬರ್. ಬಗರ್ ಹುಕುಂ ಭೂಮಿಯನ್ನು ಕದ್ದೇ ಮಾರತ್‌ಹಳ್ಳಿಯಲ್ಲಿ ತನ್ನದೇ ಸ್ವಂತದ್ದೊಂದು ಲೇಔಟ್ ಶುರುಹಚ್ಚಿಕೊಂಡಿರುವ ತಹಶೀಲ್ದಾರ್ ಚಿಕ್ಕಬೆಟ್ಟಯ್ಯ ತನಗೆ ಇಷ್ಟೆಲ್ಲಾ ಉಪಕರಿಸಿದ ಎಮ್ಮೆಲ್ಲೇ ಆಶೋಕ್‌ರ

ಹುಚ್ಚು ಸರ್ಕಾರಕ್ಕೋ ಅಥವಾ ತಮ್ಮ ಪಾಲಿನ ಸಹಸ್ರಾರು ಕೋಟಿ ರೂಪಾಯಿಗಳ ಸೊತ್ತಿನ ಕೊಳ್ಳೆ ಯಾದರೂ ಸೊಲ್ಲೆತ್ತದೇ ಕೂತ ದಲಿತ ಸಮೂಹಕ್ಕೋ ಗೊತ್ತಾಗುತ್ತಿಲ್ಲ!

ಬೆಂಗಳೂರು ಸೆರಗಿನ ಉತ್ತರಹಳ್ಳಿ ಕ್ಷೇತ್ರದ, ಎಕರೆಯೊಂದಕ್ಕೆ ಕೋಟಿ ಲೆಕ್ಕದ ಬೆಲೆಯುಳ್ಳ, ನಾಲ್ಕೂವರೆ ಸಾವಿರ ಎಕರೆಗಳ ಪೈಕಿ ಸರಿಸುಮಾರು ಎಂಟು ನೂರು ಎಕರೆಗಳಷ್ಟು ಬಗರ್‌ಹುಕುಂ ಭೂಮಿಯನ್ನು ದೋಚಿದ ಆಶೋಕ್ ಪಟಾಲಮ್ಮಿನಲ್ಲಿ ಆದಿಚುಂಚನಗಿರಿ ಉತ್ತರಾಧಿಕಾರಿ ಶೇಖರ್‌ಸ್ವಾಮಿಯೂ ಸೇರಿದ್ದಾರೆಂದರೆ ಆದರ ಸೆಳೆತಕ್ಕೆ ಇನ್ನೆಂಥ ಘಟಾನುಘಟಿಗಳು ಬಿದ್ದಿರಬೇಕು? ಲಾಭ ಆದೆಷ್ಟು ಆಕರ್ಷಕವಾಗಿರಬೇಡ?

ಪಟ್ಟಿ ದೊಡ್ಡದಿದೆ. ಸಿಓಡಿಯ ಶ್ರೀಮಂತ ಎಸ್.ಪಿ. ನರಸಿಂಹಯ್ಯ, ಮಂತ್ರಿ ಆಶೋಕ್‌ರ ನಟೋರಿಯಸ್ ಸಂಬಂಧಿ ನಾಯಂಡಹಳ್ಳಿ ಚನ್ನರಾಯಪ್ಪ, ಕೆಂಗೇರಿ ಪುರಸಭೆಯ ಲಂಪಟ ಬಿಜೆಪಿ ಕೌನ್ಸಿಲರ್ ಕೆ.ಆರ್. ಸುಧೀರ್, ಮಂತ್ರಿ ಆಶೋಕರ ನೆಚ್ಚಿನ ಬಂಟ ಎಂ.ಆರ್.

ರಾಮೋಹಳ್ಳಿಯ ಕಾಡುಗಳ್ಳ ವೇಣು!

ಕಾಡಿನೊಳಗಿದ್ದು ವೀರಪ್ಪನ್ ದಂತವನ್ನೋ ಗಂಧವನ್ನೋ ಕದಿಯುತ್ತಿದ್ದರೆ, ಆಶೋಕ್ ಮತ್ತವರ ರಕ್ತ ಸಂಬಂಧಿ ಸೇರಿಕೊಂಡು ಕಾಡನ್ನೇ ಕದ್ದಿದ್ದಾರೆ. ಆತನ ಹೆಸರು ರಾಮೋಹಳ್ಳಿ ವೇಣು ಅಲಿಯಾಸ್ ವೇಣುಗೋಪಾಲ. ಈತ ಬಿಜೆಪಿ ಕೆಂಗೇರಿ ಮಟ್ಟದ ಪದಾಧಿಕಾರಿ. ಉತ್ತರಹಳ್ಳಿ ಆಶೋಕ್ ಓಟ್ ಬ್ಯಾಂಕಿನ ಆಧಾರಸ್ತಂಭಗಳ ಪೈಕಿ ಈತನೂ ಓರ್ವ.



ರಾಮೋಹಳ್ಳಿ ವೇಣು

ರಾಮೋಹಳ್ಳಿ ಪಕ್ಕದ ಮಾರಗೊಂಡನಹಳ್ಳಿಯಲ್ಲಿ ನಲವತ್ತಾರು ಎಕರೆಯಷ್ಟು ವಿಶಾಲ ಕಾಡಿದೆ. ಆದನ್ನು ಕಾಪಾಡುವುದು ಎಮ್ಮೆಲ್ಲೇ ಆಶೋಕ್‌ರ ಆದ್ಯ ಕರ್ತವ್ಯ. ದುರಂತವೆಂದರೆ ಇಡೀ 40 ಎಕರೆ ಕಾಡಿಗೆ 'ಬೋಗಸ್ ರೆಕಾರ್ಡ್' ಸೃಷ್ಟಿಸಿದ್ದು ರಾಮೋಹಳ್ಳಿ ವೇಣು ಅವರ ನೆಚ್ಚಿನ ಬಂಟ. ಹೀಗೆ ಹುಟ್ಟಿಸಿದ ಖೊಟ್ಟಿ ದಾಖಲೆಯನ್ನೇ ಉಪಯೋಗಿಸಿ ಹನುಮಂತಯ್ಯ ಎಂಬಾತನಿಗೆ 1.10 ಎಕರೆ ಮಂಜೂರಾದಂತೆ ಆಶೋಕ್ ಸಹಕರಿಸುತ್ತಾರೆ. ಆದೇ ಭೂಮಿಯನ್ನು ಹನುಮಂತಯ್ಯನಿಂದ ವೇಣು ಕವಡೆ ಕಿಮ್ಮತ್ತಿಗೆ ಖರೀದಿಸುತ್ತಾನೆ ಮತ್ತು ಆದನ್ನೇ ಒಂದೂವರೆ ಕೋಟಿಗೆ ಮಾರ್ವಾಡಿಯೊಬ್ಬನಿಗೆ ಮಾರುತ್ತಾನೆ!

ಪ್ರಶ್ನೆಯೆಂದರೆ ಅರಣ್ಯ ಭೂಮಿಯನ್ನು ಆಶೋಕ್ ಆದ್ಹೇಗೆ ಹನುಮಂತಯ್ಯನಿಗೆ ಮಂಜೂರು ಮಾಡುತ್ತಾರೆ? ಹಾಗೊಮ್ಮೆ ಮಂಜೂರಾದರೂ ಕನಿಷ್ಠ 15 ವರ್ಷಗಳ ಕಾಲ ಪರಭಾರೆಯಾಗಕೂಡದೆಂಬ ಸರ್ಕಾರಿ ಕಟ್ಟಾಜ್ಞೆಯನ್ನು ರೆವಿನ್ಯೂ ಅಧಿಕಾರಿಗಳು ಏಕೆ ಉಲ್ಲಂಘಿಸುತ್ತಾರೆ? ಉಳಿಕೆ ಅರಣ್ಯ ಭೂಮಿಯನ್ನು ರಕ್ಷಿಸಬೇಕಾದವರ್‍ಯಾರು? ಹೀಗಿದ್ದೂ ಭೂಕಬಳಿಕೆ ಪತ್ತೆ ಸಮಿತಿಯ ಎ.ಟಿ. ರಾಮಸ್ವಾಮಿ ಏಕೆ ಕಣ್ಣುಮುಚ್ಚಿ ಕೂತಿದ್ದಾರೆ?



ಎ.ಟಿ. ರಾಮಸ್ವಾಮಿ

...ಕ್ಕಾ ತೀರಿಸವಿದ್ದರೆ
...ಗೆ?
...ಭೂಮಂಜೂರಾತಿ
...ತಿಯ ಅಧ್ಯಕ್ಷರಾಗಿದ್ದ
...ಮ್ಮಿಲ್ಲೇ ಅಶೋಕ್‌ಗೆ
...ಕ್ಕಿಂತ ಬೇಕೆ? 'ನೀನೂ
...ನ್ನ ನಾನು ತಿಂತೀನಿ!'
...ದು ಕಳ್ಳರಿಬ್ಬರೂ 2003
...ಹೊತ್ತಿಗೆ
...ಯಿಲಾಯಿಸಿದ್ದೇ
...ಸುಮಾರು 800 ಎಕರೆ
...ರ್ಕಾರಿ ಭೂಮಿಗೆ
...ಟಕವಾಯಿತು. ಇಂಥ
...ೋಗಸ್
...ಖಲೆಗಳನ್ನಿಟ್ಟುಕೊಂಡೇ
...ೋಕ್ ಶೇಖರ್ ಸ್ವಾಮಿಗೆ
...ಕ್ಕರೆ ಮಂಜೂರು
...ಾಡಿದ್ದಾರೆ. ಮಠದ
...ತ್ತೊಬ್ಬ ಡೀಲರ್
...ೇಗೌಡನಿಗೆ ಮೂರೆಕರೆ, ಕೂರ್ಗಿ ಸಟಿಯೊಬ್ಬಳ
...ಶಿವರಾಮ್‌ಗೆ 2.30 ಎಕರೆಯಂತೆ
...ಟ್ಟಿದ್ದಾರೆ.

...ಏನೋ ಮಠದ ಕೈಂಕರ್ಯ, ಹೋಗಲಿ ಬಿಡಿ
...ದರೂ ಆನಂತರದ ಭೂಕೊಳ್ಳೆಯ ಕತೆಯಿದೆಯಲ್ಲ
...ು ಇನ್ನೂ ಭಯಂಕರ.

...ಕನಕಪುರ ರಸ್ತೆಯ ಜರಗನಹಳ್ಳಿಯ ರಾಜರಾಜೇಶ್ವರಿ
...ಕ್ಕನ ಮಾಲೀಕ ಡಾ. ಪ್ರಸಾದ್ ಹುಟ್ಟಾ ಆರೆಸ್ಸೆಸಿಗ
...ತ್ತು ಶ್ರೀಮಂತ. ಆದರೆ ಬಿಟ್ಟಿ ಭೂಮಿ ಸಿಗುತ್ತದೆ
...ದರೆ ಯಾರಿಗೆ ಬೇಡ? ಈತನ ಮಗ ವಿಷ್ಣು
...ರಿಗೆ ಮೂರೆಕರೆ, ಪತ್ನಿ ಲೀಲಮ್ಮಗೆ ಮತ್ತೆ ಎರಡೆಕರೆ,
...ಗಳಿಗೆಂದು ಇನ್ನೂ ಮೂರೆಕರೆಯಂತೆ ಬಿ.ಎಂ.
...ವಲು ಸರ್ವೆ ನಂಬರ್ 35 ಮತ್ತು 183 ರ ಒಟ್ಟೂ
...ಟೆಕರೆ ಸರ್ಕಾರಿ ಭೂಮಿಯನ್ನು ಡಾ. ಪ್ರಸಾದ್
...ಸಿದ್ದಾನೆ. ತನ್ನ ಪತ್ನಿ
...ತ್ತು ಮಕ್ಕಳೆಲ್ಲರೂ
...ತಿಕರೆಂದೂ ಬಿ.ಎಂ.
...ವಲ್ ಭೂಮಿಯ -
...ರ್‌ಹುಕುಂ
...ಗುವಳಿದಾರರೆಂದೂ
...ನ್ನುಗಟ್ಟಲೇ ಖೊಟ್ಟಿ
...ರ್ಟಿಫಿಕೇಟುಗಳನ್ನು
...ತ್ತಿಸಿದ್ದಾನೆ.

...ಹೀಗೆ ಡಾ.
...ಾದ್ ಹೊಡೆದ
...ಎಂ. ಕಾವಲ್‌ನ
...ಟೆಕರೆಗಳ ಪೈಕಿ
...ಎಕರೆಯೊಂದರ
...ಲಿ ಮಾರುಕಟ್ಟೆ
...ಲ್ಯವೇ ಎಕರೆಗೆ
...ತ್ತು ಲಕ್ಷ!

...ಒಂದೇ ಏಟಿಗೆ
...ಟ್ಟು ಕೋಟಿಯ
...ಪರ್ ಲಾಟರಿ! ಯಾರಿಗುಂಟು ಯಾರಿಗಿಲ್ಲ?

...ಇದು ಉತ್ತರಹಳ್ಳಿ ಬಗರ್‌ಹುಕುಂ ಮಂಜೂರಾತಿ
...ಚಿತ್ರಕ್ಕೊಂದು ಸ್ಯಾಂಪಲ್ ಮಾತ್ರ.

...ಸೋಮನಹಳ್ಳಿ ಸ.ನಂ. 242 ರಲ್ಲಿ ನಾಲ್ಕೆಕರೆ
...ಂಜೂರು ಮಾಡಿಸಿಕೊಂಡ ಪ್ರಭಾಕೆಂಚಪ್ಪ ಸಿಟಿ
...ಜೆಪಿ ಮಹಿಳಾ ಮೋರ್ಛಾದ ಕಾಯಂ ಪದಾಧಿಕಾರಿ
...ತ್ತು ಮಂತ್ರಿ ಅಶೋಕರ ಪರಮಾಪ್ತೆ, ಕೆಂಗೇರಿ
...ೋಬಳಿ ಅಗರ ಗ್ರಾಮದಲ್ಲಿ
...ಎಕರೆಯೊಂದಕ್ಕೆ ಎಪ್ಪತ್ತು
...ದ ಮಾರ್ಕೆಟ್ ರೇಟಿದೆ.
...ನ ಸ.ನಂ. 83 ರಲ್ಲಿ ತಲಾ
...ರೆಕರೆಯಂತೆ ಗಿಟ್ಟಿಸಿದ
...ಲತಾ ಮಂಜುನಾಥ್
...ತ್ತು ಶಾರದಮ್ಮ ಕೂಡ
...ಜೆಪಿ ಮಹಿಳಾಮಣಿಗಳೆ!

...ಬೆಂಗಳೂರಿನ
...ಂಕರಿಯಿಂದ ಕೇವಲ 20
...ಮೀ. ದೂರದ ರಾವ್‌ಗೋಡ್ಲು
...ಮದಲ್ಲಿ ಸದ್ಯ ಎಕರೆಗೆ
...ತ್ತಿಂದ ಎಂಭತ್ತು ಲಕ್ಷದ
...ಇದೆ. ಇಲ್ಲಿನ ಹಾಲು
...ಾದಕರ ಸಂಘದ ಸೆಕ್ರೆಟರಿ
...ೆಂದುರಾಜುವನ್ನು ನಾಯಕ



ವಿಶೇಷ ತಹಸೀಲ್ದಾರ್ ಸದಾನಂದಪ್ಪ

ಅಶೋಕ್‌ರ ಪಕ್ಕಾ ಛೇಲಾ. ಈತನ ಹಿಂದೆ ಶಿವಲಿಂಗಯ್ಯ ಹಿಂದೊಮ್ಮೆ ಪಂಚಾಯ್ತಿ ಸದಸ್ಯನಾಗಿದ್ದ. ಊರಿಗೇ ಸಾಹ್ಕಾರ. ಇಂಥವನಿಗೆ ಅಶೋಕ್ 25 ಗುಂಟೆ ದಲಿತರ ಭೂಮಿ ಕರುಣಿಸಿದ್ದು, ಈತನ ತಮ್ಮ ಪ್ರಭಾಕರನಿಗೆ ಮತ್ತೆ 1.18 ಎಕರೆ ಸರ್ಕಾರಿ ಭೂಮಿ ಕೊಟ್ಟಿದ್ದು ಯಾವ ಸಾಮಾಜಿಕ ನ್ಯಾಯ?

ಕೆಂಗೇರಿ ಪುರಸಭೆಯ ಮಾಜಿ ಬಿಜೆಪಿ ಕೌನ್ಸಿಲರ್ ಕೆ.ಆರ್. ಸುಧೀರ್ ಹೇಳಿಕೇಳಿ ಕೇಬಲ್ ಕುಳ. ಮಹಾನ್ ಶೋಕಿಲಾಲ. ಈತ ಅದ್ಯಾವತ್ತು ಚಿನ್ನಕುರಸೆ ಗ್ರಾಮಕ್ಕೆ ಹೋಗಿ ಹೊಲ ಉತ್ತ? ಇದೇ ಕೆಂಗೇರಿ ಪುರಸಭೆಯ ಮತ್ತೊಬ್ಬ ಬಿಜೆಪಿ ಕೌನ್ಸಿಲರ್ ಮತ್ತು ಫಿಲ್ಮ್ ಪ್ರೊಡ್ಯೂಸರ್ ಮುನಿರಾಜು ಅದ್ಯಾವತ್ತು ಕಡುಬಡವನಾಗಿದ್ದ? ರಾಜರಾಜೇಶ್ವರಿ ನಗರಸಭೆಯ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ರಾಮಚಂದ್ರ ಹೇಗೆ ಬಗರ್‌ಹುಕುಂ ಭೂಮಿಗೆ ಹಕ್ಕುದಾರನಾಗುತ್ತಾನೆ?



ಚೆನ್ನರಾಯಪ್ಪ ನಾಯಿಂಡಹಳ್ಳಿ

ಹಕೀಕತ್ತೆಂದರೆ ಕೆಂಗೇರಿ ಬಿಜೆಪಿ ಕೌನ್ಸಿಲರ್ ಸುಧೀರ್‌ಗೆ ಕೆಂಗೇರಿ ಹೋಬಳಿ ತಿಪ್ಪೂರು ಸ. ನಂ. 24ರಲ್ಲಿ ಎರಡೆಕರೆ, ಕೆಂಗೇರಿ ಬಿಜೆಪಿ ಅಧ್ಯಕ್ಷ ಮುನಿರಾಜುಗೆ ಸೂಲಿಕೆರೆಯಲ್ಲಿ 1.20 ಎಕರೆಯಂತೆ ಅಶೋಕ್ ಮಂಜೂರು ಮಾಡಿಸಿದ್ದಾರೆ. ಇಲ್ಲೂ ಖೊಟ್ಟಿ ದಾಖಲೆಗಳೇ ಮೂಲಾಧಾರ!


ಹೇಗೆ ಬೆಂಗಳೂರು ಮಹಾನಗರ ಪಾಲಿಕೆ ಬಿಜೆಪಿ ಕೌನ್ಸಿಲರ್‌ಗಳಾದ ಡಿ. ವೆಂಕಟೇಶ್‌ಮೂರ್ತಿ, ಎಸ್.ಕೆ. ನಟರಾಜ್, ಗಣೇಶ್ ಮಂದಿರದ ಬಸವರಾಜು, ಪದ್ಮನಾಭನಗರದ ಎಲ್. ಶ್ರೀನಿವಾಸ್ ಮುಂತಾದವರೆಲ್ಲ ಬಗರ್‌ಹುಕುಂ ಭೂಮಿಗೆ ಬಾಯಿ ಹಾಕಿದ್ದಾರೋ ಹಾಗೇ ಬೆಂಗಳೂರಿನ ಇತರೇ ಸಿಎಂಸಿಗಳ ಬಿಜೆಪಿ ಕೌನ್ಸಿಲರ್ ಗಳೂ ಬಂದಷ್ಟು ಗುಂಜಿಕೊಂಡಿದ್ದಾರೆ. ಈ ಪೈಕಿ ಅತೀಹೆಚ್ಚು ಬಗರ್‌ಹುಕುಂ ಭೂಮಿ ನುಂಗಿದ ಖದೀಮ ನಾಯಿಂಡಹಳ್ಳಿ ಚನ್ನರಾಯಪ್ಪ ಸ್ವತಃ ಆರೋಗ್ಯ ಮಂತ್ರಿ ಆರ್. ಅಶೋಕ್‌ರ ಸಂಬಂಧಿ. ಈ ಹಿಂದೆ ಹಲಗೆ ವಡೇರಹಳ್ಳಿಯ ಸ.ನಂ. 1 ರ ಕಾಟುಂರಾಯ ದೇವಸ್ಥಾನದ ಹತ್ತಿರ ನುಂಗಲು ಹೋಗಿ ಗ್ರಾಮಸ್ಥರಿಂದ ಒದೆ ತಿಂದಿದ್ದ. ನಾಯಿಂಡಹಳ್ಳಿಯ ವಿನಾಯಕ ಲೇಔಟಿನ ಸರ್ಕಾರಿ ಜಮೀನಿಗೆ ಬೇಲಿ ಹಾಕಿಸಿದ್ದ. ಹುಲ್ಲಾಳು, ಮರಿಯಪ್ಪನ ಪಾಳ್ಯ, ಕೆಂಗೇರಿ, ಅಗರ– ಹೀಗೆ ನೆಂಟ ಅಶೋಕ್‌ನನ್ನು ಮುಂದಿಟ್ಟುಕೊಂಡೇ ಸರಿಸುಮಾರು ಮೂವತ್ತು ಎಕರೆಗಳಷ್ಟು ಸರ್ಕಾರಿ ಗೋಮಾಳ, ಕೆರೆ ಭೂಮಿಯನ್ನು ದೋಚಿದ. ಇಂಥವನಿಗೆ



ಕೆ.ಆರ್. ಸುಧೀರ್

ಮತ್ತೆ ತಗಚಗುಪ್ಪೆಯ ಸ. ನಂ. 60ರಲ್ಲಿ ಮಗ ಸಂದೀಪ್ ಬಾಬು ಹೆಸರಿಗೆ 4.20 ಎಕರೆ ಸರ್ಕಾರಿ ಭೂಮಿ ಮಂಜೂರು ಮಾಡುತ್ತಾರೆಂದರೆ; ಚನ್ನರಾಯಪ್ಪನ ಕೊಳ್ಳೆಯಲ್ಲಿ ಅಶೋಕ್ ಪಡೆದ ಪಾಲೆಷ್ಟು?

ಹೀಗೆ ಕೆಂಗೇರಿ ಹೋಬಳಿಯ ಅಗರ, ತಗಚಕುಪ್ಪೆ, ಸೂಲಿಕೆರೆ, ಡಿ. ನಾರಾಯಣಪುರ, ವಾಜರಹಳ್ಳಿ, ಗಂಗಸಂದ್ರ ಬಿ.ಎಂ. ಕಾವಲ್, ಹೆಮ್ಮಿಗೆಪುರ, ರಾಮೋಹಳ್ಳಿ, ಮಾರಗೊಂಡನಹಳ್ಳಿ, ವಸಂತನಹಳ್ಳಿ ಮತ್ತು ಉತ್ತರಹಳ್ಳಿ ಹೋಬಳಿಯ ನೆಟ್ಟಿಗೆರೆ, ಉತ್ತರಿ, ರಾವ್‌ಗೋಡ್ಲು, ನೆಲಗುಳಿ, ಸೋಮನಹಳ್ಳಿ, ಕಗ್ಗಲಿಪುರ ಮುಂತಾದ ಗ್ರಾಮಗಳ ಸರಿಸುಮಾರು ಎಂಟುನೂರು ಎಕರೆಗಳಷ್ಟು ಬಗರ್ ಹುಕುಂ ಭೂಮಿಯನ್ನು ಅಶೋಕ್ ಬಿಜೆಪಿ ಕ್ರಿಮಿಗಳ ಬಾಯಿಗೆ ಹಾಕಿದ್ದಕ್ಕೆ ಹೆಜ್ಜೆಹೆಜ್ಜೆಗೂ ಸಾಕ್ಷ್ಯಾಧಾರಗಳಿವೆ. ಎಕರೆಯೊಂದಕ್ಕೆ ಕನಿಷ್ಠ ಐದು ಲಕ್ಷದ ಪಾರ್ಟಿ ಫಂಡೋ–ಲಂಚವೋ ಅಂತ ಲೆಕ್ಕ ಹಾಕಿದರೂ ಈ ಒಂದೇ ಬಾಬತ್ತಿನಿಂದ ಮಂತ್ರಿ ಅಶೋಕ್ ಸರಿಸುಮಾರು ನಲವತ್ತು ಕೋಟಿ ರೂಪಾಯಿಗಳ ಗಂಟು ದೋಚಿದ್ದಾರೆ.



ಬಸವರಾಜು

ಇನ್ನು ಬೆಂಗಳೂರು ದಕ್ಷಿಣದ ಖದೀಮ ತಹಸೀಲ್ದಾರ್ ಚಿಕ್ಕಬೆಟ್ಟಯ್ಯ, ಸ್ಪೆಷಲ್ ತಹಸೀಲ್ದಾರ್ ಸದಾನಂದಪ್ಪ, ಇದಕ್ಕೂ ಹಿಂದೆ ತಹಸೀಲ್ದಾರ್‌ಗಳಾಗಿದ್ದ ನಾಗರಾಜ್, ಗಂಗಾಧರಯ್ಯ ಇತ್ಯಾದಿ ರೆವಿನ್ಯೂ ಧೂರ್ತರು ಪಡೆದ ಪಾಲೆಷ್ಟು?

ಈ ಬಗ್ಗೆ ಸಿಬಿಐ ತನಿಖೆಗೆ ಈ ಮೂಲಕ ಪತ್ರಿಕೆ ಒತ್ತಾಯಿಸುತ್ತದೆ. ಕೊಳ್ಳೆಯಾದದ್ದು ದಲಿತರ ಭೂಮಿ. ಬಡಬಗ್ಗರು, ಕೃಷಿಕೂಲಿಗಳು, ನಿರ್ಗತಿಕರನ್ನು ವಂಚಿಸಿ ಬೆಂಗಳೂರು ನಗರದ ಶ್ರೀಮಂತ ಬಿಜೆಪಿ ಖದೀಮರು ನಡೆಸಿದ ಈ ಹಗಲು ದರೋಡೆಯ ವಿರುದ್ಧ ಕಾಂಗ್ರೆಸ್ ಸೊಲ್ಲೆತ್ತದೆ ಹೋದರೇ ನಂತೆ; ಕನಿಷ್ಠ ದಲಿತರ ಸಂಘಟನೆಗಳಾದರೂ ಬೀದಿಗಿಳಿಯಲೇಬೇಕು. ಏಕೆಂದರೆ ಅದು ಸಹಸ್ರಾರು ದಲಿತರ ಬದುಕಿನ ಪ್ರಶ್ನೆ ಮತ್ತು ದಲಿತ ಸಂಘಟನೆಗಳ ಅಸ್ತಿತ್ವದ ಪ್ರಶ್ನೆ ಕೂಡ.

ಕಳ್ಳಭಟ್ಟಿ ಅಂತಪ್ಪನೂ ಲ್ಯಾಂಡ್ ರಾಬರ್ ರುದ್ರೇಶನೂ

ಚೆಟ್ಟಿ ಸಲೀಂ ಹಂತಕ, ಕಲಾಸಿಪಾಳ್ಯದ ಮೀಟರ್ ಬಡ್ಡಿ ದೊರೆ ಮಾದೇಶ, ಸಾರಕ್ಕಿಯ ರೌಡಿ ಜಗ್ಗ, ಉತ್ತರಿ ವೆಂಕ್ಟ, ಚುಂಚಘಟ್ಟದ ಜೈರಾಮ ಇತ್ಯಾದಿ ಬಿಜೆಪಿ ರೌಡಿಗಳಿಗೆಲ್ಲ ಹೇಗೆ ಅಶೋಕ್ ಬಗರ್‌ಹುಕುಂ ಭೂಮಿ ಕರುಣಿಸಿದ್ದಾರೋ, ಹಾಗೇ ಕಳ್ಳಭಟ್ಟಿ ದೊರೆಗೂ ಲೈಫ್‌ಲಾಂಗ್ ವಿಹಾರಾಮುದ ವ್ಯವಸ್ಥೆ ಮಾಡಿದ್ದಾರೆ.

ಆತನ ಹೆಸರು ತಟ್ಟಗುಪ್ಪೆ ಅಂತಪ್ಪ, ಉತ್ತರಹಳ್ಳಿ-ಕನಕಪುರ ರಸ್ತೆ ಸುತ್ತಮುತ್ತಲ ಗ್ರಾಮಗಳಲ್ಲಿ ಇವತ್ತಿಗೂ ಇಟ್ಟಾಡುವ ಕಳ್ಳಭಟ್ಟಿಯ ಮೂಲ ಪುರುಷನೇ ಈ ತಟ್ಟಗುಪ್ಪೆ ಅಂತಪ್ಪ, ಈತನ ತಮ್ಮನ ಹೆಸರು ಅಂತೋಣಪ್ಪ ಉರ್ಫ್ ಕರೇಗೌಡ. ಅಂತಪ್ಪನ ಹೆಂಡತಿ ಎಲಿಜಬೆತ್ ರಾಣಿ ಸೇರಿದಂತೆ ಇವತ್ತಿಗೂ ಕಳ್ಳಭಟ್ಟಿಗೆ ಬೇಕಾದ ಮೂಲ ವಸ್ತುವಾದ ಕಾಕಂಬಿ, ಮೊಲಾಸಿಸ್, ನೊರೆಬೆಲ್ಲ ಇತ್ಯಾದಿಗಳನ್ನು ಕದ್ದು ಮಾರುವುದು ಇವರ ಕುಲಕಸುಬು.

ಹೆಸರಿಗಷ್ಟೇ ಕ್ರೈಸ್ತನಾದರೂ ಮೂಲತಃ ಒಕ್ಕಲಿಗ. ಇಂಥವನಿಗೆ ತಟ್ಟಗುಪ್ಪೆಯ ಸ. ನಂ. 25ರಲ್ಲಿ ಒಟ್ಟೂ ಆರೆಕರೆ ಬಗರ್‌ಹುಕುಂ ಭೂಮಿಯನ್ನು ಅಶೋಕ್ ಕರುಣಿಸಿದ್ದಾರೆ. ಏಕೆಂದರೆ ಪ್ರತಿ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಕಳ್ಳಭಟ್ಟಿಯ ಹೊಳೆ ಹರಿಸುವವನೇ ಈ ದೇಶಭಕ್ತ!



ಎಂ. ರುದ್ರೇಶ್


ಇಂಥ ನೂರು ಮಂದಿ ಅಂತಪ್ಪರನ್ನು ಗುಣಿಸಿ ಭಾಗಿಸಿದರೇನೆ ಒಬ್ಬ ಎಂ. ಆರ್. ಡೆವಲಪರ್ಸ್‌ನ ಧಣಿ ಮತ್ತು ರಾಮನಗರದ ತಾಲ್ಲೂಕು ಬಿಜೆಪಿ ಅಧ್ಯಕ್ಷ ಎಂ. ರುದ್ರೇಶ್ ಹುಟ್ಟುತ್ತಾನೆ. ಜಾತಿಯಲ್ಲಿ ಈತ ಉಪಮುಖ್ಯಮಂತ್ರಿ ಯಡ್ಡಿಗೆ ನಿಷ್ಠನಾದರೆ ಭೂಕೊಳ್ಳೆಯಲ್ಲಿ ಮಂತ್ರಿ ಅಶೋಕ್‌ನ ನೆಂಟ!

ಈ ರುದ್ರೇಶ್ ಬೇರೆಲ್ಲರ ಹಾಗೆ ಬಗರ್‌ಹುಕುಂ ಮಂಜೂರು ಮಾಡಿಸಿಕೊಳ್ಳುವ ಬದಲು ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ ಅದನ್ನೇ ಬೋಗಸ್ ದಾಖಲೆ ಸೃಷ್ಟಿಸಿ ಕಬಳಿಸುತ್ತಾನೆ. ಎಕರೆಯೊಂದಕ್ಕೆ ಒಂದೂವರೆ ಕೋಟಿ ರೂಪಾಯಿ ಮೌಲ್ಯದ ಬಿ.ಎಂ.ಕಾವಲು ಸ. ನಂ. 65ರ ಹನ್ನೆರಡು ಎಕರೆಗೆ ಕಾಂಪೌಂಡ್ ಹಾಕಿದ ರುದ್ರೇಶ್, ಅದಕ್ಕೆ ಅಣ್ಣ ರಾಜಶೇಖರ ಮತ್ತು ಅತ್ತಿಗೆ ಪುಷ್ಪಲತಾರ ಹೆಸರಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿದ್ದಾನೆ. ಸೀಗೇಹಳ್ಳಿ ಸ.ನಂ. 3ರಲ್ಲಿ ತಲಾ ಒಂಬತ್ತು ಲಕ್ಷದ ಹತ್ತೆಕರೆ ಸರ್ಕಾರಿ ಜಮೀನನ್ನು ಮುಕ್ಕಿದ್ದಾನೆ. ಚನ್ನಕುರ್ಚಿ, ತಿಟ್ಟಹಳ್ಳಿ, ಲಿಂಗಾಪುರ, ಗೋಣಿಪುರಗಳಲ್ಲಿ ಮತ್ತು ರಾಮನಗರ ತಾಲ್ಲೂಕಿನ ಕುಂಟನಹಳ್ಳಿ, ಕೋಡಿಯಾಲ ಮತ್ತು ಕರೇನಹಳ್ಳಿಗಳಲ್ಲಿ ಈತ ದೋಚಿರುವ ಸರ್ಕಾರಿ ಜಮೀನಿನ ಒಟ್ಟು ಮೊತ್ತವೇ ಹತ್ತಿರತ್ತಿರ ಐನೂರು ಕೋಟಿಯಷ್ಟಾಗುತ್ತದೆ. ಹೇಳಿ ಕೇಳಿ ನೈಸ್ ಅಧಿಪತಿ ಅಶೋಕ್ ಖೇಣಿಯ ಚಮಚಾ.

ಹಿಂದೆ ನೈಸ್ ವಿರುದ್ಧ ಜನಪರ ಸಂಘಟನೆಗಳು ಬೀದಿಗಿಳಿದಾಗ ಒಂದಷ್ಟು ಬಿಜೆಪಿ ಪುಂಡರನ್ನು ಛೂಬಿಟ್ಟು ಹಲ್ಲೆ ನಡೆಸಿದ್ದ. ನೈಸ್ ಕಂಪನಿಗೆಂದು ನೋಟಿಫೈ ಆಗಿದ್ದ ಭೂಮಿಯನ್ನು ತನ್ನ ಸಂಬಂಧಿಗಳ ಹೆಸರಿಗೆ ರಿಜಿಸ್ಟರ್ ಮಾಡಿಸಿದ್ದಾನೆಂದರೆ, ನೈಸ್ ಪರವಾಗಿ ಬಿಜೆಪಿ ಶಾಸಕರನ್ನು ಕಲೆಹಾಕಿ ಸೂಟ್‌ಕೇಸ್ ಹಂಚುತ್ತಾನೆಂದರೆ, ಈತನ ತಾಕತ್ತು ಮತ್ತು ಇವನ ಭೂಕೊಳ್ಳೆಗೆ ಎಮ್ಮೆಲ್ಲೆ ಅಶೋಕ್ ತೋರಿದ ನಿಯತ್ತು ಇನ್ನೆಷ್ಟಿರಬೇಡ?

ಐದನೇ ವೇತನ ಆಯೋಗದ ಅನ್ಯಾಯ ಶಿಕ್ಷಕ-ಉಪನ್ಯಾಸಕರು ಬೀದಿಗೆ

ಪ್ರಸ್ತುತ ಜಾರಿಯಾಗಿರುವ ಐದನೇ ವೇತನ ಆಯೋಗದ ಆರ್ಥಿಕ ಸೌಲಭ್ಯ ಪ್ರೌಢಶಾಲಾ ಶಿಕ್ಷಕರು ಹಾಗೂ ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ವಿಸ್ತರಣೆಯಾಗದಿರುವ ಹಿನ್ನೆಲೆಯಲ್ಲಿ ರಾಜ್ಯದ ಸುಮಾರು 40 ಸಾವಿರ ಸರ್ಕಾರಿ ಪ್ರೌಢಶಾಲಾ ಶಿಕ್ಷಕರು, ಸರಿ ಸುಮಾರು ಅಷ್ಟೇ ಸಂಖ್ಯೆಯ ಖಾಸಗಿ ಅನುದಾನಿತ ಶಾಲಾ ಶಿಕ್ಷಕರು ಮತ್ತು ಅಂದಾಜು 20 ಸಾವಿರ ಸರ್ಕಾರಿ-ಖಾಸಗಿ ಅನುದಾನಿತ ಕಾಲೇಜುಗಳ ಉಪನ್ಯಾಸಕರು ರಾಜ್ಯದಾದ್ಯಂತ ಮುಷ್ಕರದ ಹಾದಿ ಹಿಡಿಯಲಿದ್ದಾರೆ.



ಹೊರಟ್ಟಿ

ಕಳೆದ ಇಪ್ಪತ್ತು ವರ್ಷಗಳಿಂದ ನಿರಂತರವಾಗಿ ಮುಂದುವರಿಯುತ್ತಿರುವ ವೇತನ ತಾರತಮ್ಯದಿಂದ ಅಸಂತುಷ್ಟಗೊಂಡಿರುವ ಪ್ರೌಢಶಾಲಾ ಶಿಕ್ಷಕರು ಹಾಗೂ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಮೂರು-ನಾಲ್ಕನೇ ವೇತನ ಆಯೋಗಗಳಲ್ಲಿ ಸೂಕ್ತ ನ್ಯಾಯ ಸಿಗದೆ ವಂಚನೆಗೊಳಗಾಗಿದ್ದರು. ಐದನೇ ವೇತನ ಆಯೋಗದ ಜಾರಿಯ ಈ ಸಂದರ್ಭದಲ್ಲಾದರೂ ಈ ಅನ್ಯಾಯ ಸರಿಪಡಿಸಬಹುದೆಂಬ ನಿರೀಕ್ಷೆಯೂ ಹುಸಿಯಾಗಿದೆ.

ಇನ್ನಿತರ ರಾಜ್ಯಗಳ ವೇತನ ಶ್ರೇಣಿಗೆ ಹೋಲಿಸಿದರೆ ರಾಜ್ಯದ ಪ್ರೌಢಶಾಲಾ ಶಿಕ್ಷಕರು-ಪದವಿಪೂರ್ವ ಕಾಲೇಜುಗಳ ವೇತನ ಶ್ರೇಣಿ ತುಂಬಾ ಕಡಿಮೆ ಇದೆ. ಇದು ದೇಶದಲ್ಲೇ ಅತ್ಯಂತ ಕಡಿಮೆ ವೇತನ ಶ್ರೇಣಿ ಎಂಬುದು ದಾಖಲಾರ್ಹ. ಇದಕ್ಕೆ ಸಂಬಂಧಿಸಿದ ಎಲ್ಲಾ ಅಂಕಿ ಅಂಶಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರೌಢಶಾಲಾ ಶಿಕ್ಷಕರ ಸಂಘಗಳು ಹಾಗೂ ಪದವಿಪೂರ್ವ ಉಪನ್ಯಾಸಕರ ಒಕ್ಕೂಟಗಳು 2006 ರ ಡಿಸೆಂಬರ್‌ನಲ್ಲಿ ವೇತನ ಆಯೋಗದ ಅಧ್ಯಕ್ಷ ಎನ್.ಬಿ. ಪ್ರಕಾಶ್‌ರವರಿಗೆ ನೀಡಿದ್ದವು. ಅದರಲ್ಲೂ ವಿಧಾನ ಪರಿಷತ್ ಸದಸ್ಯರುಗಳಾದ ವೈ.ಎ. ನಾರಾಯಣಸ್ವಾಮಿ, ಪುಟ್ಟಣ್ಣ ಮರಿತಿಬ್ಬೇಗೌಡರು ಸುಮಾರು 12 ಬಾರಿ ವೇತನ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ವೇತನ ತಾರತಮ್ಯದ ಬಗ್ಗೆ ಚರ್ಚಿಸಿದ್ದರು.


ಸ್ವತಃ ಬಸವರಾಜ ಹೊರಟ್ಟಿಯವರೇ ವೇತನ ಆಯೋಗದ ಅಧ್ಯಕ್ಷರಿಗೆ ವೇತನ ಶ್ರೇಣಿಯಲ್ಲಿ ಪ್ರೌಢಶಾಲಾ ಶಿಕ್ಷಕರು ಹಾಗೂ ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಆಗಿರುವ ವೇತನ ತಾರತಮ್ಯ ಸರಿಪಡಿಸುವಂತೆ ಅಹವಾಲು ಸಲ್ಲಿಸಿದ್ದರು. ಇಷ್ಟೆಲ್ಲಾ ಆದನಂತರವೂ ವೇತನ ಆಯೋಗ ಈ ನ್ಯಾಯಯುತ ಬೇಡಿಕೆಯನ್ನು ಪರಿಗಣಿಸಿ ಸ್ಪಂದಿಸಿಲ್ಲ.

ವೇತನ ಆಯೋಗ ಇತರೆ ಎಲ್ಲಾ ವರ್ಗದ ನೌಕರರ ಅಹವಾಲುಗಳಿಗೆ ಸ್ಪಂದಿಸಿ ಅವರವರ ಬೇಡಿಕೆಗೆ ತಕ್ಕಂತೆ ವೇತನ ಶ್ರೇಣಿ ಹೆಚ್ಚಳಕ್ಕೆ ಶಿಫಾರಸ್ಸು ಮಾಡಿದೆ. ನಮ್ಮ ಬೇಡಿಕೆಗಳ ಬಗ್ಗೆ ಈ ಪರಿಯ ಅನಾದರಣೆ-ನಿರ್ಲಕ್ಷ್ಯ ಏಕೆ ಎಂಬ ಅಸಮಾಧಾನ ಪದವಿಪೂರ್ವ ಉಪನ್ಯಾಸಕರು ಹಾಗೂ ಪ್ರೌಢಶಾಲಾ ಶಿಕ್ಷಕರಲ್ಲಿ ಮಡುಗಟ್ಟಿದೆ. ಸರ್ಕಾರ ಇದನ್ನು ಸರಿಯಾಗಿ ಪರಾಮರ್ಶಿಸದೇ ಈಗಾಗಲೇ ಕೊಟ್ಟಿರುವ ವೇತನ ಶ್ರೇಣಿಯೇ ಹೆಚ್ಚಿನದು ಎಂಬಂತೆ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನೆ ಮಾಡುತ್ತಿದೆ.

ತಾರತಮ್ಯದ ಆರಂಭ

1996 ರವರೆಗೂ ಪದವಿಪೂರ್ವ ಕಾಲೇಜು ಹಾಗೂ ಪದವಿ ಕಾಲೇಜು ಉಪನ್ಯಾಸಕರಿಗೆ ಸಮಾನವಾದ ವೇತನ ಶ್ರೇಣಿ ಇತ್ತು, ಮಾತ್ರವಲ್ಲ ಸಮಾನ ಕಾರ್ಯಭಾರ, ಸಮಾನ ವಿದ್ಯಾರ್ಹತೆ, ಸಮಾನ ನೇಮಕಾತಿಗಳ ಮೂಲಕವೇ ಉಪನ್ಯಾಸಕರನ್ನು ಆಯ್ಕೆ ಮಾಡಲಾಗಿತ್ತು.

1996 ರ ನಂತರ ಯುಜಿಸಿ ನಿಯಮಾವಳಿಯ ಪ್ರಕಾರ ದೇಶದಾದ್ಯಂತ ಎಲ್ಲಾ ಪದವಿ ಕಾಲೇಜುಗಳ ಉಪನ್ಯಾಸಕರ ವೇತನ ಶ್ರೇಣಿಯನ್ನು ಒಂದೇ ತೆರನಾಗಿ ಹೆಚ್ಚಿಸಲಾಯಿತು.



ಆಗ ಮೂಲವೇತನದಲ್ಲಿ ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಆರು ಸಾವಿರ ಇದ್ದರೆ, ಪದವಿ ಕಾಲೇಜುಗಳ ಉಪನ್ಯಾಸಕರಿಗೆ ಎಂಟು ಸಾವಿರ ಆಯಿತು. ನಂತರದ ಈ ವ್ಯತ್ಯಾಸ ಅಜಗಜಾಂತರವಾಗಿ ಹೆಚ್ಚುತ್ತಲೇ ಬರುತ್ತಿದೆ. ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಕ್ರಮವಾಗಿ 10,15,20 ವರ್ಷಗಳಿಗೆ ಕಾಲಮಿತಿ ಬಡ್ತಿ ನೀಡಲಾಗಿದೆ. ಆದರೆ ಪದವಿ ಕಾಲೇಜು ಉಪನ್ಯಾಸಕರುಗಳಿಗೆ ಕ್ರಮವಾಗಿ 6,8,12 ವರ್ಷಗಳಿಗೆ ಕಾಲಮಿತಿ ಬಡ್ತಿಯನ್ನು ನೀಡಲಾಗುತ್ತಿದೆ. ಪದವಿ ಕಾಲೇಜು ಉಪನ್ಯಾಸಕರಿಗೆ ಮೂರು ಬಾರಿ ನಡೆಯುವ ಓರಿಯಂಟೇಶನ್ ಪ್ರೋಗ್ರಾಂಗಳಲ್ಲಿ ಭಾಗವಹಿಸಿದವರಿಗೆ ಈ ಕಾಲಮಿತಿ ಬಡ್ತಿಯನ್ನು ನೀಡಲಾಗುತ್ತಿದೆ. ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಇಂತಹ ನಿಯಮಗಳಿಲ್ಲ.

1973 ರಿಂದ 1996 ರವರೆಗೂ ಪದವಿ ಕಾಲೇಜು ಉಪನ್ಯಾಸಕರಿಗೆ ಸಮಾನವಾಗಿ ವೇತನ ಪಡೆಯುತ್ತಿದ್ದ ಪದವಿಪೂರ್ವ ಕಾಲೇಜು ಉಪನ್ಯಾಸಕರು ಯು... ನಿಯಮಾವಳಿಗಳ ನೆಪದಲ್ಲಿ ವೇತನ ಶ್ರೇಣಿಯಲ್ಲಿ ... ಪ್ರಮಾಣದ ತಾರತಮ್ಯಕ್ಕೊಳಗಾದರು. 1996 ರ ... ಪದವಿಪೂರ್ವ-ಪದವಿ ಕಾಲೇಜುಗಳ ಉಪನ್ಯಾ... ನೇಮಕಾತಿಗಳಿಗೆ ಎನ್‌ಇಟಿ ಪರೀಕ್ಷೆಗಳಿರಲಿಲ್ಲ, ವಿದ್ಯಾ... ನೇಮಕಾತಿ ವಿಧಾನ, ವೇತನ ಶ್ರೇಣಿ ಎಲ್ಲಾ ... ತೆರನಾಗಿದ್ದವು. ಯುಜಿಸಿ ನಿಯಮಾವಳಿಗಳ ಪ್ರಕಾ... ರ ಹಿಂದೆ ನೇಮಕವಾಗಿ ನಂತರ ಎನ್‌ಇಟಿ ಪಾ... ಪದವಿ ಉಪನ್ಯಾಸಕರುಗಳಿಗೂ ವೇತನ ಶ್ರೇಣಿ... ವಿಸ್ತರಿಸಲಾಯಿತು. ಆಗ ಪದವಿಪೂರ್ವ ಕಾಲೇಜು... ಉಪನ್ಯಾಸಕರುಗಳು ನಮಗೂ ಎನ್‌ಇಟಿ-ಓರಿಯಂಟೇ... ಪ್ರೋಗ್ರಾಮ್‌ಗಳನ್ನು ನಡೆಸಿ ಪದವಿ ಕಾಲೇಜು... ಉಪನ್ಯಾಸಕರಿಗೆ ಸಮಾನಾಂತರವಾಗಿ ವೇತನ ... ಹೆಚ್ಚಳಗೊಳಿಸಬೇಕೆಂದು ಬೇಡಿಕೆ ಮುಂದಿಟ್ಟರು. ಸ... ಈ ಬೇಡಿಕೆಯನ್ನು ಒಪ್ಪಲಿಲ್ಲ.

ಸರ್ಕಾರ ಪದವಿಪೂರ್ವ ಕಾಲೇಜು ಉಪನ್ಯಾ... ಯುಜಿಸಿ ವೇತನ ಶ್ರೇಣಿಗೆ ಸಮ... ಪರ್ಯಾಯ ವೇತನ ನೀಡಲು ನಿರಾ...ದಾಗ, ಕನಿಷ್ಠ ಪಕ್ಕದ ರಾಜ್ಯಗ... ವೇತನ ಶ್ರೇಣಿಯನ್ನು ತುಲನೆ ಮಾ... ನ್ಯಾಯ ದೊರಕಿಸಿ ಕೊಡಿ ... ಅಹವಾಲನ್ನು ಮಂಡಿಸಿದರು. ... ಸರ್ಕಾರ ಈ ಬೇಡಿಕೆಯನ್ನು ಗಂ...ವಾಗಿ ಪರಿಗಣಿಸುವುದಾಗಿ ಹೇ... ವಿನಃ ಅದನ್ನು ಕಾರ್ಯರೂಪಕ್ಕೆ ತರ...

98 ರ ಮುಷ್ಕರದ ಹಾ...

ಪದವಿಪೂರ್ವ ಕಾಲೇಜು ಉ...ಸಕರ ವೇತನ ಶ್ರೇಣಿ ತಾರ... ಸರಿಪಡಿಸುವ ಸರ್ಕಾರದ ಭರ... ನಿರ್ಲಕ್ಷಿಸಲ್ಪಟ್ಟದ್ದರಿಂದ ರಾಜ್ಯದಾ... ಎಲ್ಲಾ ಪದವಿಪೂರ್ವ ಕಾಲೇಜುಗಳ ಸಹಸ್ರ... ಉಪನ್ಯಾಸಕರುಗಳು 1998 ರಲ್ಲಿ ಸುಮಾರು 21 ದಿ... ಕಾಲ ಮೌಲ್ಯಮಾಪನ ಬಹಿಷ್ಕರಿಸಿ ಮುಷ್ಕರದ ಹಾ... ಹಿಡಿದರು.

ಮುಷ್ಕರಕ್ಕೆ ಸ್ಪಂದಿಸದ ಸರ್ಕಾರ ಎಸ್ಮಾ ಕಾಯ್ದೆ ... ಮಾಡಿ ಮಹಿಳಾ ಉಪನ್ಯಾಸಕರೂ ಸೇರಿದಂತೆ ... ಜನ ಉಪನ್ಯಾಸಕರನ್ನು ಬಂಧಿಸಿ ಜೈಲಿಗೆ ತಳ್ಳಿತು. ಅ... ಜನ ಉಪನ್ಯಾಸಕರು ನಾಲ್ಕೈದು ವರ್ಷಗಳ ...

ಪೊಲೀಸ್ ದಬ್ಬಾಳಿಕೆಯಿಂದ ರಕ್ಷಣೆ ನೀಡಿ



ತೇಜಸ್ವಿಯವರು ತಮ್ಮ 'ಕಿರಗೂರಿನ ಗಯ್ಯಾಳಿಗಳು' ಕೃತಿಯಲ್ಲಿ ಒಂದು ಕಡೆ "ಸರ್ಕಾರದ ಇತ್ತೀಚಿನ ನೀತಿಗಳು, ಕಾನೂನುಗಳು ಜನರ ದೈನಂದಿನ ಬದುಕನ್ನು ಹೆಚ್ಚುಹೆಚ್ಚು ಕಾನೂನುಬಾಹಿರ ಮಾಡ್ತಿದಾವೆ" ಅಂತ ಬರೆದಿದ್ದಾರೆ. ಬಹುಶಃ ಲೇಖಕರ ಆ ಮಾತು ಹಿಂದೆಂದಿಗಿಂತಲೂ ಇಂದು ಹೆಚ್ಚು ಅನ್ವಯಿಸುತ್ತೆ ಅನ್ನಿಸುತ್ತೆ. ಏಕೆಂದರೆ ಇತ್ತೀಚಿನ ಕೆಲ ವರ್ಷಗಳಲ್ಲಿ ಮಲೆನಾಡಿನ ಆದಿವಾಸಿಗಳನ್ನು, ಬಡ ರೈತಾಪಿ ಜನರನ್ನು, ಜನಪರ ಕಾಳಜಿ ಹೊಂದಿದ ಜನರನ್ನು, ಬರಹಗಾರರನ್ನು ಸರ್ಕಾರ ಪೊಲೀಸ್ ಇಲಾಖೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಆದಿವಾಸಿಗಳು ತಮ್ಮ ನೆಲ, ಜಲದ ಉಳಿವಿಗಾಗಿ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟದಲ್ಲಿ ತೊಡಗಿಕೊಂಡರೆ ಅವರ ಮೇಲೆ ಲಾಠಿ ಪ್ರಹಾರ ಮಾಡ್ತು, ಕೇಸು- ಕೋರ್ಟು ಅಂತ ಅಲೆಸ್ತು, ಈಗ ನಕ್ಸಲೀಯರ ದಮನ ಅಂತ ನೂರಾರು ಕೋಟಿ ರೂ. ಬಿಡುಗಡೆ ಮಾಡಿ ಆದಿವಾಸಿಗಳೆಲ್ಲ ನಕ್ಸಲೀಯರು ಅನ್ನೋ ರೀತಿ ಬಿಂಬಿಸುತ್ತಾ ಅವರ ಹೋರಾಟಗಳೆಲ್ಲ ನಕ್ಸಲ್ ಹೋರಾಟ ಅಂತ ಸಮಾಜದ ಮುಂದಿಡುತ್ತಾ, ಚಳವಳಿಯಲ್ಲಿ ತೊಡಗಿಸಿಕೊಂಡ ಯುವಕರನ್ನು ನಕ್ಸಲೀಯರು ಅಥವಾ ನಕ್ಸಲ್ ಬೆಂಬಲಿಗರು ಅಂತ ಭಾವಿಸುತ್ತ, ಕಂಡಕಂಡಲ್ಲಿ ಅವರನ್ನು ಬಂಧಿಸೋದು, ಅವರ ಮೇಲೆ ಕೇಸುಗಳನ್ನು ಹಾಕೋದು, ಜೈಲಿಗೆ ದಬ್ಬೋದು, ಚಳವಳಿಯಲ್ಲಿ ಭಾಗವಹಿಸಿದ ಜನಪರ ಚಳವಳಿಗಾರರ ಮನೆಗಳಿಗೆ ನುಗ್ಗೋದು, ಅವರ ಮನೆಯಲ್ಲಿರುವ ವಸ್ತುಗಳನ್ನು ಶೋಧಿಸೋದು ಮತ್ತು ಅವರಿಗೆ ಜೀವ ಬೆದರಿಕೆ ಹಾಕೋದನ್ನು ಪೊಲೀಸರು ಮಾಡುತ್ತಿದ್ದಾರೆ.

ಇದಕ್ಕೊಂದು ಇತ್ತೀಚಿನ ನಿದರ್ಶನ ನಮ್ಮ ಮನೆಯಲ್ಲಿ ನಡೆದ ಘಟನೆ.

ಜು. 29 ರ ಭಾನುವಾರ ಬೆಳಗ್ಗೆ ಆರು ಗಂಟೆಗೆ ನಮ್ಮ ಮನೆಯ ರವಿ (ಈತ ನನ್ನ ಮೈದುನ) ತೋಟದ ಔಷಧಿ ಹೊಡೆಯಲು ನಮ್ಮಮ್ಮನ ಮನೆಗೆ ಹೊರಟಿದ್ದ. ಅವನನ್ನು ದಾರಿ ಮಧ್ಯದಲ್ಲೇ ತಡೆದ ಪೊಲೀಸರು ಬಂಧಿಸಿ ಏಳು ಗಂಟೆ ಸುಮಾರಿಗೆ ನಮ್ಮ ಮನೆಗೆ ಬಂದು ಮನೆಯನ್ನು ಶೋಧಿಸಿದರು. ಅವರು ಶೋಧಿಸಿದ ರೀತಿ ನೋಡಿದರೆ ಅವರೇ ಒಂದು ಪೂರ್ವಯೋಜಿತ ಸಂಚನ್ನು ರೂಪಿಸಿಕೊಂಡು ಬಂದಿದ್ದರು ಅನ್ನಿಸುವಂತಿತ್ತು, ಏಕೆಂದರೆ ಅವರು ಹುಡುಕಿದ್ದು ಕೇವಲ ನಮ್ಮ ಮನೆ ಲೈಬ್ರರಿಯ ಪುಸ್ತಕಗಳನ್ನಷ್ಟೇ ಮತ್ತು ನಾನು ಪತ್ರಿಕೆಗಳಿಗೆಂದು ಬರೆದಿಟ್ಟುಕೊಂಡ ಕತೆ, ಕವನ ಮತ್ತು ವಾಚಕರ ವಾಣಿಗೆ ಬರೆದ ಹಲವು ಪತ್ರಗಳ ಹಸ್ತಪ್ರತಿಗಳು, ಪ್ರಕಟಿತ ಪತ್ರಗಳು ಮತ್ತು ಅದಕ್ಕೆ ಬಂದ ಅಭಿಮಾನಿ ಪತ್ರಗಳು.

ಸುಮಾರು ಒಂದು ಗಂಟೆ ಶೋಧಿಸಿದ ಪೊಲೀಸರು ನಮ್ಮ ಗಮನಕ್ಕೆ ತಂದದ್ದಷ್ಟು ವಸ್ತುಗಳಲ್ಲದೆ ಗಮನಕ್ಕೆ ತರದೇ ಕೆಲವು ವಸ್ತುಗಳನ್ನು ಕೊಂಡೊಯ್ದರು. ಅದೇ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಯೊಬ್ಬರು "ಪರಮೇಶ್ವರನಿಗೆ ಮಾಡಿದಂತೆ ಮಾಡ್ತೀವಿ" ಅಂತ ನಮಗೆ ಜೀವ ಬೆದರಿಕೆಯನ್ನು ಹಾಕಿದರು. ಆನಂತರ ಪೊಲೀಸ್ ಸ್ಟೇಷನ್‌ನಲ್ಲಿ ನಮ್ಮಿಂದ ಕಂಪ್ಲೇಂಟನ್ನೂ ತಗೊಳ್ಳದೆ, ರವಿ ಎಲ್ಲಿದ್ದಾನೆ ಅಂತಲೂ ತಿಳಿಸದೆ ನಮ್ಮನ್ನು ಇಡೀ ದಿನ ಆತಂಕಕ್ಕೆ ದೂಡಿದರು. ರಾತ್ರಿ ಸುಮಾರು ಏಳರ ಹೊತ್ತಿಗೆ ಆತ ಶೃಂಗೇರಿ ಸ್ಟೇಷನ್‌ನಲ್ಲಿದ್ದಾನೆ ಅಂತ ಫೋನ್ ಮಾಡಿ ಹೇಳಿದರು. ನಾವು ಅಲ್ಲಿಗೆ ಹೋಗುವ ಮುನ್ನವೇ ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ತಮ್ಮ ವಶಕ್ಕೆ ಪಡೆದುಕೊಂಡರು. ಈ ಹಿಂದೆ ಕೂಡ ಅಡಿಕೆ ಘಸಲಿಗೆಂದು ಹೊರಟಿದ್ದ ರವಿಯನ್ನು ಇದೇ ರೀತಿ ಬಂಧಿಸಿ ಅವನ ಮೇಲೆ ಬರ್ಕಣ ಎನ್‌ಕೌಂಟರ್ ಕೇಸು, ಮುಂತಾದ ಕೇಸುಗಳನ್ನು ಹಾಕಿ ಒಂದು ತಿಂಗಳು ಜೈಲಿನಲ್ಲಿಟ್ಟಿದ್ದರು. ಆ ಕೇಸುಗಳಿಗೆ ಸಂಬಂಧಿಸಿದಂತೆ ರವಿ ಇವತ್ತಿಗೂ ತಿಂಗಳಿಗೆರಡು ಬಾರಿ ತಪ್ಪದೆ ಚಿಕ್ಕಮಗಳೂರು ಕೋರ್ಟಿಗೆ ಹೋಗುತ್ತಾನೆ.

ನಾವು ಓದುತ್ತಿದ್ದ ಕಾಲದಿಂದಲೂ ಸಾಹಿತ್ಯ ಜನಪರ ಕಾಳಜಿ ಹೊಂದಿದ್ದು ಕೃಷಿಯನ್ನೇ ನಮ್ಮ ಬದುಕಿನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬೇಕೆಂಬ ಆಶೆ ಹೊಂದಿದ್ದವರು. ಹೀಗೆ ಕೃಷಿಯನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ನಗರದ ಯಾಂತ್ರಿಕ ಜೀವನದಿಂದ ದೂರ ಇರುವ ಕನಸನ್ನು ಹೊಂದಿದ್ದೆವು. ಆ ಕಾರಣಕ್ಕಾಗಿ ನಾವು ಹಾಗಲಗಂಚಿಗೆ ಬಂದು ಕೃಷಿ ಮಾಡಿಕೊಂಡಿದ್ದೆವು. ನಿರಂತರವಾಗಿ ನಡೆಯುವ ಪ್ರಾಣಿಗಳ ಕಿರುಕುಳ ಮತ್ತೆ ದಾಖಲೆ ಇಲ್ಲದ ಕಾರಣ ಆರ್ಥಿಕವಾಗಿ ಅನಾನುಕೂಲವೇ ನಮ್ಮ ಇದುವರೆಗಿನ ಬದುಕಿನ ಸಾರಾಂಶವಾಗಿದೆ.

ನಮ್ಮ ಕೃಷಿ ಭೂಮಿ ರಾಷ್ಟ್ರೀಯ ಉದ್ಯಾ... ವ್ಯಾಪ್ತಿಯಿಂದ ಕೇವಲ ಮೂರು ಕಿ.ಮೀ. ದೂರ... ಗಡಿಭಾಗದವರಿಗೆ ಆಗಬಹುದಾದ ಸಮಸ್ಯೆಗಳ ... ನಮಗೆ ಯಾವುದೇ ಮಾಹಿತಿ ಇರಲಿಲ್ಲ ಮತ್ತು ... ವರ್ಷಗಳಾದರೂ ನಮ್ಮ ಕೃಷಿ ಭೂಮಿಗೆ ಹಕ್ಕು... ಸಿಕ್ಕಿರಲಿಲ್ಲ, ಹಾಗಾಗಿ ರಾಷ್ಟ್ರೀಯ ಉದ್ಯಾನ ವಿರೋ... ಹೋರಾಟದಲ್ಲಿ ನಾವು ಸಕ್ರಿಯವಾಗಿ ನಮ್ಮ ಕುಟುಂಬ... ತೊಡಗಿಸಿಕೊಂಡೆವು. ಒತ್ತುವರಿ ಖುಲ್ಲಾ ವಿರೋ... ಹೋರಾಟದಲ್ಲಿ, ರಾಷ್ಟ್ರೀಯ ಸಮಸ್ಯೆಯಾದ ಕೋಮುವಾ... ವಿರೋಧಿ ಹೋರಾಟದಲ್ಲಿಯೂ ನಮ್ಮನ್ನು ತೊಡ... ಕೊಂಡಿದ್ದೆವು. ನಮ್ಮ ಈ ಜನಪರ ಕಾಳಜಿಯ ಕಾ...ದಿಂದಾಗಿಯೇ ಮತ್ತು ನಮ್ಮಲ್ಲಿದ್ದ ಸಾಹಿತ್ಯಾಸಕ್ತಿಯಿ... ಸ್ಥಳೀಯ ಸಮಸ್ಯೆಗಳ ಬಗ್ಗೆ ಪತ್ರಿಕೆಗಳಿಗೆ ಬರೆಯುತ್ತಿದ್ದ... 2004 ರ ನವೆಂಬರ್ 1 ರಂದು ರವಿಯನ್ನು ಮೊ...ಸಾರಿ ಬಂಧಿಸಿದಾಗ ನಾನು ವಾಚಕರ ವಾಣಿಯ... ನವೆಂಬರ್ 18 ರಂದು ಬರೆದಿದ್ದೆ. ಆನಂತರ ನಿರಂತರ... ಇಲ್ಲಿನ ಎಲ್ಲಾ ಸಮಸ್ಯೆಗಳ ಬಗ್ಗೆ ಬರೆಯುತ್ತಿದ್ದೆ. ಬಹ... ಮುಂದಿನ ದಿನಗಳಲ್ಲಿ ಇದೂ ಕೂಡ ಸರ್ಕಾರದ ದೃಷ್ಟಿಯ... ಅಪರಾಧವಾಗಬಹುದು. ಏಕೆಂದರೆ ಇಂದಿನ ಸಾಮ... ಶಾಹಿ, ಐಟಿ-ಬಿಟಿ ಯುಗದಲ್ಲಿ, ಕೋಮುವಾ...


ಯಾವ ದೇಶ ತನ್ನ ಭೂಮಿಯನ್ನೇ ನಾಶ ಮಾಡುತ್ತದೋ, ಆ ದೇಶ ತನ್ನನ್ನೇ ನಾಶ ಮಾಡಿಕೊಳ್ಳುತ್ತದೆ-ಫ್ರಾಂಕ್ಲಿನ್ ರೂಸ್‌ವೆಲ್ಟ್

...ನತವಾಗಿ ಕೋರ್ಟ್‌ಗೆ ಅಲೆಯಬೇಕಾಯಿತು. ...ೋರಾಟಕ್ಕೆ ನೇತೃತ್ವ ವಹಿಸಿದ್ದ ಉಪನ್ಯಾಸಕರ ...ಕ್ಕೂಟದ ಪದಾಧಿಕಾರಿಗಳನ್ನು ದೂರ-...ರುಗಳಿಗೆ ಪನಿಷ್ಮೆಂಟ್ ಟ್ರಾನ್ಸ್‌ಫರ್ ಮಾಡ...ಯಿತು. ಸರ್ಕಾರ ತೆಗೆದುಕೊಂಡ ಈ ಬಿಗಿ ...ಮಗಳಿಂದಾಗಿ ಹೆದರಿದ ಉಪನ್ಯಾಸಕರು ...ಂಘಟನೆಯಿಂದ ದೂರವಾದರು. ಅನಂತರ ...ಕ್ಕೂಟದ ಸುದ್ದಿಯೇ ಇಲ್ಲದಂತಾಯಿತು. ಆಗ ...ಕ್ಷಕರ ಕ್ಷೇತ್ರದಿಂದ ಚುನಾಯಿತರಾದ ಯಾವ ...ಧಾನ ಪರಿಷತ್ ಸದಸ್ಯರೂ ಈ ಬಗ್ಗೆ ...ತಿಭಟಿಸಲಿಲ್ಲ, ಕನಿಷ್ಠ ಸದನದಲ್ಲೂ ಈ ಬಗ್ಗೆ ...ನಿ ಎತ್ತಲಿಲ್ಲ. ತಮ್ಮ ನ್ಯಾಯಯುತ ಬೇಡಿಕೆಗಳಿಗೆ ...ಮ್ಮನ್ನು ಪ್ರತಿನಿಧಿಸಲಿಕ್ಕಾಗಿಯೇ ಚುನಾಯಿಸಲ್ಪಟ್ಟ ...ಧಾನ ಪರಿಷತ್ ಸದಸ್ಯರುಗಳೇ ಸ್ಪಂದಿಸದಿರುವ ...ಗ್ಗೆ ತೀವ್ರ ಅಸಮಾಧಾನಗೊಂಡ ಪದವಿಪೂರ್ವ ...ಾಲೇಜು ಉಪನ್ಯಾಸಕರು ಹಾಗೂ ಪ್ರೌಢಶಾಲಾ ...ಕ್ಷಕರು ಕಳೆದ ವಿಧಾನ ಪರಿಷತ್ ಚುನಾವಣೆ...ಯಲ್ಲಿ ಅಷ್ಟೂ ಜನ ಎಂಎಲ್‌ಸಿಗಳನ್ನು ಮನೆಗೆ ...ಳುಹಿಸಿ ಹೊಸಬರನ್ನು ಚುನಾಯಿಸಿದರು.


ಮತ್ತೆ ಹೋರಾಟಕ್ಕೆ ಸಜ್ಜು

2006 ಡಿಸೆಂಬರ್‌ನಲ್ಲಿ ಆಯಾ ಜಿಲ್ಲಾ ...ಮಟ್ಟದಲ್ಲಿ ಉಪನ್ಯಾಸಕರ ಸಂಘಗಳು- ಒಕ್ಕೂಟ...ಗಳು ರಾಜ್ಯಮಟ್ಟದಲ್ಲಿ ಜೀವ ಹಿಡಿದುಕೊಂಡಿದ್ದ ...ರಾಜ್ಯ ಸಂಘದ ಕೆಲ ಪದಾಧಿಕಾರಿಗಳು ಐದನೇ ...ವೇತನ ಆಯೋಗದ ಅಧ್ಯಕ್ಷರ ಮುಂದೆ ವೇತನ ...ಶ್ರೇಣಿಯಲ್ಲಿ ತಮಗಾಗಿರುವ ಅನ್ಯಾಯದ ...ಕುರಿತಂತೆ ಅಹವಾಲುಗಳನ್ನು ಮಂಡಿಸಿದ್ದರು. ...ಅದರಿಂದ ಯಾವ ಪ್ರಯೋಜನವೂ ಆಗಿಲ್ಲ.


ಈಗ ಸರ್ಕಾರ ಬೇರೆ ರಾಜ್ಯಗಳಿಗೆ ಸಮಾನ...ವಾಗಿ ವೇತನ ಶ್ರೇಣಿ ನೀಡಲಾಗಿದೆ ಎಂದು ...ಹೇಳುತ್ತಾ, ಸಾರ್ವಜನಿಕರಿಗೆ ತಪ್ಪು ಮಾಹಿತಿ ...ರವಾನಿಸುತ್ತಿದೆ. ಪ್ರಸ್ತುತ ಪದವಿಪೂರ್ವ ಹಾಗೂ ...ಪ್ರೌಢಶಾಲಾ ಶಿಕ್ಷಕರುಗಳಿಗೆ ನೀಡಿರುವ ವೇತನ ...ಶ್ರೇಣಿ ನೆರೆಯ ರಾಜ್ಯಗಳಾದ ಆಂಧ್ರ, ತಮಿಳು ...ನಾಡು, ಕೇರಳದಲ್ಲಿ ಐದಾರು ವರ್ಷಗಳ ...ಹಿಂದೆಯೇ ನೀಡಿರುವಂತದ್ದು. ಈಗ ಅವರು ...ಆರನೇ ವೇತನ ಆಯೋಗ ಪಡೆಯುವ ...ಸನಿಹದಲ್ಲಿದ್ದಾರೆ. ಇದರಿಂದಾಗಿ ಮತ್ತೆ ವೇತನ ತಾರತಮ್ಯದ ಸರಪಳಿ ಮುಂದುವರಿಯಲಿದೆ.



ಶಶಿಲ್ ನಮೋಶಿ



ವೈ.ಎ. ನಾರಾಯಣಸ್ವಾಮಿ



ಗಣೇಶ್ ಕಾರ್ನಿಕ್

ಇದೇ ಕಾರಣಕ್ಕಾಗಿ 98ರ ಮುಷ್ಕರದ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡ ನಿರ್ಬಂಧ ಕ್ರಮಗಳಿಂದ, ಕಿರುಕುಳ, ಶಿಕ್ಷೆ ಅನುಭವಿಸಿದ್ದರು. ಈ ಬಾರಿ ಮತ್ತಷ್ಟು ಸುಸಜ್ಜಿತವಾಗಿ, ಸಂಘಟಿತವಾಗಿ ತಮ್ಮ ನ್ಯಾಯಯುತ ಬೇಡಿಕೆಯ ಈಡೇರಿಕೆಗಾಗಿ ಮುಷ್ಕರ ಹಾದಿ ಹಿಡಿಯಲು ಸಕಲಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಇದನ್ನು ಮನಗಂಡೇ ಶಿಕ್ಷಕರ ಕ್ಷೇತ್ರಗಳಿಂದ ಚುನಾಯಿತರಾಗಿರುವ ಅಷ್ಟೂ ಎಂ.ಎಲ್.ಸಿ.ಗಳು ಪಕ್ಷಾತೀತವಾಗಿ ಧ್ವನಿ ಎತ್ತಲು ನಿರ್ಧರಿಸಿದ್ದಾರೆ. ಇತ್ತೀಚೆಗೆ ಶಾಸಕರ ಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಆಗಮಿಸಿದ್ದ ಸುಮಾರು 300 ಜನ ಪದಾಧಿಕಾರಿಗಳೊಂದಿಗೆ ಎಂ.ಎಲ್.ಸಿ.ಗಳಾದ ವೈ.ಎ. ನಾರಾಯಣಸ್ವಾಮಿ, ಮರಿತಿಬ್ಬೇಗೌಡ, ಶ್ರೀಕಂಠೇಗೌಡ, ಶಶಿಲ್ ನಮೋಶಿ, ಎಂ.ಪಿ. ನಾಡಗೌಡ, ಬಸವರಾಜ್ ಹೊರಟ್ಟಿ, ಗಣೇಶ್ ಕಾರ್ನಿಕ್ ಪಾಟೀಲ್‌ರವರುಗಳು ಸುದೀರ್ಘವಾಗಿ ಚರ್ಚಿಸಿ ಈ ನಿರ್ಧಾರಕ್ಕೆ ಬಂದಿದ್ದಾರೆ. ಐದನೇ ವೇತನ ಆಯೋಗ ವೇತನ ತಾರತಮ್ಯ ನಿವಾರಣೆ ಮಾಡಿಲ್ಲವೆಂಬ ಕಾರಣಕ್ಕೆ ನಿರಾಸೆಯಾಗುವುದು ಬೇಡ. ವೇತನ ಆಯೋಗ ಸರ್ಕಾರ ರಚಿಸಿರುವ ಸಂಸ್ಥೆ, ಆಯೋಗ ಶಿಫಾರಸ್ಸು ಮಾಡದಿದ್ದರೂ ಪರಮಾಧಿಕಾರ ಹೊಂದಿರುವ ಸರ್ಕಾರದ ಗಮನಕ್ಕೆ ತಂದು ಚರ್ಚಿಸುತ್ತೇವೆ. ನಮ್ಮ ನ್ಯಾಯಯುತ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದಿದ್ದಲ್ಲಿ ಹೋರಾಟಕ್ಕೆ ಚಾಲನೆ ನೀಡೋಣ ಎಂಬ ಭರವಸೆ ಕೊಟ್ಟಿದ್ದಾರೆ.

ರಾಜ್ಯದ ಸಹಸ್ರಾರು ಪ್ರೌಢಶಾಲಾ ಶಿಕ್ಷಕರು ಹಾಗೂ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಈ ವಿಧಾನಸಭಾ ಅಧಿವೇಶನದಲ್ಲಿ ಆಗಬಹುದಾದ ಬೆಳವಣಿಗೆಗಳನ್ನು ಕಾತುರದಿಂದ ಕಾದು ನೋಡುತ್ತಿದ್ದಾರೆ. ಸರ್ಕಾರದ ಮುಂದೆ ಈಗ ಎರಡು ಆಯ್ಕೆಗಳಿವೆ. ವೇತನ ತಾರತಮ್ಯ ನಿವಾರಣೆಗೆ ಸ್ಪಂದಿಸುವುದು, ಇಲ್ಲವೇ ಪ್ರತಿಭಟನೆ ಎದುರಿಸುವುದು.

–ಅಹೋಬಳ

ಕಣ್ಣಿಗೆ ರಾಚುವ ತಾರತಮ್ಯ

ಪ್ರೌಢಶಾಲಾ ಶಿಕ್ಷಕರಿಗೂ ವೇತನ ಶ್ರೇಣಿಯಲ್ಲಿ ತುಂಬಾ ಅನ್ಯಾಯವಾಗಿದೆ. 1970 ರಲ್ಲಿ ಹೈಸ್ಕೂಲ್ ಶಿಕ್ಷಕರು, ಸಬ್‌ಇನ್ಸ್‌ಪೆಕ್ಟರ್‌ಗಳು, ಸಬ್‌ರಿಜಿಸ್ಟ್ರರ್‌ಗಳು, ಇಂಜಿನಿಯರುಗಳು ವೇತನ ಶ್ರೇಣಿ ಒಂದೇ ತೆರನಾಗಿತ್ತು, ನಂತರ ಜಾರಿಗೆ ಬಂದ ಎಲ್ಲಾ ವೇತನ ಶ್ರೇಣಿಗಳಲ್ಲಿ ಪ್ರೌಢಶಾಲಾ ಶಿಕ್ಷಕರನ್ನು ಹೊರತುಪಡಿಸಿ ಮಿಕ್ಕವರ ವೇತನ ಶ್ರೇಣಿಗಳನ್ನು ಅವರ ಬೇಡಿಕೆಗೆ ಅನುಗುಣವಾಗಿ ಹೆಚ್ಚಳ ಮಾಡಲಾಗಿದೆ.

1986 ರಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರವಿದ್ದಾಗ ಈ ತಾರತಮ್ಯ ಖಂಡಿಸಿ ಸಹಸ್ರಾರು ಪ್ರೌಢಶಾಲಾ ಶಿಕ್ಷಕರು ಬೆಂಗಳೂರಿನಲ್ಲಿ ಬೃಹತ್ ರ‍್ಯಾಲಿ ನಡೆಸಿದರು. ಸರ್ಕಾರ ಸ್ಪಂದಿಸದಿದ್ದಾಗ ಇಡೀ ರಾಜ್ಯದಾದ್ಯಂತ ಉಪವಾಸ ಸತ್ಯಾಗ್ರಹ ಮಾಡಿದರು. ಸರ್ಕಾರ ಅನಿವಾರ್ಯವಾಗಿ ಸಂಘದ ಪದಾಧಿಕಾರಿಗಳನ್ನು ಮಾತುಕತೆಗೆ ಆಹ್ವಾನಿಸಿ 1600 ರೂ. ಮೂಲವೇತನ ಶ್ರೇಣಿ ನೀಡಲು ಒಪ್ಪಿಕೊಂಡಿತು. ಆದರೆ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಆಗಿದ್ದ ಕೆ.ಸಿ. ಪುಟ್ಟಸಿದ್ಧಶೆಟ್ಟಿ 1720 ರೂ.ಗಳನ್ನೇ ಮೂಲವೇತನವಾಗಿ ನಿಗದಿಪಡಿಸಬೇಕೆಂದು ಹಠ ಮಾಡಿದ್ದರಿಂದ ಮಾತುಕತೆ ಮುರಿದುಬಿತ್ತು.

ಸರ್ಕಾರ ಕಾನೂನು ಪ್ರಹಾರ ಮಾಡಿ ಪ್ರತಿಭಟನೆಯನ್ನು ಹತ್ತಿಕ್ಕಿತು. ವೇತನ ತಾರತಮ್ಯ ನಿವಾರಣೆಗೊಂದು ಸಮಿತಿಯನ್ನು ರಚಿಸಿತು. ಇದು ಶಿಕ್ಷಕರ ಪ್ರತಿನಿಧಿಗಳೇ ಇಲ್ಲದ ಸರ್ಕಾರದ ಪರವಾಗಿಯೇ ಭಜನೆ ಮಾಡಲು ಸಿದ್ಧರಿದ್ದ ಐಎಎಸ್‌ಗಳನ್ನೊಳಗೊಂಡ ಸಮಿತಿಯಾಗಿತ್ತು. ಆರ್ಥಿಕ ಇಲಾಖೆಯ ಕಾರ್ಯದರ್ಶಿಯ ಹೆಸರಿನಲ್ಲಿ ರಚಿಸಲಾದ ಈ ಸಮಿತಿ ಈಗಿರುವ ವೇತನಶ್ರೇಣಿ ಸರಿಯಾಗಿದೆ ಎಂದು ತಿಪ್ಪೇ ಸಾರಿಸಿತು.

ನಂತರದ ದಿನಗಳಲ್ಲಿ ಪ್ರೌಢಶಾಲಾ ಶಿಕ್ಷಕರಿಗಾಗಿರುವ ಈ ವೇತನ ತಾರತಮ್ಯ ನಿವಾರಿಸುವ ಭರವಸೆ ನೀಡಿ ಬಹಳಷ್ಟು ಜನ ಎಂಎಲ್‌ಸಿಗಳಾದರು. ಯಾರ ಕೈಯಲ್ಲೂ ಸಮಸ್ಯೆ ನಿವಾರಿಸಲಾಗಲಿಲ್ಲ, ಚುನಾವಣೆ ಗೆಲುವಿಗೆ ಇದೊಂದು ಅಸ್ತ್ರವಾಗಿ ಬಳಕೆಯಾಯಿತು. ಅಂದಿನಿಂದ ಇಂದಿನವರೆಗೂ ಸತತವಾಗಿ ಸಂಘದ ಪದಾಧಿಕಾರಿಗಳು ಪ್ರತಿ ವೇತನ ಆಯೋಗದ ಅಧ್ಯಕ್ಷರ ಮುಂದೆ ಅಹವಾಲುಗಳನ್ನು ಸಲ್ಲಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳ ಹಾಗೂ ಸರ್ಕಾರದ ಮೊರೆ ಹೋಗಿದ್ದಾರೆ. ಐದನೇ ವೇತನ ಆಯೋಗದಲ್ಲಾದರೂ ಈ ತಾರತಮ್ಯ ನಿವಾರಣೆಯಾಗಬಹುದೆಂಬ ನಿರೀಕ್ಷೆಯಲ್ಲಿದ್ದ ಪ್ರೌಢಶಾಲಾ ಶಿಕ್ಷಕರಿಗೆ ಈಗ ಭಾರೀ ನಿರಾಸೆಯಾಗಿದೆ.

1986 ರಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರದ ಪ್ರಸ್ತಾವನೆಗೆ ಒಪ್ಪಿಕೊಂಡಿದ್ದರೆ ಈಗಿನ ಮೂಲವೇತನ 10,800 ರೂ. ಆಗುತ್ತಿತ್ತು, ಅಂದು ಕೆ.ಸಿ. ಪುಟ್ಟಸಿದ್ಧಶೆಟ್ಟಿ ತಾಳಿದ ಹಠಮಾರಿ ಧೋರಣೆಗೆ ಇಂದು ಸಹಸ್ರಾರು ಶಿಕ್ಷಕರು ಬೆಲೆ ತೆರಬೇಕಾಗಿದೆ, 1986 ರಲ್ಲಿ ಪ್ರೌಢಶಾಲಾ ಸಹ ಶಿಕ್ಷಕರಿಗೂ, ಮುಖ್ಯೋಪಾಧ್ಯಾಯರುಗಳಿಗೂ ಮೂಲ ವೇತನದಲ್ಲಿ ಕೇವಲ 200 ರೂ. ಅಂತರವಿತ್ತು, ಈಗ 3175 ರೂ.ಗಳಷ್ಟು ಅಂತರವಿದೆ. ಈಗಿನ ಸಹ ಶಿಕ್ಷಕರ ಮೂಲವೇತನ 8,825 ರೂ. ಇದ್ದರೆ ಮುಖ್ಯ ಶಿಕ್ಷಕರದು 12,000ದಿಂದ ಮೂಲವೇತನ ನಿಗದಿಯಾಗಿದೆ. ಯಾವ ದೃಷ್ಟಿಕೋನದಿಂದ ನೋಡಿದರೂ ತಾರತಮ್ಯ ಕಣ್ಣಿಗೆ ರಾಚುವಂತಿದೆ.

ಬಂದ ಪತ್ರ

...ದಬ್ಬಾಳಿಕೆಯಲ್ಲಿ, ಅದನ್ನು ವಿರೋಧಿಸುವ ಒಂದು ಸಣ್ಣ ಪ್ರತಿಭಟನೆಯನ್ನೂ ಇಡೀ ವ್ಯವಸ್ಥೆ, ಸರ್ಕಾರ ...ಯಾವುದಾದರೊಂದು ರೀತಿಯಲ್ಲಿ ಹತ್ತಿಕ್ಕಲೇ ...ಬೇಕೆಂದು ಪ್ರಯತ್ನ ಮಾಡುತ್ತಿದೆ.

ನಾವು ನಮ್ಮ ಸಮಸ್ಯೆಗಳಿಗಾಗಿ, ಸುತ್ತಲಿನ ...ಜನರ ಸಮಸ್ಯೆಗಳಿಗಾಗಿ ಮಾನವೀಯ ...ಅಂತಃಕರಣದಿಂದ ಸ್ಪಂದಿಸಿದ, ಪ್ರತಿಭಟಿಸಿದ ...ಕಾರಣಕ್ಕೆ ಇವತ್ತು ಪೊಲೀಸ್ ಇಲಾಖೆ ನಮ್ಮ ...ಕುಟುಂಬದ ಮೇಲೆ ಮೇಲಿಂದ ಮೇಲೆ ...ಮಾನಸಿಕ ಹಿಂಸೆ ಕೊಡುತ್ತಲೇ ಇದೆ. ...ರವಿಯನ್ನು ಮತ್ತೆಮತ್ತೆ ಬಂಧಿಸಿ ಸುಳ್ಳು ...ಕೇಸುಗಳನ್ನು ಹಾಕುವ ಮೂಲಕ ಹೊರಗಿನ ...ಸಮಾಜ ಮತ್ತು ನಮ್ಮ ಆಪ್ತರು ನಮ್ಮನ್ನು ...ದೂರವಿಡುವಂತಹ ಪರಿಸ್ಥಿತಿಯನ್ನು ...ನಿರ್ಮಾಣ ಮಾಡುತ್ತಿವೆ.



ರವಿ ಹಾಗಲಗಂಟಿ

ನಮ್ಮ ಸುತ್ತಲಿರುವ ಜನರಲ್ಲಿ ನಮ್ಮ ಬಗ್ಗೆ ಗೌರವ, ...ಪ್ರೀತಿ ಇರುವ ಒಂದೇ ಕಾರಣದಿಂದ ನಾವು ಈ ಎಲ್ಲಾ ...ಅವಮಾನ, ದೌರ್ಜನ್ಯವನ್ನು ಎದುರಿಸುವ ಧೈರ್ಯ ...ಹೊಂದಿದ್ದೇವೆ. ಆದರೆ ಇದೇ ರೀತಿ ಪೊಲೀಸರು ನಮ್ಮ ...ಮೇಲೆ ನಿರಂತರ ಕಿರುಕುಳ ಕೊಡುತ್ತಾ ಬಂದರೆ ಮುಂದಿನ ...ದಿನಗಳಲ್ಲಿ ನಾವು ಏಕಾಂಗಿಗಳಾಗಬಹುದು. ಹೊರಗಿನ ...ನಾಗರಿಕ ಸಮಾಜಕ್ಕೆ ಇಲ್ಲಿನ ನಮ್ಮ ಮತ್ತು ನಮ್ಮೊಡ...ನಾಡಿಗಳ ಸ್ಥಿತಿ ಏನು ಎಂದು ತಿಳಿದಿರುವುದಿಲ್ಲ, ಅವರು ...ನಗರದಲ್ಲಿ, ಸಕಲ ಸೌಲಭ್ಯ ಹೊಂದಿರುವ ನಾಡಲ್ಲಿ ಕುಳಿತು ...ಸರ್ಕಾರ, ಪೊಲೀಸರು ಹೇಳುವ ಮಾತನ್ನೇ ನಂಬುತ್ತಾರೆಯೇ ...ಹೊರತು ನಮ್ಮ ಸಮಸ್ಯೆಗಳನ್ನಲ್ಲ.

ಯಾವುದೋ ಮೇಲ್ವರ್ಗದ ವಿಚಾರಗಳ ಬಗ್ಗೆ ದೊಡ್ಡ...ದಾಗಿ ಹೇಳಿಕೆ ಕೊಡುತ್ತಾ, ಪ್ರತಿಭಟನೆ ಮಾಡುತ್ತಾ, ...ಬಿಂಬಿಸುತ್ತಾ, ಅದೇ ಇಡೀ ಜನರ ಸಮಸ್ಯೆ ಅನ್ನೋ...ಹಾಗೆ ಬಿಂಬಿಸುತ್ತಾರೆ. ಹಿಂಸೆ-ಅಹಿಂಸೆ ಅಂತ ...ಬಗ್ಗೆ ಚರ್ಚೆ ಮಾಡುತ್ತಾ ನಾವು ...ಆದಿವಾಸಿಗಳು, ಕೆಳವರ್ಗದ ಜನರ ಮೇಲೆ ...ದ ಹಿಂಸೆಯನ್ನೇ ಮರೆಯುತ್ತಾರೆ. ಇದೇ ...ದಲ್ಲಿ 'ಅವರಣ'ದಂತಹ ಕಾದಂಬರಿಗಳು ...ಬೇರೆ ಧರ್ಮದವರನ್ನು ಅನುಮಾನದಿಂದ ... ಅವರು ಆತಂಕದಿಂದ ಬದುಕುವ ವಾತಾವರಣ...ವನ್ನು ನಿರ್ಮಿಸುತ್ತಾರೆ. ಆದರೆ ಅದನ್ನು ಹಿಂಸೆಯೆಂದು ಗುರುತಿಸದೆ ಇವತ್ತು ಆದಿವಾಸಿಗಳು ತಮ್ಮ ಹೋರಾಟಕ್ಕೆ ಬೆಂಬಲ ಕೊಟ್ಟ ನಕ್ಸಲೀಯರಿಗೆ ಋಣಿಯಾಗಿದ್ದಕ್ಕೆ ಆದಿವಾಸಿಗಳು ಹಿಂಸೆಯನ್ನು ಪ್ರತಿಪಾದಿಸುತ್ತಾರೆ ಎನ್ನುತ್ತಾರೆ. ANF, STF ನಂತಹ ಪಡೆಗಳನ್ನು ನಿಯೋಜಿಸಿ ಅವರನ್ನು ದಮನ ಮಾಡುತ್ತಾರೆ. ಒಟ್ಟಾರೆ ಜನವಿರೋಧಿ ನೀತಿಗಳ ಬಗ್ಗೆ ಜನ ಪ್ರತಿಭಟಿಸಿದರೆ ಅದನ್ನೇ ಹಿಂಸೆ ಅಂತ ದೊಡ್ಡದಾಗಿ ಕೂಗಾಡುತ್ತಾರೆ.

ಬಹುಶಃ ರವಿ, ನಾವು ಎಲ್ಲರೂ ಮೇಲ್ವರ್ಗದವರ ರೀತಿಯೇ ಇದ್ದಿದ್ದರೆ ಇವತ್ತು ಕೋರ್ಟು, ಕೇಸು, ಜೈಲು, ಅವಮಾನ, ಅನುಮಾನ ಇವುಗಳು ಯಾವುದೂ ಇಲ್ಲದೆ ಸನ್ಮಾನ, ಶಾಲು, ಬಿರುದು ಬಾವಲಿಗಳು ಸಿಕ್ಕುತ್ತಿದ್ದವು ಅನ್ನಿಸುತ್ತೆ, ನಮಗೀಗ ಒಂದಂತೂ ಸ್ಪಷ್ಟವಾಗಿದೆ. ನಾವು ಜನಪರ ಕಾಳಜಿ ಇಟ್ಟುಕೊಂಡದ್ದು, ಮಾನವೀಯ ಮೌಲ್ಯ ಹೊಂದಿದ್ದು ಅವನ್ನೆಲ್ಲಾ ಜನರೊಂದಿಗೆ ಹಂಚಿಕೊಂಡಿದ್ದು ಇವು ನಾವು ಮಾಡಿದ 'ಅಪರಾಧ'ಗಳು ಎಂದು.

ಒಟ್ಟಾರೆ ಇವತ್ತು ಇಡೀ ಸಮಾಜ ಎರಡು ಭಾಗವಾಗಿದೆ ಅನ್ನಿಸುತ್ತೆ, ಒಂದೆಡೆ ತಮ್ಮ ಸಮುದಾಯದ ಸ್ವಹಿತಾಸಕ್ತಿ, ಧರ್ಮದಂತಹ ಕಾರಣಕ್ಕಾಗಿ ಆಳುವವರ ಹಿಂಬಾಲಕರಾಗಿ ಜನರ ಮೂಲ ಸಮಸ್ಯೆಗಳ ಬಗ್ಗೆ ಯೋಚಿಸುವುದನ್ನು ಬಿಟ್ಟು ಯಾವುದೋ ಅಮಲಿನಲ್ಲಿ ತೇಲುವಂತೆ ಮಾಡುವ ಗುಂಪು. ಇನ್ನೊಂದೆಡೆ ಎಲ್ಲಾ ರೀತಿಯ ದಮನ, ದೌರ್ಜನ್ಯಗಳನ್ನು ಸಹಿಸಿಕೊಳ್ಳುತ್ತಾ, ದಿನದಿನದ ಬದುಕನ್ನು ಆತಂಕದಲ್ಲಿ ದೂಡುತ್ತಿರುವ ಗುಂಪು. ಈ ದಮನಿತ ಗುಂಪೇ ಇವತ್ತು ಪೊಲೀಸ್ ಮತ್ತು ಸರ್ಕಾರದ ದೃಷ್ಟಿಯಲ್ಲಿ ಒಂದೋ ನಕ್ಸಲೈಟರು ಇಲ್ಲಾ ನಕ್ಸಲ್ ಬೆಂಬಲಿಗರು. ಇಂತಹ ಸಂದರ್ಭದಲ್ಲಿ ದಮನಿತರ ಪರ ಧ್ವನಿ ಎತ್ತುವ ರವಿಯಂತಹವರು ... ನಮ್ಮಂತಹವರು ಆಳುವವರ ದೃಷ್ಟಿಯಲ್ಲಿ ಅಪರಾಧಿಗಳೇ.

ಪೊಲೀಸ್ ಇಲಾಖೆಯಿಂದ ನಮ್ಮ ಕುಟುಂಬಕ್ಕೆ ಜೀವಬೆದರಿಕೆ ಇರುವ ಕಾರಣ ಹಳ್ಳಿಯ ಶಾಲೆಯಲ್ಲಿ ಓದುತ್ತಿರುವ ನನ್ನ ಮಗನನ್ನು ಶಾಲೆಗೆ ಕಳಿಸಲೂ ಇವತ್ತು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಅವನು ಹೋಗಬೇಕಾದ ಶಾಲೆಯ ದಾರಿ ಕಾಡಿನದ್ದಾಗಿದ್ದು ಯಾವ ಕ್ಷಣದಲ್ಲಾದರೂ ಆತನಿಗೆ ಪೊಲೀಸರಿಂದ ಅಪಾಯ ಎದುರಾಗಬಹುದು. ಹಾಗಾಗಿ ನಮ್ಮ ಮನೆಯವರಿಗೆ ರಕ್ಷಣೆ ಸಿಗುವವರೆಗೆ ನಮ್ಮ ಮಗನನ್ನು ಶಾಲೆಗೆ ಕಳುಹಿಸಲಾಗುವುದಿಲ್ಲ, ಆದ್ದರಿಂದ ನನ್ನ ಮಗನ ಶಿಕ್ಷಣಕ್ಕೆ ಪರ್ಯಾಯ ವ್ಯವಸ್ಥೆಯನ್ನು ಶಿಕ್ಷಣ ಇಲಾಖೆ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸುತ್ತೇನೆ.

ಹಿರಿಯ ಪೊಲೀಸ್ ಅಧಿಕಾರಿಯಾದ ಶಂಕರ ಬಿದರಿಯವರು ಮೊನ್ನೆ ಟಿ.ವಿ. ಸಂವಾದ ಒಂದರಲ್ಲಿ ಮಾತನಾಡುತ್ತಾ "ಈ ನಾಡಲ್ಲಿ ಪ್ರಜಾಪ್ರಭುತ್ವವಿದೆ" ಎಂದು ಹೇಳಿದರು. ಆದರೆ ಮೊನ್ನೆ ನಮ್ಮ ರವಿ ಮೇಲೆ, ನಮ್ಮ ಮನೆ ಮೇಲೆ ನಡೆದ ಪೊಲೀಸರ ಕಾರ್ಯಾಚರಣೆ ಕಂಡು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೋ ಅಥವಾ ಪೊಲೀಸ್ ರಾಜ್ಯವಿದೆಯೋ ಎಂಬ ಅನುಮಾನ ನನ್ನಲ್ಲಿ ಶುರುವಾಗಿದೆ.



ಭಾಗ್ಯ ಹಾಗಲಗಂಟಿ


ಕೂಲಿ ಕೆಲಸಕ್ಕೆ ಹೋದರೂ ಬರ್ಕಣ ಎನ್‌ಕೌಂಟರ್‌ಗೆ ಪ್ರೇರಣೆ, ಭಯೋತ್ಪಾದಕರಿಗೆ ನೆರವು, ನಕ್ಸಲರಿಗೆ ಬೆಂಬಲ ಎಂದೆಲ್ಲ ಆರೋಪಿಸಿ ಕೇಸು ಹಾಕೋದಾದರೆ, ಅಂತಹ ವ್ಯವಸ್ಥೆಯನ್ನು ಏನಂತ ಕರೀಬೇಕು? ಜನರ ನೋವಿಗೆ ಧ್ವನಿಯಾಗುವುದು, ಜನಪರ ಚಳವಳಿಯಲ್ಲಿ ಭಾಗವಹಿಸುವುದು, ಜನರ ಸಮಸ್ಯೆಗಳ ಬಗ್ಗೆ ಬರೆಯುವುದು ಕೂಡ ಇವತ್ತಿನ ದಿನಗಳಲ್ಲಿ ಅಪರಾಧವೇ ಆಗಿದೆ. ಪೊಲೀಸ್ ಕಾರ್ಯಾಚರಣೆ ಹೆಸರಲ್ಲಿ ಇವರು ಏನು ಬೇಕಾದರೂ ... ಎನುವುದಾದರೆ ನಮ್ಮಂತಹವರು ...ಬೇಕಾದರೂ ಹೇಗೆ?

ಯಾವ ತಪ್ಪೂ ಮಾಡದ ರವಿಯನ್ನು ಹಿಂದೊಮ್ಮೆ ಬಂಧಿಸಿ, ಅವನಿಗೆ ಸಂಬಂಧವೇ ಇಲ್ಲದ ಕೇಸಿನಲ್ಲಿ ಸೇರಿಸಿದ್ದಲ್ಲದೆ, ಈ ಸಾರಿಯೂ ಹಾಗೆ ಖೊಟ್ಟಿ ಕೇಸುಗಳನ್ನು ಹಾಕಿ "ಅವನು ಹಿಂದೆ ಕೂಡ ಕೇಸಲ್ಲಿ ಇದ್ದ" ಅಂತ ಪ್ರಚಾರ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರಿದರೆ, ಈ ಕೇಸುಗಳು ಹೀಗೇ ಇದ್ದರೆ, ಮುಂದೆಯೂ ಹೀಗೆ ರವಿಯನ್ನು ಅರೆಸ್ಟ್ ಮಾಡಿ ಬೇರೆಬೇರೆ ಕೇಸು ಹಾಕಿ "ಆತ ಹಿಂದೆ ಕೂಡಬೇಕಾಗಿದ್ದ" ಅಂತ ಪೊಲೀಸರು ಹೇಳುತ್ತಲೇ ಇರುತ್ತಾರೆ. ಹಾಗಾಗಿ ನಾವು ಒತ್ತಾಯಿಸುತ್ತಿರುವುದು ಏನೆಂದರೆ ಯಾವುದೇ ಕಾರಣಕ್ಕೂ ಮುಂದೆ ನಮಗೆ ಪೊಲೀಸರಿಂದ ಇಂತಹ ಅನ್ಯಾಯ ಆಗದಂತೆ ರಕ್ಷಣೆ ಬೇಕು; ಮತ್ತು ರವಿಯ ಮೇಲೆ ಹಾಕಿರುವ ಎಲ್ಲಾ ಸುಳ್ಳು ಕೇಸುಗಳನ್ನು ಈ ಕೂಡಲೇ ವಾಪಸ್ಸು ತೆಗೆದುಕೊಳ್ಳಬೇಕು.

ನಿಜವಾದ ಪ್ರಜಾಪ್ರಭುತ್ವವಿರುವ ನಾಡಿನಲ್ಲಿ ಜನರ ನೋವಿಗೆ ಧ್ವನಿಯಾಗುವವರಿಗೆ ಗೌರವ, ಪ್ರೀತಿ, ಬೆಂಬಲ ಇರುತ್ತೆ, ಅವರ ಧ್ವನಿಗೆ ಬೆಂಬಲವಿರುತ್ತೆ. ಅದನ್ನ ಹತ್ತಿಕ್ಕುವ ಪ್ರಯತ್ನ ನಡೆಯುವುದಿಲ್ಲ. ಶಂಕರ ಬಿದರಿಯವರಲ್ಲಿ ನಮ್ಮ ಮನವಿ ಏನೆಂದರೆ ಈ ನಾಡಿನಲ್ಲಿ ನಿಜವಾದ ಪ್ರಜಾಪ್ರಭುತ್ವ ಇರೋದಾದರೆ ರವಿ ಮೇಲೆ ಹಾಕಿರೋ ಸುಳ್ಳು ಕೇಸು ಹಿಂತೆಗೆದುಕೊಳ್ಳಿ, ನಮ್ಮ ಮೇಲೆ ಪೊಲೀಸ್ ಕಿರುಕುಳ ನಿಲ್ಲಿಸಿ, ನಮಗೆ ಪೊಲೀಸ್ ದಬ್ಬಾಳಿಕೆಯಿಂದ ರಕ್ಷಣೆ ಕೊಡಿ, ಜೀವ ಬೆದರಿಕೆ ಹಾಕಿರುವ ಪೊಲೀಸರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ, ಜೀವ ಬೆದರಿಕೆ ಹಾಕಿರೋ ಕಾರಣ ನಮ್ಮ ಮಗುವನ್ನು ಶಾಲೆಗೆ ಕಳುಹಿಸಲಾಗದೆ ಮನೆಯಲ್ಲೇ ಕೂರಿಸಿಕೊಂಡಿದ್ದೇವೆ; ಅವನ ಶಿಕ್ಷಣಕ್ಕೆ ಸೂಕ್ತ ವ್ಯವಸ್ಥೆ ಮಾಡಿ. ಶಂಕರ ಬಿದರಿಯವರು ಇಲ್ಲಿ ಪೊಲೀಸ್ ರಾಜ್ಯವಿಲ್ಲ, ಬದಲಾಗಿ ನಿಜವಾಗಲೂ ಪ್ರಜಾಪ್ರಭುತ್ವವಿದೆ ಎಂಬುದನ್ನು ನಾಡಿನ ಜನರಿಗೆ ತೋರಿಸಿಕೊಡುತ್ತಾರೆ ಎಂದು ಭಾವಿಸಿದ್ದೇನೆ

■ ಭಾಗ್ಯ ಹಾಗಲಗಂಟಿ, ಶೃಂಗೇರಿ

ಕೊನೆಗೂ ಸಿಕ್ಕಿಬಿದ್ದ ನರಭಕ್ಷಕಿ




ನಾವು ಹಳ್ಳದಲ್ಲಿ ಇಳಿಜಾರಿನತ್ತ ಸಾಗಿದಂತೆ ಹೆಚ್ಚೆಚ್ಚು ಆಳವಾಗುತ್ತಾ ಹೋಗುತ್ತಿತ್ತು. ಐದು ಅಡಿಯಿಂದ ಈಗ ಸುಮಾರು ಅಡಿಗಳಷ್ಟು ಆಳವಾಗಿತ್ತು. ಪರ್ವತಗಳ ಇಳಿಜಾರುಗಳಿಂದ ರಭಸವಾಗಿ ಹರಿದು ಬರುವ ನೀರು ಹಳ್ಳದಲ್ಲಿ ವೇಗವಾಗಿ ನುಗ್ಗಿ, ಅಷ್ಟಬಂದ ಬಂಡೆಗಳನ್ನೆಲ್ಲಾ ತಿಕ್ಕಿ ಗಾಜಿನಂತೆ ನಯಗೊಳಿಸಿಬಿಟ್ಟಿತ್ತು. ನಮಗೆ ಅಡ್ಡವಾದ ಬಂಡೆಯ ಮೇಲ್ಮೈ ತೀರಾ ನಯವಾಗಿದ್ದು 'ಜಾರುತ್ತಿದ್ದರೆ ನನ್ನ ಮೈಮೇಲೆ ಹೆಜ್ಜೆ ಇಟ್ಟು ನೋಡು...' ಎಂದು ಸವಾಲು ಹಾಕುವಂತಿತ್ತು. ಅದನ್ನು ಹೇಗೂ ಇಳಿಯಲು ಸಾಧ್ಯವಿರಲಿಲ್ಲ. ನಾನು ಪಕ್ಕದಲ್ಲಿದ್ದವನ ಕೈಗೆ ಬಂದೂಕು ಕೊಟ್ಟು ಬಂಡೆಯ ತುದಿಯಲ್ಲಿ ಕಾಲುಚಾಚಿ ಕೂತು ಸೊಯ್ಯನೆ ಜಾರಿದೆ. ಯಾವ ಅನಾಹುತವೂ ಇಲ್ಲದೆ ಕೆಳಗೆ ಹಾಸಿದಂತಿದ್ದ ಮರಳಿನ ಮೇಲಕ್ಕೆ ಬಂದೆ. ಉಳಿದವರೂ ನನ್ನ ಮೇಲ್ಪಂಕ್ತಿಯನ್ನೇ ಅನುಸರಿಸಿ ಜಾರಿದರು. ನಿಂತವರು ನನ್ನ ಕೈಗೆ ಆತುರದಿಂದ ಬಂದೂಕವನ್ನು ಹಿಂತಿರುಗಿಸುತ್ತಾ, ಗಾಬರಿಯಲ್ಲಿ 'ಹುಲಿ ಗುರುಗುಟ್ಟಿದ್ದು ಕೇಳಿಸಲಿಲ್ಲವೇ?' ಎಂದರು. ನಿಜಕ್ಕೂ ಹೇಳಬೇಕೆಂದರೆ ನನಗೆ ಅಂಥದ್ದೇನೂ ಕೇಳಿಸಿರಲೇ ಇಲ್ಲ. ಬಹುಶಃ ತಳ ಸೇರುವಲ್ಲಿ ಮುಗ್ಗರಿಸುವ ಆತಂಕದಲ್ಲಿದ್ದ ನನ್ನ ಕಿವಿಗೆ ಅದು ಬಿದ್ದಿರಲಿಕ್ಕಿಲ್ಲ. ನಾನು 'ಯಾವ ಕಡೆಯಿಂದ'ಎಂದು ಕೇಳಿದೆ. 'ಯಾವ ಕಡೆ ಎಂದು ಗೊತ್ತಿಲ್ಲ, ಆದರೆ ನಾವು ಜಾರಲು ಕುಳಿತ ಕ್ಷಣದಲ್ಲಿ ಆಳವಾದ ಧ್ವನಿಯಲ್ಲಿ ಗುರುಗುಟ್ಟಿದ್ದನ್ನು ಮಾತ್ರ ಕೇಳಿಸಿಕೊಂಡೆವು' ಎಂದರು.

ಸಾಮಾನ್ಯವಾಗಿ ಹುಲಿಗಳು ಹಗಲಿನ ಶಿಕಾರಿಯ ಹೊತ್ತಿನಲ್ಲಿ ಅವು ತಮ್ಮ ಇರುವಿನ ಜಾಗದ ಗುಟ್ಟು ಬಿಟ್ಟುಕೊಡುವುದಿಲ್ಲ. ಹಾಗಿದ್ದೂ ಅದು ಗುರುಗುಟ್ಟಿದ್ದೇಕೆ? ಬಹುಶಃ ಹೀಗಿರಬಹುದು! ನಾವು ಬಯಲಿನಿಂದ ಹೊರಟ ತಕ್ಷಣ ಹುಲಿ ಇನ್ನೊಂದು ದಂಡೆಯಲ್ಲಿ ನಮ್ಮನ್ನು ಹಿಂಬಾಲಿಸಿದೆ. ನಾವು ಬಂಡೆಯನ್ನು ಜಾರಿದಲ್ಲಿ ಹಳ್ಳವು ತನ್ನ ಅರ್ಧಗಾತ್ರಕ್ಕಿಳಿಯುತ್ತದೆ. ಈ ಇಕ್ಕಟ್ಟಿನ ಕಿಬ್ಬಿಯ ಬಳಿ ನಾವು ಹಳ್ಳವನ್ನಿಳಿದು ಹೋಗುತ್ತೇವೆಂದು ಅದು ಊಹಿಸಿದೆ. ಆದರೆ ನಾವು ಅದರ ನಿರೀಕ್ಷೆಗೆ ವಿರುದ್ಧವಾಗಿ ಹಳ್ಳದ ಆ ಬದಿಗೆ ಹೋಗದೆ, ಮಧ್ಯದಲ್ಲಿದ್ದ ಬಂಡೆಯನ್ನು ಜಾರಿಬಿಟ್ಟಿದ್ದೇವೆ. ಅದರ ಗುರಿ ನಾನೇ ಆಗಿದ್ದಿರಬಹುದು. ಇಲ್ಲದಿದ್ದರೆ ಅದು ನಾನು ಜಾರಿದ-ಅವರು ಜಾರುವ ಹಂತದಲ್ಲಿದ್ದಾಗ ಹೀಗೆ ಗುರುಗುಟ್ಟುತ್ತಿರಲಿಲ್ಲ, ನಾನು ಗುರಿಯಲ್ಲದೇ ಹೋಗಿದ್ದರೆ ಅದು ಅವರ ಮೇಲೆ ಆಕ್ರಮಣ ಮಾಡಬೇಕಿತ್ತು, ಅದಕ್ಕೆ ಅವಕಾಶವೂ ಇತ್ತು. ಸಾಮಾನ್ಯವಾಗಿ ಹುಲಿಗಳು ಹಾಗೆ ಮಾಡುತ್ತವೆ. ಒಂದು ಗುಂಪಿನಲ್ಲಿ ಒಂದು ಜೀವಿಯನ್ನು ಗುರಿಯಾಗಿಟ್ಟುಕೊಂಡೇ ಹಿಂಬಾಲಿಸುತ್ತವೆ. ಇದು ಅದರ ಗುರುಗುಟ್ಟುವಿಕೆಗೆ ಸರಿಯಾದ ವಿವರಣೆ ಅಲ್ಲದಿರಲೂಬಹುದು.

ನಾವೆಲ್ಲಾ ಗುಂಪಾಗಿ ನಿಂತೆವು. ಸದ್ಯಕ್ಕೆ ಅನಿರೀಕ್ಷಿತವಾಗಿ ಒಂದು ಅಪಾಯದಿಂದ ಪಾರಾಗಿದ್ದೆವು. ಅದು ಮರುಕಳಿಸಬಾರದು. ನಮ್ಮ ಹಿಂದಕ್ಕೆ ತುಂಬಾ ಇಳಿಜಾರಾದ ತೀರಾ ನಯವಾದ ಬಂಡೆ ಇತ್ತು. ಅದು ನಮ್ಮ ಬಲಕ್ಕೆ ವಿಸ್ತರಿಸಿ, ಹದಿನೈದು ಅಡಿಗಳಷ್ಟು ಎತ್ತರಕ್ಕೇರಿ ನಮ್ಮ ವಿರುದ್ಧ ದಿಕ್ಕಿಗೆ ವಾಲಿಕೊಂಡಿತ್ತು, ನಮ್ಮ ಎಡಕ್ಕೆ ದಂಡೆಯಿಂದ ಹೊರಚಾಚಿ ನಲವತ್ತು ಅಡಿ ಎತ್ತರಕ್ಕೆ ನಿಂತಿದ್ದ ಇನ್ನೊಂದು ನಯವಾದ ಬಂಡೆಯಿತ್ತು, ಇಲ್ಲಿಂದ ಮುಂದಕ್ಕೆ ಮರಳು ಹಾಸಿದಂತಿದ್ದ ಹಳ್ಳದ ದಾರಿ ನಲವತ್ತು ಅಡಿಗಳಷ್ಟು ಮಂದೆ ಸಾಗಿ, ತಿರುವಾಗುತ್ತಿತ್ತು. ಈ ತಿರುವಿನ ಬಳಿ ದೊಡ್ಡ ಗಾತ್ರದ ಮರವೊಂದು ದಂಡೆಯಿಂದ ಹಳ್ಳದೊಳಕ್ಕೆ ಅಡ್ಡಡ್ಡ ಉರುಳಿ ಬಿದ್ದಿತ್ತು, ಇದು ಹಳ್ಳಕ್ಕೆ ಕಟ್ಟೆಕಟ್ಟಿದಂತಾಗಿ, ನೆಲದಿಂದ ಅದರ ಮೇಲ್ತುದಿಯವರೆಗೆ ಕಡ್ಡಿಕಸ, ಸೊಪ್ಪುಸೆದೆಗಳು ಕಟ್ಟಿಕೊಂಡು ಅಕ್ಷರಶಃ ಪುಟ್ಟ ಜಲಾಶಯದ ರೂಪ ತಾಳಿತ್ತು, ಹಾಗಾಗಿ ಮರಳು ತುಂಬಾ ಎತ್ತರದವರೆಗೆ ರಾಶಿಗಟ್ಟಿತ್ತು, ಇದರ ಮೇಲೆ ಹತ್ತಿ ಹೋದರೆ ಮರದ ಇನ್ನೊಂದು ತುದಿ ಬಿದ್ದಿದ್ದ ಕಡೆಯಿಂದ 10-15 ಅಡಿಗಳೆತ್ತರದ ಬಂಡೆಯ ತುದಿಯನ್ನು ತಲುಪಬಹುದಿತ್ತು. ನಾನು ಈ ದಾರಿಯಲ್ಲಿ ನಿಧಾನವಾಗಿ ಮುಂದುವರಿದೆ. ಇದರ ತುದಿಗೆ ಬಂದಾಗ ನನಗೆ ಸಮತಟ್ಟಾದ ಸ್ವಲ್ಪ ಜಾಗ ಕಾಣಿಸಿತು. ಇದೀ ಬಂಡೆಯೇ ದೊಡ್ಡ ಸ್ಲೇಟಿನಂತಿದ್ದು ಓರೆಯಾಗಿ ನಿಂತಂತೆ ಕಾಣುತ್ತಿತ್ತು, ಈ ಸಮತಟ್ಟಿನಿಂದ ಮರದತ್ತ ಸಾಗಬೇಕು... ಒಂದುಕ್ಷಣ, ತಿರುಗುವ ಮುನ್ನ ಬಲಕ್ಕೆ ನೋಡಿದೆ. ನೋಡಿದ್ದೆಂದರೆ ಸೀದಾ ಅವಳ ಕಣ್ಣೊಳಕ್ಕೆ, ಅವಳೂ ಅಷ್ಟೇ... ಭುಜವಮಟ್ಟಕ್ಕೆ, ಸರಿಯಾಗಿ ಮುಂಗಾಲುಗಳನ್ನು ಮುಂದಕ್ಕೆ ಚಾಚಿ ನೆಗೆಯುವ ಸಿದ್ಧತೆಯಲ್ಲಿ ಕುಳಿತಿದ್ದಾಳೆ. ಯಾವ ಭೀತಿಯೂ ಇಲ್ಲದೆ ನನ್ನನ್ನೇ ನೋಡುತ್ತಿದ್ದಾಳೆ. ಇಲ್ಲಿನ ಭೌಗೋಳಿಕತೆಯೇ ವಿಚಿತ್ರವಾದ ಗೊಂದಲಗಳಿಂದ ಕೂಡಿತ್ತು, ಅದ್ಯಾಕೆ ಅವಳು ಇಂಥಾ ಜಾಗವನ್ನು ಆರಿಸಿಕೊಂಡಳೋ ಗೊತ್ತಿಲ್ಲ, ನನಗೆ ತಿಳಿದಂತೆ ಅವಳು ನನ್ನ ಮೇಲಾಗಲೀ, ನಾನು ಅವಳ ಮೇಲಾಗಲೀ ಅಷ್ಟು ಸುಲಭಕ್ಕೆ ಆಕ್ರಮಣ ಮಾಡುವುದು ಸಾಧ್ಯವಿಲ್ಲ, ಆದರೆ ಅವಳ ಕಡೆಯಿಂದ ದಾಳಿಯ ಸಾಧ್ಯತೆ ಎಷ್ಟಿದೆ ಎಂದು ಖಚಿತವಾಗಿ ನಾನು ಹೇಳಲಾರೆ. ನನ್ನ ಕಡೆಯಿಂದ ಎತ್ತರದ ಚೊಪ್ಪುಗಳೊಂದು ಹದಿನೈದು ಅಡಿ ಎತ್ತರಕ್ಕೇರಿದ್ದರೆ, ಅವಳ ಕಡೆ ದಾರದ ಗೋಜಲಿನಂತಹ ಮುಳ್ಳುಪೊದೆಗಳ ಜಿಗ್ಗು ಹರಡಿಕೊಂಡಿತ್ತು, ಇವೆಲ್ಲವೂ ಸೇರಿ ಒಂದು ತ್ರಿಕೋನವನ್ನು ನಿರ್ಮಿಸಿದ್ದವು. ಈ ತ್ರಿಕೋನದ ಒಂದು ಭುಜದ ಮಧ್ಯದಲ್ಲಿ ನಾನು ನಿಂತಿದ್ದರೆ, ಇನ್ನೆರಡು ಭುಜಗಳ ಕೂಡುಬಿಂದುವಿನಲ್ಲಿ ಅವಳು ಕುಳಿತಿದ್ದಳು. ನನ್ನನ್ನೇ ನೋಡುತ್ತಿದ್ದಾಳೆ, ಹುಲಿ ನಿಜಕ್ಕೂ ನಗುತ್ತಿರುವಂತೆ ಕಾಣುತ್ತಿತ್ತು. ಅದು ಹೇಗೆಂದರೆ ಎಷ್ಟೋ ದಿನಗಳ ಗೈರುಹಾಜರಿಯ ನಂತರ ಯಜಮಾನ ಮನೆಗೆ ಹಿಂತಿರುಗಿದಾಗ ಅವನನ್ನು ನೋಡುವ ಸಾಕುನಾಯಿಯ ಮುಖಭಾವದಂತಿತ್ತು, ಇಷ್ಟೆಲ್ಲಾ ಆಗಿ ನನ್ನ ಅವಳ ನಡುವಿನ ಅಂತರದ ನಡುವೆ ನೇರಕ್ಕೆ ಹಗ್ಗ ಎಳೆದರೆ ಎಂಟು ಅಡಿಗಳಾಗುತ್ತವಷ್ಟೇ. ಆಮೇಲೆ ಅದನ್ನು ಅಳೆದು ನೋಡಿದೆವೆನ್ನಿ.

ಈಗ ನನ್ನ ತಲೆಯಲ್ಲಿ ಎರಡು ಆಲೋಚನೆಗಳು ಸುಳಿದವು. ಒಂದು; ಈಗ ನಾನೇ ಮೊದಲ ಹೆಜ್ಜೆ ಇಡಲಿ ಎಂದು ಅವಳು ನಿರೀಕ್ಷಿಸುತ್ತಿದ್ದಾಳೆ. ಎರಡು; ಈ ಹಂತದಲ್ಲಿ ನಾನು ಅವಳು ಗಾಬರಿ ಬೀಳುವಂಥ ಯಾವ ಕ್ರಿಯೆಯನ್ನೂ ಮಾಡಬಾರದು. ಹೀಗೆ ಮಾಡುವುದರಿಂದ ಅವಳು ವಿಚಲಿತಳಾಗುವುದು ಖಂಡಿತಾ. ಸದ್ಯಕ್ಕೆ ಎಡಗೈಯಲ್ಲಿ ಮೊಟ್ಟೆ ಹಿಡಿದು, ಬಂದೂಕವನ್ನು ಜನಿವಾರದಂತೆ ಹಾಕಿಕೊಂಡಿರುವ ನಾನು ಖಾಲಿಯಾಗಿ ನಿಂತಿದ್ದೆ ಬಲಗೈಯಲ್ಲಿ ಯಾವ ರೀತಿ ಅಪಾಯ ಮಾಡುತ್ತೇನೆಂದು ಆಕೆ ಯೋಚಿಸುತ್ತಿರಬಹುದು. ಸದ್ಯಕ್ಕೆ ಬೆನ್ನಿನ ಮೇಲಿಂದ ಹಾದುಬಂದ ಪಟ್ಟಿಯಲ್ಲಿ ಎದೆಯ ಮೇಲೆ ನನ್ನ ಬಂದೂಕ ಮಲಗಿದೆ. ಹುಲಿಗೆ ಅನುಮಾನ ಬರದಂತೆ ಅದನ್ನು ತೆಗೆಯುವುದು ಅಷ್ಟು ಸುಲಭವಲ್ಲವೆಂದು ನನಗೆ ಗೊತ್ತಿತ್ತು. ಆದರೆ ಈಗ ನನ್ನ ಮುಂದೆ ಇದ್ದಿದ್ದು ಅದೊಂದೇ ದಾರಿ. ಜೊತೆಗೆ ನನ್ನ ಎಡಗೈಯಲ್ಲಿ ಮೊಟ್ಟೆಗಳಿವೆ, ಅನೇಕ ಕಾರಣಗಳಿಂದ ಅವುಗಳನ್ನು ಬಿಸಾಡುವಂತೆಯೂ ಇಲ್ಲ.



ಒಂದೇ ಕೈಯಲ್ಲಿ ಹೆಚ್ಚು ಚಲನೆ ಮಾಡದೆ ಬಂದೂಕನ್ನು ಹೇಗೆ ಹೊರತೆಗೆಯಬಹುದೆಂದು ಮನಸ್ಸಿನಲ್ಲಿಯೇ ಒಂದೆರಡು ಸಾರಿ ತಾಲೀಮು ಮಾಡಿದೆ. ನಿಧಾನವಾಗಿ ಬಲಗೈಯನ್ನು ಚಲಿಸುತ್ತಾ ಬಂದೂಕದ ಮೇಲಿಟ್ಟು ಇಂಚಿಂಚಾಗಿ ಸರಿಸುತ್ತಾ ಬಂದೆ. ಹಾಗೇ ಕೆಳಕ್ಕೆ ಕೈಯನ್ನು ಸರಿಸುತ್ತಾ ಟ್ರಿಗರಿನ ಮೇಲಕ್ಕೆ ಬೆರಳುಗಳನ್ನು ತಂದೆ. ಕಣ್ಣುಗಳನ್ನು ಮಾತ್ರ ಅಲ್ಲಿಂದ ಕದಲಿಸಲಿಲ್ಲ, ಅದೂ ಅಷ್ಟೇ ತದೇಕಚಿತ್ತದಿಂದ ನನ್ನ ವಿಚಿತ್ರ ವರ್ತನೆಯನ್ನು ನೋಡುತ್ತಿತ್ತು, ನನ್ನ ಅನಿಸಿಕೆ ಪ್ರಕಾರ ಅದು ಇನ್ನೂ ನಗುತ್ತಲೇ ಇತ್ತು, ಅದು ನನ್ನನ್ನು ಅಣಕಿಸುತ್ತಿತ್ತೋ ಇಲ್ಲಾ ನನ್ನಂತೆ ಇನ್ನೇನಾದರೂ ಯೋಜಿಸುತ್ತಿತ್ತೋ ಅಥವಾ 'ಇಷ್ಟು ದಿನದಿಂದ ನನ್ನ ಬೆನ್ನು ಹತ್ತಿದ್ದೀಯ, ಇವತ್ತು ನಾನೇ ಬಂದಿದ್ದೇನೆ. ಏನು ಮಾಡುತ್ತೀಯೋ ಮಾಡು' ಎಂದು ಸವಾಲು ಹಾಕಿ ಕುಳಿತಿತ್ತೋ ಯಾರಿಗೆ ಗೊತ್ತು? ಒಂದುಕ್ಷಣ ಅದು ಮನಸ್ಸು ಬದಲಿಸುವುದಾದರೂ ಏನು ಬೇಕಾದರೂ ಸಂಭವಿಸಬಹುದಿತ್ತು, ಅಷ್ಟು ಹೊತ್ತಿಗೆ ಬಂದೂಕ ನನ್ನ ಕೈಸೇರಿತು. ಎಚ್ಚರಿಕೆಯಿಂದ ಗುರಿಕಟ್ಟಿದೆ, ಸಾವಧಾನವಾಗಿ ಟ್ರಿಗರ್ ಒತ್ತಿದೆ.

ನನ್ನ ಹಿಂದೆ ಬರುತ್ತಿದ್ದ ಇಬ್ಬರಿಗೂ ಬಂಡೆಯ ಮೇಲ್ಮೈ ಕಾರಣದಿಂದ ನನ್ನ ಮುಂಭಾಗದಲ್ಲಿ ಏನು ನಡೆದಿದೆ ಎಂದು ಅರ್ಥವಾಗಲಿಲ್ಲ, ಆದರೆ ನಾನು ಇದ್ದಕ್ಕಿದ್ದಂತೆ ನಿಂತು, ಒಂದೇ ದಿಕ್ಕಿನತ್ತ ನೋಡುತ್ತಾ, ಬಂದೂಕನ್ನು ಬಿಡಿಸಿಕೊಳ್ಳಲು ಪರದಾಡುವುದನ್ನು ನೋಡಿದಾಗ ಬಹುಶಃ ನಾನು ಹುಲಿಗೆ ಮುಖಾಮುಖಿಯಾಗಿರಬಹುದು ಎಂದು ಊಹಿಸಿ, ನಿಂತಲ್ಲೇ ಕಲ್ಲಾಗಿದ್ದಾರೆ. ನನ್ನ ನಡವಳಿಕೆಯ ಆಧಾರದ ಮೇಲೆ ಅವರೇ ಸಂದರ್ಭವನ್ನು ಕಲ್ಪಿಸುತ್ತಾ ಹೋಗಿದ್ದಾರೆ. ನಾನು ಒಂದೇ ಕೈಯಲ್ಲಿ ಬಂದೂಕನ್ನು ನಿಭಾಯಿಸುತ್ತಿದ್ದಾಗ ಮಾಧೋಸಿಂಗ್‌ಗೆ 'ಸಾಹೇಬ್ರೇ... ಆ ಮೊಟ್ಟೆಗಳನ್ನು ಅತ್ತ ಬಿಸಾಕಿ, ಎರಡೂ ಕೈಯಲ್ಲಿ ಬಂದೂಕ ಹಿಡಿದುಕೊಳ್ಳಿ' ಎಂದು ಹೇಳಬೇಕೆನಿಸಿದೆ. ಆದರೆ ಇಂಥ ಸಂದರ್ಭದಲ್ಲಿ ಇಷ್ಟು ಮಾತಿನ ಪರಿಣಾಮ ಏನಾಗಬಹುದೆಂದು ಗೊತ್ತಿದ್ದ ಅವನು ಹಲ್ಲುಕಚ್ಚಿ ಸುಮ್ಮನಾಗಿದ್ದಾನೆ. ಆದರೆ ನಾನು ಮೊಟ್ಟೆಗಳನ್ನು ಬಿಸಾಡದೆ ಎಡಗೈಯ ನೆರವಿನೊಂದಿಗೆ ಗುಂಡು ಹೊಡೆದಾಗ ಆಗುವ ಪರಿಣಾಮವನ್ನು ಮೊದಲೇ ಊಹಿಸಿದ್ದ ಮಾಧೋಸಿಂಗ್ ಗುಂಡು ಸಿಡಿಯುವ ಮೊದಲೇ ನನ್ನ ಪಕ್ಕದಲ್ಲಿದ್ದ.

ಈ ಕ್ಷಣದ ನಿಯಂತ್ರಣ ನನ್ನ ಕೈಯಲ್ಲಿರಲಿಲ್ಲ. ನಾನು ನಿಂತಿದ್ದ ಜಾಗ ತೀರಾ ಕಿರಿದಾಗಿದ್ದ ಚಚ್ಚೌಕ. ಈ ಜಾಗದಿಂದ ನಾನೇ ಜಾರಿಬೀಳಬಹುದಿತ್ತು. ಕೈಯಲ್ಲಿದ್ದ ಮೊಟ್ಟೆಗಳು ಎಗರಿ ಹೋಗಬಹುದಿತ್ತು ಅಥವಾ ಹುಲಿಯೇ ಹಿಂತೆಗೆದು ಓಡಿಹೋಗಬಹುದಿತ್ತು ಇಲ್ಲವೇ ನನ್ನ ಮೇಲೇ ಹಾರಬಹುದಿತ್ತು, ಇಂತಹ ಅನೇಕ ದುರಂತಗಳನ್ನು ಅನುಭವಿಸಿದ್ದ ನನಗೆ ಗುಂಡು ಹಾರುವವರೆಗೂ ಯಾವ ಭರವಸೆಯೂ ಇರಲಿಲ್ಲ, ಆದರೆ ಗುಂಡು ಬಡಿದ ಮುಂದಿನ ಕ್ಷಣ ಸಹ ಹುಲಿ ಹಾಗೇ ಕುಳಿತಿತ್ತು, ಗುಂಡು ಅದರ ಸ್ಥಿರತೆಗೆ ಯಾವ ಭಂಗವನ್ನೂ ತಂದಿರಲಿಲ್ಲ, ಆದರೆ ಸ್ವಲ್ಪ ಹೊತ್ತಿನಲ್ಲಿ ಅದರ ಕತ್ತು ಪಕ್ಕಕ್ಕೆ ವಾಲಿತು. ಹಿಂದೆಯೇ ಅದರ ನೆತ್ತಿಯಲ್ಲಾಗಿದ್ದ ತೂತಿನಿಂದ ರಕ್ತ ಚಿಲ್ಲನೆ ಪಿಚಕಾರಿ ಹೊಡೆದಂತೆ ಚಿಮ್ಮಿತು. ಗುಂಡು ನೆತ್ತಿಯ ಹಿಂಬದಿಯಿಂದ ಬೆನ್ನುಹುರಿಯನ್ನು ತುಂಡರಿಸಿ, ಹೃದಯದೊಳಕ್ಕೆ ತೂರಿತ್ತು.

ಬಂದೂಕು ಸಿಡಿದ ರಭಸಕ್ಕೆ ಹಿಮ್ಮುಖ ಗಿರಕಿ ಹೊಡೆದ ನನ್ನಿಂದ ಮಾಧೋಸಿಂಗ್ ತಕ್ಷಣ ಬಂದೂಕ ಕಸಿದುಕೊಂಡ. ನಾನು ಒಂದು ಸುತ್ತು ಸುತ್ತುವುದರೊಳಗೆ ಮುಂದಕ್ಕೆ ಮುಗ್ಗರಿಸಿ ಬಿದ್ದುಬಿಟ್ಟೆ. ಕೆಳಗಿದ್ದ ಮರಳರಾಶಿಯಿಂದಾಗಿ ಅಪಾಯವಾಗಲಿಲ್ಲ, ಇಲ್ಲಿಂದ ಏಳುವಾಗ ಹುಲಿಯ ಪಾದವನ್ನು ನೋಡದಿದ್ದರೂ ಸಹ ಇವಳೇ 64 ಜನರನ್ನು ತಿಂದುತೇಗಿರುವ ನರಭಕ್ಷಕಿ ಎಂಬುದು ಸ್ಪಷ್ಟವಾಗಿ ಹೋಗಿತ್ತು, ಈ 64 ಎಂಬುದು ಸರ್ಕಾರಿ ಲೆಕ್ಕ ಮಾತ್ರ. ಸುತ್ತಮುತ್ತಲ ಹಳ್ಳಿಗಳ ಜನ ಇದರ ಎರಡರಷ್ಟು ಜನರನ್ನು ತಿಂದುಹಾಕಿದೆ ಎಂದು ಹೇಳುತ್ತಿದ್ದರು. ಜನರ ಮಾತಿನಲ್ಲಿ ನನಗೆ ನಂಬಿಕೆ ಇತ್ತು, ಈ ಮೂಲಕ ಅವಳು ತನ್ನ ಬದುಕಿನ ಅಂತ್ಯಕ್ಕೆ ತಾನೇ ಹೊಣೆಯಾಗಿದ್ದಳು.

ಈ ಬಾರಿ ನನಗೆ ಪ್ರತಿಕೂಲವಾಗಿದ್ದ ಪರಿಸ್ಥಿತಿಗಳೆಲ್ಲಾ ನನಗೆ ಅನುಕೂಲಕರವಾಗಿ ಒದಗಿಬಂದ ಬಗ್ಗೆ ನನಗೇ ಆಶ್ಚರ್ಯವಾಗುತ್ತಿತ್ತು, ನನ್ನ ಒಂದು ಕೈಯಲ್ಲಿ ಮೊಟ್ಟೆಗಳು ಇದ್ದಿದ್ದರಿಂದ ಅದು ಹೆಚ್ಚು ಉಪಯೋಗಕ್ಕೆ ಬರುವಂತಿರಲಿಲ್ಲ, ಎರಡನೆಯದಾಗಿ ನಾನು ತಂದಿದ್ದ ಹಗುರವಾದ ರೈಫಲ್... ಮೂರನೆಯದಾಗಿ ನನ್ನ ಎದುರಿದ್ದ ಚುಡಿಹಿಡಿದು ಕುಳಿತಿ... ಹುಲಿ ಒಂದು ನಿರ್ದಯಿ ನರಭಕ್ಷಕಿ; ನರಮನುಷ್ಯರ ಬ... ಕಿಂಚಿತ್ತೂ ಭಯವಿಲ್ಲದವಳು. ಈ ಮೂರರ... ಯಾವುದಾದರೂ ಒಂದು ಅಂಶ ನನ್ನ ವಿರುದ್ಧವಾಗಿದ್ದರ... ಹುಲಿಯ ಜಾಗದಲ್ಲಿ ನಾನಿರುತ್ತಿದ್ದೆ.

ನಮ್ಮವರು ಕೆಳಕ್ಕಿಳಿದು ಕಾಡಿನ ದಾರಿಯಲ್ಲಿ ಹಿಂತಿರು... ಮೊದಲು ಕೋಣವನ್ನು ಬಿಚ್ಚಲು ಹೊರಟರು. ನಾನ... ಮೊಟ್ಟೆಗಳು ಸಿಕ್ಕಿದ್ದ ಜಾಗಕ್ಕೆ ಹಿಂತಿರುಗಿ, ಅವುಗಳನ... ಸ್ವಸ್ಥಾನದಲ್ಲಿಟ್ಟು, ಅದರ ನಿಜವಾದ ವಾರಸುದಾರರಿ... ಒಪ್ಪಿಸಿದೆ. ನನಗೊಬ್ಬ ಶಿಕಾರಿದಾರ ತಮ್ಮನಿದ್ದ. ಅವನಿಗ... ಇಂಥವೇ ಕೆಲವು ನಂಬಿಕೆಗಳಿವೆ. ನಾನೂ ಅವನಂತೆಯೆ... ಮೂಢನಂಬಿಕೆಗೆ ಒಳಗಾದ ಬಗ್ಗೆ ನನಗೆ ನಾಚಿಕೆ ಎನಿಸಿತು... ಕಳೆದ ಒಂದು ವರ್ಷದಿಂದ ಈ ನರಭಕ್ಷಕಿಯ ಬೆನ್ನುಹ... ಮಾಡಬಾರದ್ದನ್ನೆಲ್ಲಾ ಕಠೋರ ವ್ರತದಂತೆ ಮಾಡಿದ್ದರ... ಸಾಧ್ಯವಾಗದಿದ್ದ ಕೆಲಸ ಈ ಎರಡು ಪುಟ್ಟ ಮೊಟ್ಟೆಗಳ... ನನ್ನ ಕೈ ಸೇರಿದ ಕೆಲವೇ ಕ್ಷಣಗಳಲ್ಲಿ ಸಂಭವಿಸಿಬಿಡುವುದೇ?... ಮೊಟ್ಟೆಗಳೂ ಮನುಷ್ಯನ ಅದೃಷ್ಟವನ್ನು ಬದಲಿಸುತ್ತವೆಯೇ...


ಅನೇಕ ತಿಂಗಳುಗಳಿಂದ ನಮ್ಮ ಜೊತೆಗಿದ್ದ ಕೋಣ... ಈಗ ಸಾಕಿದ ನಾಯಿಯಂತೆ ನಮ್ಮನ್ನು ಹಿಂಬಾಲಿಸುತ್ತಿತು... ನಾವೆಲ್ಲಾ ಹುಲಿ ಬಿದ್ದಲ್ಲಿಗೆ ಬಂದೆವು. ಬಲವಾದ... ಕೊಂಬೆಗಳನ್ನು ಕತ್ತರಿಸಿ ಹುಲಿಯನ್ನು ಅದಕ್ಕೆ ಬಿಗಿದೆವು... ಆದರೆ ಹುಲಿ ತೂಕ ನಮ್ಮ ಹೊರುವ ಸಾಮರ್ಥ್ಯ... ಸವಾಲಿನಂತಿತ್ತು. ಬಾಲ್ಯದಿಂದಲೂ ಭಾರ ಹೊರುವುದರ... ಗಟ್ಟಿಗರಾದ ನಮ್ಮ ಚಿತ್ತ ಸ್ಥೈರ್ಯವನ್ನು ಕೆಣಕಿ ಮಲಗಿತು... ಹಾಗೆಂದು ಬಿಡುವಂತಿಲ್ಲ, ಹೊತ್ತು ಹೊರಟೆವು, ಮಾ... ಗೊಂದು ಸಾರಿ ಇಳಿಸಿ, ಸುಧಾರಿಸಿಕೊಳ್ಳುತ್ತಾ ಮುಂ... ನಡೆದೆವು. ನಾವು ಕಾಲಾಘರ್ ಅರಣ್ಯ ಬಂಗಲೆಗೆ ಬಂದಾ... ಇನ್ನೂ ಸೂರ್ಯ ಚುರುಕಾಗಿಯೇ ಇದ್ದ. ಸುದ್ದಿ ಕಾಡ್ಗಿಚ್ಚಿನಂ... ಗಾಳಿಯಲ್ಲಿ ಹಾರಿ ಹಿಮಾಲಯಕ್ಕೆಲ್ಲಾ ಹರಡಿ ಬಿಟ್ಟಿತು...


ಕಳೆದ 24 ಗಂಟೆಗಳಲ್ಲಿ ನೂರಾರು ಚದರ ಮೈ... ವಿಸ್ತಾರದಲ್ಲಿ ಯಾರೂ ಹುಲಿಗೆ ಸಿಕ್ಕಿ ಸತ್ತ ವರದಿಗಳಿರಲಿ... ನಾನು ನನ್ನ ಭೂಪಟವನ್ನು ತೆಗೆದು ಅದರಲ್ಲಿ ಕೊನೆಯ... ಶಿಲುಬೆಯೊಂದನ್ನು ಬರೆದೆ. ಅದು ಕಾಲಾಘರ್ ಹಳ್ಳಿಯ... ಪಕ್ಕದಲ್ಲಿತ್ತು, ಅದರ ಕೆಳಗೆ 11ನೇ ಏಪ್ರಿಲ್-193... ಎಂದು ದಪ್ಪಗೆ ನಮೂದಿಸಿದೆ.

ಚರ್ಮ ಸುಲಿಯಲು ಆರಂಭಿಸಿದೆ. ನನ್ನ ತಲೆಯಲ್ಲಿ... ಅಂದಿನ ಪಾದಮುದ್ರಿಕೆಯ ಚಿತ್ರಗಳು ಈಗ ನನ್ನ ಮುಂದಿ... ಪಾದದೊಂದಿಗೆ ನಿಖರವಾಗಿ ಹೊಂದುತ್ತಿದ್ದವು. ಪಂಜಗಳ... ಒಡೆದುಹೋಗಿದ್ದವು, ಉಗುರುಗಳು ಸವೆದುಹೋಗಿದ್ದವು... ಅದರ ಒಂದು ಕೋರೆಹಲ್ಲು ಮುರಿದುಹೋಗಿತ್ತು, ಉಳಿ... ಹಲ್ಲುಗಳು ಬುಡದವರೆಗೂ ಸವೆದುಹೋಗಿದ್ದವು. ... ಕಾರಣಗಳೇ ಅದನ್ನು ನರಭಕ್ಷಕಿಯನ್ನಾಗಿ ಮಾಡಿದ್ದವು... ಈ ಕಾರಣಗಳಿಂದಲೇ ಅದು ಪ್ರಾಣಿಗಳ ಶಿಕಾರಿ... ಅನರ್ಹವಾಗಿತ್ತು ಹಾಗೂ ಮನುಷ್ಯನಂಥ ಸುಲಭ... ಶಿಕಾರಿಯನ್ನೂ ಸ್ವತಂತ್ರವಾಗಿ ಹಿಡಿದು ಒಂದೇ ಏಟ... ಕೊಲ್ಲಲಾಗದ ದುಃಸ್ಥಿತಿ ತಲುಪಿತ್ತು. ಇದೊಂದ... ಸಂದರ್ಭದಲ್ಲಿ ಕಾಲ ಇವೆಲ್ಲಕ್ಕೂ ಕಾರಣವಾಗಿತ್ತು.

(ಮುಗಿಯಿತು)

ಇವತ್ತಲ್ಲ ನಾಳೆ ಪರಿಸರ ನಾಶದ ಪರಿಣಾಮಗಳನ್ನು ನಾವೆಲ್ಲರೂ ಎದುರಿಸಲಿದ್ದೇವೆ-ರಾಬರ್ಟ್ ಲೂಯಿ ಸ್ಟೀವನ್‌ಸನ್








ಮುನ್ನಾಭಾಯಿಗಳ ಗಾಂಧಿಗಿರಿ

ಖ್ಯಾತ ಬಾಲಿವುಡ್ ನಟ ಸಂಜಯದತ್ ಅಭಿನಯಿಸಿದ 'ಲಗೇ ರಹೊ ಮುನ್ನಾಭಾಯ್' ಸಿನಿಮಾದಲ್ಲಿ ಕೇಡಿಯೊಬ್ಬ ಗಾಂಧೀಜಿಯವರ ಅನುಯಾಯಿಯಾಗಿ 'ಹೃದಯ ಪರಿವರ್ತನೆ'ಗೊಳ್ಳುತ್ತಾನೆ. ಈ ಸಂಭಾವಿತ ಕೇಡಿ ಮುನ್ನಾಭಾಯಿ, 'ಗಾಂಧಿಗಿರಿ' ಅಥವಾ ನಮ್ಮ ಕೆಲವು ಬುದ್ಧಿಜೀವಿಗಳು ಈಗ ಜಪಿಸುತ್ತಿರುವ 'ಪ್ರಜಾಸತ್ತಾತ್ಮಕ ಹಾಗೂ ಅಹಿಂಸಾತ್ಮಕ ಪ್ರತಿಭಟನೆ'ಯ ಸಾತ್ವಿಕ ಮಾರ್ಗದಲ್ಲಿ ಸಮಾಜದ ಎಲ್ಲ ಅನ್ಯಾಯಗಳಿಗೂ ಪರಿಹಾರ ಕಂಡುಕೊಳ್ಳುತ್ತಾನೆ. ಸಿನಿಮಾದಲ್ಲಿ ಈ ಗಾಂಧಿವಾದೀ ಪ್ರತಿಭಟನೆಯ ಮುಖಾಂತರ ಕಷ್ಟಕ್ಕೊಳಗಾದವರ ಕಷ್ಟಗಳೆಲ್ಲ ನೀಗಿ-ಅಷ್ಟೇ ಯಾಕೆ ಅಪ್ಪನಿಗೆ ಅವನಿಂದ ದೂರವಾದ ಮಗ, ನಿವೃತ್ತ ನೌಕರನಿಗೆ ಅವನ ಪಿಂಚಣಿ, ಪ್ರೀತಿಸಿದ ಹೆಣ್ಣಿಗೆ ಅವಳ ಪ್ರಿಯಕರ ಕೂಡ ದೊರೆತು-ಎಲ್ಲರೂ ಸುಖವಾಗಿ ಬಾಳುತ್ತಾರೆ. 'ಲಗೇ ರಹೋ....'ದಲ್ಲಿ ಮುನ್ನಾಭಾಯಿಯ ಪಾತ್ರ ವಹಿಸಿದ್ದ ಸಂಜಯದತ್‌ಗೆ ತನ್ನ ನಿಜ ಜೀವನದಲ್ಲಿ ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಕ್ಕಾಗಿ ಈಗ ಮುಂಬಯಿಯ ವಿಶೇಷ ಟಾಡಾ ಕೋರ್ಟು ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.



ಈ ಕುರಿತ ತನ್ನ ತೀರ್ಪು ನೀಡುತ್ತ ನ್ಯಾಯಾಧೀಶರು, "ಕಾನೂನು ಪ್ರತಿಯೊಬ್ಬ ಪ್ರಜೆಗೂ ಸಮಾನವಾಗಿದೆ. ದೇಶದ ಕಾನೂನನ್ನು ಎಲ್ಲರೂ ಗೌರವಿಸಬೇಕು... ಕ್ರಿಮಿನಲ್ ಕೃತ್ಯಗಳಿಗೆ ಜಾತಿಮತ ಭೇದವಿಲ್ಲ..." ಎಂದು ಮುಂತಾಗಿ ಹೇಳಿ ಸಂಜಯದತ್‌ಗೆ ಕೊಟ್ಟಿರುವ ಶಿಕ್ಷೆಯನ್ನು ಸಮರ್ಥಿಸಿಕೊಂಡಿದ್ದಾರೆ. ನಮ್ಮ ಪತ್ರಿಕೆ ಹಾಗೂ ಟಿ.ವಿ. ಚಾನೆಲ್ಲುಗಳು ಸದ್ರಿ ನ್ಯಾಯಾಧೀಶರ ಉದಾತ್ತ ನುಡಿಗಳನ್ನು ಆವೇಶಗಳಲ್ಲಿ ವರದಿ ಮಾಡಿದ್ದೇ ಅಲ್ಲದೆ, ಈ ತೀರ್ಪು "ನ್ಯಾಯದ ಎದುರು ಎಲ್ಲರೂ ಸಮಾನರು ಎಂಬ ತತ್ವಕ್ಕೆ ಸಂದ ಗೆಲುವು" ಎಂದು ಪ್ರಶಂಸೆ ಮಾಡಿವೆ. ಕಾನೂನು ನಿಷ್ಪಕ್ಷಪಾತಿಯಾಗಿರಬೇಕು; ಮತ್ತು ಹಾಗೆಂದು ತೋರಿಸಿಕೊಳ್ಳಲೂಬೇಕು ಎಂಬ ಮಾತಿದೆ. ಸಂಜಯದತ್‌ಗೆ ಮುಂಬಯಿ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಈ ಮಾತಿಗೆ ತಕ್ಕ ಹಾಗೆ ಇದೆ. ಆದರೆ ನಿಜಕ್ಕೂ ಈ ದೇಶದಲ್ಲಿ ಕಾನೂನು ನಿಷ್ಪಕ್ಷಪಾತಿಯಾಗಿದೆಯೇ? ಅಥವಾ ಸಂಜಯದತ್‌ಗೆ ವಿಧಿಸಲಾಗಿರುವ ಶಿಕ್ಷೆ 'ಲಗೇ ರಹೋ ಮುನ್ನಾಭಾಯಿ'ಯ ಒಂದು ದೃಶ್ಯದಂತೆ ಕಾಣಿಸುತ್ತಿದೆಯೇ?

273 ಜೀವಗಳನ್ನು ಬಲಿ ತೆಗೆದುಕೊಂಡ 1993ರ ಮುಂಬಯಿ ಸರಣಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದ ಮೊಕದ್ದಮೆಯ ತೀರ್ಪುಗಳಲ್ಲಿ ಸಂಜಯದತ್ ಕುರಿತು ಹೊರಬಿದ್ದಿರುವ ಈ ತೀರ್ಪು ಕೊನೆಯದ್ದು. ಈ ಸ್ಫೋಟದ ಹಿಂದೆ ಇರುವ ಆಸಾಮಿಗಳನ್ನು ಪತ್ತೆಹಚ್ಚುವಲ್ಲಿ ಮುಂಬಯಿ ಪೊಲೀಸರು ವಿಶೇಷ ಮುತುವರ್ಜಿ ವಹಿಸಿದರು. ಟಾಡಾ ಕಾನೂನಿನ ಅಡಿಯಲ್ಲಿ ಆರೋಪಿಗಳನ್ನು ಬಂಧಿಸಿ, ಅವರ ವಿಚಾರಣೆಗೆಂದೇ ವಿಶೇಷ ನ್ಯಾಯಾಲಯವೊಂದನ್ನು ಸಹ ಸ್ಥಾಪಿಸಲಾಯಿತು. ಈಗ ಈ ಆರೋಪಿಗಳಲ್ಲಿ ಸುಮಾರು ನೂರು ಜನರು ಅಪರಾಧಿಗಳು ಎಂದು ಸಾಬೀತಾಗಿ ಅವರಿಗೆ ಶಿಕ್ಷೆ ವಿಧಿಸಲಾಗಿದೆ; 12 ಜನರಿಗೆ ಮರಣದಂಡನೆಯ ಶಿಕ್ಷೆ ನೀಡಲಾಗಿದೆ. 93 ರ ಸರಣಿ ಬಾಂಬ್ ಸ್ಫೋಟಕ್ಕೆ ಕೆಲವೇ ತಿಂಗಳ ಮೊದಲು, ಅಂದರೆ 1992 ಡಿಸೆಂಬರ್ ಮತ್ತು 1993 ಜನವರಿ ತಿಂಗಳುಗಳಲ್ಲಿ ಮುಂಬಯಿ ನಗರದಲ್ಲಿ ನಡೆದ 'ಗಲಭೆ'ಗಳಲ್ಲಿ ಸುಮಾರು 1000 ಜನ ಸಾವಿಗೀಡಾದರು. ಈ ದುರ್ಘಟನೆ "ಮುಂಬಯಿ ಗಲಭೆಗಳು" ಎಂದೇ ಜನಜನಿತವಾಗಿದ್ದೂ, ವಾಸ್ತವವಾಗಿ ಅದು ನಗರದ ಮುಸ್ಲಿಮರ ಮೇಲೆ ಹಿಂದೂತ್ವವಾದಿಗಳು ಬಜೆಪಿ/ಶಿವಸೇನೆಗಳ ನಾಯಕತ್ವದಲ್ಲಿ ನಡೆಸಿದ ದಾಳಿ. ಇದರಲ್ಲಿ ಮಹಾರಾಷ್ಟ್ರದ ಆಗಿನ ಕಾಂಗ್ರೆಸ್ ಸರ್ಕಾರ ಮತ್ತು ಪೊಲೀಸ್ ಇಲಾಖೆಗಳು ಕೂಡಾ ಶಾಮೀಲಾಗಿದ್ದವು. ಈ 'ಗಲಭೆ'ಗಳ ನ್ಯಾಯಾಂಗ ವಿಚಾರಣೆಗೆ ನೇಮಕಗೊಂಡ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗ, ತನ್ನ ಸುದೀರ್ಘ ವರದಿಯಲ್ಲಿ ಗಲಭೆಗಳ ಸೂತ್ರಧಾರರಾಗಿದ್ದ ಬಜೆಪಿ/ಶಿವಸೇನೆಯ ನಾಯಕರನ್ನೂ, ಹಿಂಸಾಕೃತ್ಯಗಳಲ್ಲಿ ಸ್ವಯಂಭಾಗಿಗಳಾಗಿದ್ದ ಹಲವು ಪೊಲೀಸರನ್ನೂ, ಉದ್ದೇಶಪೂರ್ವಕವಾಗಿ ಗೋಲಿಬಾರು ನಡೆಸಿ ನಿರಪರಾಧಿ ಮುಸ್ಲಿಮರ ಪ್ರಾಣ ತೆಗೆದ ಪೊಲೀಸ್ ಅಧಿಕಾರಿಗಳನ್ನೂ, ಸಾಕ್ಷ್ಯಾಧಾರ ಸಮೇತ ಹೆಸರಿಸಿದೆ. ಹೀಗೆ ಹೆಸರಿಸಿದವರಲ್ಲಿ ಯಾರಿಗೂ ಇದುವರೆಗೆ ಶಿಕ್ಷೆ ಆಗಿಲ್ಲ. ಶಿಕ್ಷೆ ಹೋಗಲಿ, ಇವರ ವಿರುದ್ಧ ಕೇಸು ನಡೆಸಲು ಮಹಾರಾಷ್ಟ್ರದ ಕಾಂಗ್ರೆಸ್ ನಾಯಕತ್ವದ ರಾಜ್ಯ ಸರ್ಕಾರಕ್ಕೇ ಆಸಕ್ತಿ ಇಲ್ಲ. ಈ ಕೇಸುಗಳ ಸೂಕ್ತ ನಿರ್ವಹಣೆಯ ಕುರಿತು ರಾಜ್ಯ ಸರ್ಕಾರಕ್ಕೆ ಆದೇಶ ನೀಡಲು ಸುಪ್ರೀಮ್‌ಕೋರ್ಟು ಸಹಿತ ಉತ್ಸಾಹ ತೋರುತ್ತಿಲ್ಲ.


ಸುಮಾರು 3000 ಜನರ ಸಾವಿಗೆ ಕಾರಣವಾದ 2002 ರ ಗುಜರಾತ್ ನರಮೇಧದ ಕಾರಣಕರ್ತರಿಗೆ ಸೂಕ್ತ ಶಿಕ್ಷೆ ವಿಧಿಸುವುದರಲ್ಲಿಯೂ ನಮ್ಮ ನ್ಯಾಯವ್ಯವಸ್ಥೆ ಸಂಪೂರ್ಣವಾಗಿ ವಿಫಲಗೊಂಡಿದೆ. ನಮ್ಮ ನ್ಯಾಯಾಲಯಗಳಿಗೆ ನ್ಯಾಯದ ಕಾಳಜಿ ಇಲ್ಲ; ನಮ್ಮ ಸರ್ಕಾರಕ್ಕೆ ಹಿಂದೂತ್ವವಾದಿಗಳನ್ನು ಎದುರು ಹಾಕಿಕೊಳ್ಳುವ ಇಚ್ಛಾ ಶಕ್ತಿ ಇಲ್ಲ. ಈ ಹಿನ್ನೆಲೆಯಲ್ಲಿ ಸಂಜಯದತ್‌ಗೆ ಶಿಕ್ಷೆ ವಿಧಿಸುತ್ತ "ಕಾನೂನು ಪ್ರತಿಯೊಬ್ಬ ಪ್ರಜೆಗೂ ಸಮಾನವಾಗಿದೆ" ಎಂದು ಹೇಳಿದ ಮುಂಬಯಿ ಟಾಡಾ ಕೋರ್ಟಿನ ನ್ಯಾಯಾಧೀಶರ ಮಾತು 'ಲಗೆ ರಹೋ ಮುನ್ನಾಭಾಯಿ'ಯ ಡೈಲಾಗ್‌ನಂತೆ ಕೇಳಿಸುತ್ತಿದೆ.

'ಕಾನೂನು ಪ್ರತಿಯೊಬ್ಬ ಪ್ರಜೆಗೂ ಸಮಾನವಾಗಿದೆ'- ಭಾರತದ ಸಂವಿಧಾನದ ಪ್ರಕಾರ. ಆದರೆ, ವಾಸ್ತವದಲ್ಲಿ ಈಗ ದೇಶದ ಮುಸ್ಲಿಮರು, ಆದಿವಾಸಿಗಳು, ಹಳ್ಳಿಗಳ ಬಡರೈತರು, ನಗರಗಳ ಕೊಳಗೇರಿ ನಿವಾಸಿಗಳು ಮುಂತಾದ ಜನರನ್ನು 'ಪ್ರಜೆ'ಗಳೆಂದು ಗುರುತಿಸಲು ನಮ್ಮ ಆಡಳಿತ ವ್ಯವಸ್ಥೆ ಮಾತ್ರವಲ್ಲ ನಮ್ಮ ನ್ಯಾಯಾಲಯ ಹಾಗೂ ಮಾಧ್ಯಮಗಳು ಕೂಡ ನಿರಾಕರಿಸುತ್ತಿವೆ. ಮುಸ್ಲಿಮರನ್ನಂತೂ, ಅವರು ನಿರಪರಾಧಿಗಳು ಎಂದು ಸಾಬೀತಾಗುವವರೆಗೂ ಅಪರಾಧಿಗಳೇ ಎಂಬಂತೆ ಚಿತ್ರಿಸುವುದು, ಈಗ ನಮ್ಮ ಪ್ರಮುಖ ಪತ್ರಿಕೆ ಮತ್ತು ಟಿ.ವಿ. ಚಾನೆಲ್ಲುಗಳಲ್ಲೂ ತೀರಾ ಸಾಮಾನ್ಯವಾದ ಸಂಗತಿಯಾಗಿ ಬಿಟ್ಟಿದೆ. ಆಸ್ಟ್ರೇಲಿಯಾದಲ್ಲಿ ಬೆಂಗಳೂರಿನ ತರುಣ ವೈದ್ಯ ಮೊಹಮ್ಮದ್ ಹನೀಫರನ್ನು ಬಂಧಿಸಿದ ಪ್ರಕರಣವನ್ನು ನಮ್ಮ ಮಾಧ್ಯಮಗಳು ವರದಿ ಮಾಡಿದ ರೀತಿಯಲ್ಲಿ ಈ ಪೂರ್ವಗ್ರಹ ಎದ್ದು ಕಾಣುತ್ತಿತ್ತು. ಆರೋಪಿ ಮುಸ್ಲಿಮನಾದರೆ ಆತನ ಜೊತೆ ಇಸ್ಲಾಂ ಧರ್ಮವನ್ನು ಕಟಕಟೆಯಲ್ಲಿ ನಿಲ್ಲಿಸಲಾಗುತ್ತದೆ. ಆದರೆ ಧರ್ಮದ ಈ ಬ್ಯಾಗೇಜು ಎಲ್‌ಟಿಟಿಇ ಅಥವಾ ಉಲ್ಫಾದ ಬಹುತೇಕ ಉಗ್ರಗಾಮಿಗಳಿಗೆ ಯಾಕೆ ಇಲ್ಲ? 1992 ರ ಮುಂಬಯಿ 'ಗಲಭೆ' ಮತ್ತು 2002 ರ ಗುಜರಾತ್ ನರಮೇಧಗಳಿಗೆ ಕಾರಣರಾದವರ ಧರ್ಮ ಯಾವುದು ಎಂದು ಯಾಕೆ ಯಾರೂ ಕೇಳುವುದಿಲ್ಲ? ಮೊಹಮ್ಮದ್ ಹನೀಫರ ಪ್ರಕರಣದಲ್ಲೇ ಆಸ್ಟ್ರೇಲಿಯಾ ಸರ್ಕಾರ, ಅವರ ಬಗ್ಗೆ ಕೆಟ್ಟದಾಗಿ ನಡೆದುಕೊಂಡರೂ, ಆಸ್ಟ್ರೇಲಿಯಾದ ಪ್ರಧಾನಧಾರೆಯ ಮಾಧ್ಯಮಗಳು ಹನೀಫರ ವಿರುದ್ಧ ಅಲ್ಲಿನ ಪೊಲೀಸರು ಮಂಡಿಸಿದ ಸಾಕ್ಷ್ಯಾಧಾರಗಳ ಪೊಳ್ಳುತನವನ್ನು ಬಯಲು ಮಾಡಿದವು. ಹನೀಫರ ಪರವಾಗಿ ವಾದಿಸಲು ದಕ್ಷ ವಕೀಲರೊಬ್ಬರು ಮುಂದಾದರು. ಆ ದೇಶದ ಮಾನವಹಕ್ಕುಗಳ ಸಂಘಟನೆಯವರು ಸರ್ಕಾರದ ವಿರುದ್ಧ ನಿರಂತರ ಪ್ರತಿಭಟನೆ ನಡೆಸಿದರು. ಹನೀಫರ ಪರವಾಗಿ ಆಸ್ಟ್ರೇಲಿಯಾದ ನ್ಯಾಯಾಲಯದಲ್ಲಿ ವಾದಿಸಿದ ಪೀಟರ್ ರುಸ್ಸೋನಂತಹ ವಕೀಲರು, ಸುದೈವದಿಂದ ಭಾರತದಲ್ಲೂ ಇದ್ದಾರೆ; ಮಾನವಹಕ್ಕುಗಳ ಕಾರ್ಯಕರ್ತರೂ ಇದ್ದಾರೆ. ಆದರೆ ನಮ್ಮ 'ಪ್ರಧಾನಧಾರೆ'ಯ ಮಾಧ್ಯಮಗಳು ಮಾತ್ರ ಇವರನ್ನೆಲ್ಲ 'ದೇಶದ್ರೋಹಿ'ಗಳೆಂಬತೆಯೇ ಚಿತ್ರಿಸುತ್ತವೆ! ಮುಸ್ಲಿಮರನ್ನೂ ಇಸ್ಲಾಂ ಧರ್ಮವನ್ನೂ ಭಯೋತ್ಪಾದನೆ, ಹಿಂಸೆಗಳ ಜೊತೆ ಸಮೀಕರಿಸಿ ಇಸ್ಲಾಮಿಕ್ ದೇಶಗಳನ್ನು ತನ್ನ ನಿಯಂತ್ರಣದಲ್ಲಿ ಸದಾ ಇರಿಸಿಕೊಳ್ಳಬಯಸುವ ಅಮೆರಿಕದ ಸಾಮ್ರಾಜ್ಯಶಾಹಿಯ ತರ್ಕವನ್ನೇ ನಮ್ಮ ಮಾಧ್ಯಮಗಳು ಈಗ ಇಡಿಯಾಗಿ ಒಪ್ಪಿಕೊಂಡು ಬಿಟ್ಟಿವೆ. ಮಹಾನ್ ದೇಶಪ್ರೇಮಿ 'ಹಿಂದೂತ್ವವಾದಿ'ಗಳ ಹಾಗೆಯೇ ಮಾಧ್ಯಮಗಳ 'ದೇಶಪ್ರೇಮಿ'ಗಳು ಕೂಡ ಈಗ ವಾಸ್ತವದಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿಯ ಗುಲಾಮರು! ಈ ಮಾಧ್ಯಮಗಳ ಬಹುತೇಕ ವರದಿಗಳ ಮೂಲವೂ ಅಮೆರಿಕದ ಸುದ್ದಿ ಸಂಸ್ಥೆಗಳೇ ಆಗಿರುವುದು ಕೂಡ ಆಕಸ್ಮಿಕವಲ್ಲ.

ಹಿಂಸೆ ಮತ್ತು ಭಯೋತ್ಪಾದನೆ ಕುರಿತು ನಾವು ಕೇಳಲೇಬೇಕಾದ ಪ್ರಶ್ನೆಯೊಂದಿದೆ. ಇವುಗಳ ಚರಿತ್ರೆ ಎಂದಿನಿಂದ ಪ್ರಾರಂಭವಾಗುತ್ತದೆ? ಅದು ಜೆಹಾದ್‌ನ ಪರಿಕಲ್ಪನೆಯೊಂದಿಗೋ ಅಥವಾ ಹಿಂಸೆಯನ್ನು ಸಮರ್ಥಿಸುವ ಕುರಾನ್‌ನ ಕೆಲವು ಸೂಕ್ತಗಳಿಂದ ಪ್ರಾರಂಭವಾಗುತ್ತದೆಯೊ? ಆದರೆ ಅಂತಹ ಪರಿಕಲ್ಪನೆ ಮತ್ತು ಸೂಕ್ತಗಳು ಇತರ ಧರ್ಮಗಳ ಪವಿತ್ರ ಗ್ರಂಥಗಳಲ್ಲೂ ಇವೆ. ಭಗವದ್ಗೀತೆಯಲ್ಲಿ ಅರ್ಜುನನನ್ನು ಯುದ್ಧಕ್ಕೆ ಹುರಿದುಂಬಿಸುವ ಕೃಷ್ಣನ ಮಾತುಗಳಿಗೂ, ಕುರಾನ್‌ನ ಜೆಹಾದ್‌ನ ಪರಿಕಲ್ಪನೆಗೂ ಹೆಚ್ಚು ವ್ಯತ್ಯಾಸವಿಲ್ಲ. ಯುರೋಪ್‌ನ ಮಧ್ಯಯುಗದ ಕ್ರಿಶ್ಚಿಯನ್ "ಧರ್ಮಯುದ್ಧಗಳು" ಜೆಹಾದ್‌ನ ಇನ್ನೊಂದು ರೂಪವಲ್ಲವೆ? ಜಗತ್ತಿನಲ್ಲಿ ರಕ್ತಪಾತ ನಡೆಸದ ಧರ್ಮ ಯಾವುದಿದೆ? ಜೆಹಾದ್ ಆಗಲಿ, ಇಸ್ಲಾಮಿಕ್ ಭಯೋತ್ಪಾದನೆಯಾಗಲಿ ಚರಿತ್ರೆಯ ಹೊರಗಿರುವ ಸ್ವಯಂಪೂರ್ಣ ಸತ್ಯಗಳಲ್ಲ. ವರ್ತಮಾನ ಜಗತ್ತನ್ನೂ, ನಮ್ಮ ಯೋಚನಾ ವಿಧಾನಗಳನ್ನೂ ಪ್ರಭಾವಿಸಿರುವ ಕಳೆದ 200 ವರ್ಷಗಳ ಚಾರಿತ್ರಿಕ ದುರಂತಗಳಲ್ಲಿ ಯಾವುದಕ್ಕೂ ಇಸ್ಲಾಂ ಧರ್ಮವಾಗಲೀ ಜಗತ್ತಿನ ಮುಸ್ಲಿಮರಾಗಲೀ ಹೊಣೆಗಾರರೂ ಅಲ್ಲ; ಉತ್ತರದಾಯಿಗಳೂ ಅಲ್ಲ. ವಾಸ್ತವವಾಗಿ ಏಷ್ಯಾ, ಆಫ್ರಿಕಾ ಮತ್ತು ಅಮೆರಿಕ ಖಂಡಗಳ ಬಹುತೇಕ ದೇಶಗಳಂತೆ ಮಧ್ಯಪ್ರಾಚ್ಯದ ಇಸ್ಲಾಮಿಕ್ ದೇಶಗಳು ಕೂಡ ಈ ವಿದ್ಯಮಾನಗಳ ಬಲಿಪಶುಗಳು. ಉದಾಹರಣೆಗೆ 19ನೆಯ ಶತಮಾನದ ಯುರೋಪ್‌ನ ವಸಾಹತುಶಾಹಿ ಆಳ್ವಿಕೆ ಮಧ್ಯಪ್ರಾಚ್ಯದ ಇಸ್ಲಾಮಿಕ್ ದೇಶಗಳನ್ನೂ ಒಳಗೊಂಡಿತ್ತು. ಮಧ್ಯಪ್ರಾಚ್ಯದಲ್ಲಿ ಪೆಟ್ರೋಲ್ ನಿಕ್ಷೇಪಗಳು ಪತ್ತೆಯಾದ ನಂತರ ಆ ಇಡೀ ಪ್ರದೇಶ ಅಮೆರಿಕದ ಸಾಮ್ರಾಜ್ಯಶಾಹಿಯ ಅಧೀನಕ್ಕೆ ಸೇರಿತು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ಜೊತೆ ಆಧುನಿಕ ಜಗತ್ತಿನ ಇತರ ಮಹತ್ವದ ಬೆಳವಣಿಗೆಗಳಾದ ಎರಡು ಮಹಾಯುದ್ಧಗಳಿಗೂ ಇಸ್ಲಾಂ ಕಾರಣವಲ್ಲ, ಫ್ಯಾಸಿಸಂ ಇಸ್ಲಾಂನ ಕೊಡುಗೆ ಅಲ್ಲ. 20ನೆಯ ಶತಮಾನದ ಮಹಾನ್ ನರಮೇಧವೆನ್ನಿಸಿಕೊಂಡ 60







ಲಕ್ಷ ಯಹೂದಿಗಳ ಸಾಮೂಹಿಕ ಹತ್ಯೆಗೆ ಇಸ್ಲಾಂ ಕಾರಣವಲ್ಲ. ಹಿರೋಷಿಮಾ, ನಾಗಾಸಾಕಿಗಳಲ್ಲಿ ಅಣುಬಾಂಬ್ ಸ್ಫೋಟ ನಡೆಸಿ 150000 ಮನುಷ್ಯ ಜೀವಗಳನ್ನು ಸಾಯಿಸಿದ್ದು ಇಸ್ಲಾಂ ಅಲ್ಲ. 17 ಲಕ್ಷ ಜನರ ಸಾವಿಗೆ ಕಾರಣವಾದ ವಿಯೆಟ್ನಾಂ ಯುದ್ಧಕ್ಕೂ ಇಸ್ಲಾಂ ಕಾರಣವಲ್ಲ. ಪಶ್ಚಿಮ ಯುರೋಪ್ ಮತ್ತು ಅಮೆರಿಕದ ಸಾಮ್ರಾಜ್ಯಶಾಹಿ, ತಮ್ಮ ಸ್ವಾರ್ಥಕ್ಕಾಗಿ ನಡೆಸಿರುವ ಆಕ್ರಮಣಗಳನ್ನೂ, ಹಿಂಸೆಯನ್ನೂ ಮುಚ್ಚಿಹಾಕಲು ಇಸ್ಲಾಮಿಕ್ ಭಯೋತ್ಪಾದನೆಯ ಪೆಡಂಭೂತವನ್ನು ಸೃಷ್ಟಿಸಿದೆ. ಆದರೆ ವಾಸ್ತವದಲ್ಲಿ ಇರುವ ಇಸ್ಲಾಮಿಕ್ ಭಯೋತ್ಪಾದನೆ ಕೂಡ ಸಾಮ್ರಾಜ್ಯಶಾಹಿಯದ್ದೇ ಬಳುವಳಿ! 19ನೆಯ ಶತಮಾನದಿಂದ ಈಚೆಗೆ ಮೊದಲು ಯುರೋಪ್‌ನ ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಮತ್ತಿತರ ದೇಶಗಳು ಹಾಗೂ 20 ನೆಯ ಶತಮಾನದಲ್ಲಿ ಅಮೆರಿಕ ಯಾವ ಇಸ್ಲಾಮಿಕ್ ದೇಶದಲ್ಲೂ ಪ್ರಜಾಸತ್ತಾತ್ಮಕ ಸರಕಾರವನ್ನು ಇರಗೊಟ್ಟಿಲ್ಲ. ಈ ದೇಶಗಳನ್ನು ಆಳುತ್ತಿರುವ ಅಮೆರಿಕನ್ ಕೈಗೊಂಬೆ ಸರ್ಕಾರಗಳು ಪ್ರಜೆಗಳ ಎಲ್ಲ ಸ್ವಾತಂತ್ರ್ಯಗಳನ್ನೂ ಕ್ರೂರವಾಗಿ ದಮನಿಸುತ್ತಿವೆ. ಇಸ್ಲಾಮಿಕ್ ಹಿಂಸೆ ತನ್ನಷ್ಟಕ್ಕೆ ತಾನೆ ಹುಟ್ಟಿಕೊಂಡಿದ್ದಲ್ಲ. ಪ್ರಜೆಗಳಿಗೆ ಪ್ರಜಾಸತ್ತಾತ್ಮಕ ಪ್ರತಿರೋಧದ ದಾರಿಗಳೇ ಮುಚ್ಚಿಹೋದ ಸ್ಥಿತಿಯಲ್ಲಿ ಹಿಂಸೆ ತಲೆದೋರಿದೆ. ಭಾರತವೂ ಇಂತಹ ಒಂದು ಸ್ಥಿತಿಯನ್ನು ಮೈಮೇಲೆ ತಂದುಕೊಳ್ಳುತ್ತಿದೆ. ಇಲ್ಲಿನ ಸೆಕ್ಯುಲರ್ ಪ್ರಜಾಪ್ರಭುತ್ವ ಎಷ್ಟು ಸೆಕ್ಯುಲರ್? ಎಷ್ಟು ಪ್ರಜಾಸತ್ತಾತ್ಮಕ? ನಮ್ಮ ಮುನ್ನಾಭಾಯಿಗಳು ಈ ಬಗ್ಗೆ ಯೋಚಿಸಬೇಕು. ಪ್ರಜಾಸತ್ತಾತ್ಮಕ ಪ್ರತಿಭಟನೆ ಎಂದರೆ ಗಾಂಧೀಜಿ ಪ್ರತಿಮೆ ಎದುರು ಧರಣಿ ಕೂರುವುದು ಮಾತ್ರವಲ್ಲ.

■ ಜಿ. ರಾಜಶೇಖರ್

ಮನುಷ್ಯನ ಅಗತ್ಯಕ್ಕೆ ಸಾಕಷ್ಟು ಸಂಪತ್ತನ್ನು ಭೂಮಿಯು ನೀಡಿದೆ. ಆದರೆ ಆತನ ದುರಾಸೆಯನ್ನು ನೀಗಿಸುವಷ್ಟಲ್ಲ -ಮಹಾತ್ಮ ಗಾಂಧಿ

ಎಡೂರಪ್ಪ ಮುಖ್ಯಮಂತ್ರಿಯಾದ್ರೆ ಸ್ವಾಮಿಗಳಿಗೆ ದುಡ್ಡು ಕೊಡ್ತನಂತೆ

ಎಡೂರಪ್ಪನಿಗೆ ಅಧಿಕಾರ ಹಸ್ತಾಂತರವಾಗುವ ಬಗ್ಗೆ ಸುಮಾರು ಚರ್ಚೆಯಾದ ನಂತರ ಕಾಳಮಾವ.

"ಅಂಗಾರೆ ಎಡೂರಪ್ಪ ಮುಖ್ಯಮಂತ್ರಿಯಾಗದು ಕಷ್ಟ ಅಂತಿಯಾ?" ಎಂದ.

"ಒಂದು ಕಡಿಂದ ನೋಡಿದ್ರೆ ಆಗಂಗೇ ಕಾಣ್ತನೆ. ದ್ಯಾವೇಗೌಡನ ಮನೆ ದಿಕ್ಕಿನಿಂದ ನೋಡಿದ್ರೆ ಅನುಮಾನಾಯ್ತದಪ್ಪ ಏನೂ ಅಂತ ಹೇಳನ?" ಎಂದ ಉಗ್ರಿ.

"ಇನ್ನು ಎಟು ದಿನದೆ?"

"ಮೂರು ತಿಂಗಳು ಮ್ಯಾಲದೆ."

"ಅಂಗಾರೀಗಲೆ ಯಾಕೆ ಕೂಗ್ಯಾಡ್ತವ್ರೂ? ಸುಮ್ಮನಿದ್ದು ಟೇಂ ಬಂದಾಗ ಮಾತಾಡಿದರಾಗ್ದೆ?"

"ಟೇಂ ಬಂದಾಗ ಮಾತಾಡಕ್ಕೆ ವ್ಯವಾರ ಮಾಡಿರದು

ಕಟ್ಟೆಪುರಾಣ

ಬಿ. ಚಂದ್ರೇಗೌಡ

ದ್ಯಾವೇಗೌಡುನ್ತ ಕಣಮಾವ, ಅವುನು ಮಾತಿಗೆ ತೆಪ್ಪದ ಮನ್ಸ ಆಗಿದ್ರೆ ನೀನೇಳಂಗೇ ಇರಬವುದಿತ್ತು."

"ನೀನೇಳದು ಏಜ್ಯಾಟ್ಲ ಕರಟ್ ಕಣೊ ಉಗ್ರಿ, ಅಂತ ರಾಮಕೃಷ್ಣ ಯಗಡೆನೆ ಪಾರ್ಟಿಯಿಂದ ತಗದಾಕಿ ಜಯಿಸಿಗಂಡಿರೊ ದ್ಯಾವೇಗೌಡನಿಗೆ ಯಡೂರಪ್ಪ ಯಾವ ಲೆಕ್ಕ" ಎಂದ ವಾಟಿಸ್ಸೆ.

"ಎಡೂರಪ್ಪನಿಗಿಂತ ಅಟ್ಟಹತ್ತಕ್ಕೆ ಏಣಿತರ ಬಳಿಸಿಗಂಡ ಸಿದ್ಧರಾಮಯ್ಯನ್ನೇ ವದ್ದನಪ್ಪ ಅಮ್ಯಾಲೆ. ಆ ಸಿಂಧ್ಯನ ಕತೆ ಏನಾಯ್ತು, ಪ್ರಕಾಶನ್ನ ಏನು ಮಾಡಿ ಮಡಿಗ್ಯವುನೆ, ಆ ಡಿ. ಮಂಜುನಾಥ ಸತ್ತೋದನೊ ಇದ್ದನೊ ಒಂದೂ ಗೊತ್ತಾಗಲಿಲ್ಲ, ಇವುರ ಕತೆನ್ನಲ್ಲ ನೋಡಿದ್ರೆ ಎಡೂರಪ್ಪ ಏಟುದಿನ ಎಗಿರ್ಯಾಡನೂ?" ಎಂದ ಉಗ್ರಿ.

"ಅದ್ಕೆ ಕಣೊ ಉಗ್ರಿ, ಎಡೂರಪ್ಪನ ಕಡಿಯೋರು ಸ್ವಾಮಿಗಳನ್ನೆಲ್ಲ ಎತ್ತಿಕಟ್ಟಿ ಎಡೂರಪ್ಪನಿಗೆ ಅಧಿಕಾರ ಕೊಡದೇವೋದ್ರೆ ದಂಗೆ ಮಾಡತಿವಿ ಅಂತ ಎಚ್ಚರಿಕೆ ಕೊಡಿಸ್ಯವುರೆ."

"ಅಂಗರೆ ಸ್ವಾಮಿಗೋಳು ದಂಗೆ ಮಾಡ್ತರೆ?" ಎಂದ ಕಾಳಮಾವ.

"ಅಂಗಂದವುರೆ ದ್ವಡಪ್ಪ."

"ಅವುನ್ಯಾರ್ಲ ಅಂತ ಸ್ವಾಮಿ?"

"ಯಾವ್ರೊ ಯರಡಮೂರು ಸ್ವಾಮಿ ಅಂಗಂದವುರೆ. ಮಾತಿನಂಗೆ ನ್ಯಡಕಳ್ಳಿಲ್ಲ ಅಂದ್ರೆ ಮುಂದಾಗೋ ಅನಾಹುತಕ್ಕೆ ನೀವೇ ಜವಾಬ್ದಾರಿ ಅಂತ ಬ್ಯಾರೆ ಹೇಳ್ಯವುರೆ ಕಣ ಮಾವ" ಎಂದ ಉಗ್ರಿ.

"ಸ್ವಾಮಿಗಳಾಗಿದ್ದಕಂಡು ಅಂಗೆ ಮಾತನಾಡದಕಿಂತ ಬಿಜೆಪಿ ತಿಕೀಟು ತಗಂಡು ಯಮ್ಮೆಲ್ಲೆ ಆಗಕ್ಕೇನೂ?" ಎಂದ ಸೀರ.

"ಅವು ಯಲಕ್ಸನ್ಗೆ ನಿಂತ್ರೆ ಠೇವಣಿ ಉಳಿಯದಿಲ್ಲ ಚಿಗಪ್ಪ, ಅವು ಯಾಕಂಗಂದವೆ ಗೊತ್ತೇ?"

"ಯಾಕಂದವೇ?"

"ಈ ಎಡೂರಪ್ಪ ಅದ್ಯಾವುದೊ ರಾಮಚಂದ್ರಪುರದ ಮಠಕೆ ಯರಡು ಕೋಟಿ ದುಡ್ಡು ಕೊಟ್ಟು ತಿರಗ ಒಂದು ಕೋಟಿ ಕೊಟ್ಟು ಸಮಾರಂಭ ಮಾಡಿದನಂತೆ."

"ಅಲ್ಲಿಗೆ ಮೂರು ಕೋಟಿ ಕೊಟ್ಟನೇನ್ಲ?" ಎಂದಳು ಜುಮ್ಮಿ.

"ಅಧಿಕೃತವಾಗಿ ಅಷ್ಟು ಕಣಕ್ಕ, ಇನ್ನು ಎಷ್ಟು ಕೊಟ್ನನೊ ಏನೊ ಯಾರಿಗ್ಗೊತ್ತು, ಅದ ನೋಡಿದ ಉಳದ ಸ್ವಾಮಿಗಳು ಎಡೂರಪ್ಪ ಮುಖ್ಯಮಂತ್ರಿಯಾದ್ರೆ ನಮಿಗೂ ದುಡ್ಡು ಕೊಡ್ತನೆ ಅಂತ ಅವುನ ಪರವಾಗಿ ಬಿಜೆಪಿ ಕಾರ್ಯಕರ್ತರಿಗಿಂತ್ಲೂ ಒಂದ್ಯಜ್ಜೆ ಮುಂದಕೆ ಹೋಗಿ ತೋಳು ಬಲ ತೋರತ ಅವುರೆ" ಎಂದ ವಾಟಿಸ್ಸೆ.



"ಯತ್ತ ಮುಂದಾಗಿ ನೋಡಿದ್ರು ಎಡೂರಪ್ಪನಿಗೆ ಅಧಿಕಾರ ಬುಟ್ಟುಕೊಡದು ಸರಿ ಕಂಡ್ಯ" ಎಂದ ಕಾಳಮಾವ.

"ತಗಳಪ್ಪ ನಾವು ಸ್ವಾಮಿ ಸುದ್ದಿ ಮಾತಾಡ್ತಯಿದ್ರೆ ನಮ್ಮ ಕಾಳ ದ್ವಡಪ್ಪ ಸ್ವಾಮಿಗಿಂತ್ಲೂ ಚನ್ನಾಗಿ ಹೇಳತಾ ಅವುನೆ" ಎಂದ ವಾಟಿಸ್ಸೆ.

"ಅಲ್ಲ ಕಂಡ್ಯ, ಮಾತುಕೊಟ್ಟ ಮ್ಯಾಲೆ ತೆಪ್ಪುಬಾರ... ತೆಪ್ಪದೇ ಆದ್ರೆ ಮದ್ಲೆ ಯೇಚನೆ ಮಾಡಬೇಕಾಗಿತ್ತು" ಎಂ... ಕಾಳಮಾವ.

"ಕುಮಾರಸ್ವಾಮಿಯೇನೊ ಅಧಿಕಾರ ಬುಟ್ಟುಕೊಡ... ತಯಾರಂತೆ, ಆದ್ರೆ ಬಿಜೆಪಿಲೆ ಎಡೂರಪ್ಪನ್ನ ಕಂಡ್ರಾಗದೊ... ರಿದ್ದರಂತೆ. ಅವುರನ್ನೆಲ್ಲ ಒಪ್ಪಿಸಿಗಳಿ ಅಂತ ಕುಂತವು... ಇದಕೇನೇಳ್ತೆ?"

"ಅಲ್ಲಾ ಕಣೊ ಉಗ್ರಿ, ಕುಮಾರಸ್ವಾ... ಮುಖ್ಯಮಂತ್ರಿಯಾಗುವಾಗ ಜೆಡಿಎಸ್‌ನ... ಎಷ್ಟು ಜನ ವಿರೋಧಿಸಿದ್ರು? ಅದ... ಆದನಪ್ಪ ಅಂಗೆ ಬಿಜೆಪಿಲೂ ಇರಬವುದ... ಅದವುರ ಮನೆ ಕತೆ. ಅದ ಕಟಗಂಡ... ಇವುರಿಗೇನೂ ಅಂತ?"

"ಇದಕ್ಕೆಲ್ಲ ಕಾರಣ ದ್ಯಾವೇಗೌಡ... ದುರಾಸೆ ಕಣೊ. ಅವುನು ಇನ್ನು ಯಾ... ಪಾತಾಳ ಮುಟ್ಟತನೊ ಏನೊ?"

"ಬಿಜೆಪಿಗಳಿಗೋಲಿಸಿದ್ರೆ ದ್ಯಾವೇಗೌಡ... ಮಾನ ಇನ್ನು ಒಂಚೂರದೆ ಕಣೊ ಉಗ್ರಿ..."

"ಯಂಗಪ್ಪ?"

"ಯಂಗೇ ಅಂದ್ರೆ, ಈ ಬಿಜೆಪಿಗಳ... ಜೆಡಿಎಸ್‌ನೋರು ಮಾಡಿರೊ ಅವುಮಾ... ನೋಡಿದ್ರೆ, ಇಷ್ಟೊತ್ತಿಗೆ ನಿಮ್ಮ ಸವಾ... ವಳ್ಗೆದಲ್ಲ ಅಂತ ಹೋಗಿಬುಡೋರು ಅದ... ಇನ್ನು ಯಂಗಂಟಗಂಡವುರೆ ನೋಡು."

"ನಿಜ ಬುಡು."

"ಕುಮಾರಸ್ವಾಮಿ ಎಷ್ಟು ಅವುಮಾನ ಮಾಡಿದ... ಅವುರಿಗೆ ಏನು ಅನ್ನುಸ್ತಾಯಿಲ್ಲ, ರಾಜಕಾರಣ ಮಾಡೋರ... ಇಷ್ಟು ಗತಿಗೆಡಬಾರ್ದು ಕಣೊ."

"ಪಾಪ ಅವು ಅಧಿಕಾರಕ್ಕೆ ಬರಕ್ಕೆ ಸಾಧ್ಯವ...

ಕ್ಲೀವೆಜ್ ನೋಡಿ ಕೆಂಡ ಆದ ಭೂತ!

ಸಮಾನ ದೂರ!

ಒಬ್ಬ ಇದ್ದನಂತೆ. ಬಲೇ ರಸಿಕ ಮುಂಡೇದು. ಒಂದು ಹೆಂಡತಿ ಸಾಲದು ಅಂತ ಇನ್ನೊಂದನ್ನು ಮಾಡಿಕೊಂಡನಂತೆ. ಅವಳೇನು ಮಾಡ್ತಾಳೆ ಅಂತ ಇವಳಿಗೆ, ಇವಳು ಏನು ಮಾಡ್ತಾಳೇಂತ ಅವಳಿಗೆ ತಿಳೀದಿರಲಿ ಅಂತ ಬೇರೆಬೇರೆ ಮನೇನೆ ಮಾಡಿದ್ದನಂತೆ. ಆದರೂ ಅದು ಹೇಗೋ ಅಲ್ಲಿ ನಡೆಯೋದು ಇಲ್ಲಿಗೆ, ಇಲ್ಲಿ ನಡೆಯೋದು ಅಲ್ಲಿಗೆ ತಿಳೀತಿತ್ತಂತೆ. ಆಮೇಲೆ ಇದ್ದದ್ದೆ. ಆ ಮನೆಗೆ ಹೋದರೆ ಅಲ್ಲೂ ಜಗಳ, ಈ ಮನೆಗೆ ಹೋದರೆ ಇಲ್ಲೂ ಜಗಳ. ಅವನ ತಲೆ ಕೆಟ್ಟು ಚುರುಂಡಿ ಆಯಿತಂತೆ. ಕೊನೆಗೆ ಇಬ್ಬರನ್ನೂ ಒಂದು ಕಡೆ ಸೇರಿಸಿ ಅದೂ ಇದೂ ಹೇಳಿ ಮುದ್ದು ಮಾಡಿ 'ನಿಮ್ಮಿಬ್ಬರಲ್ಲಿ ನನಗೆ ಯಾರೂ ಹೆಚ್ಚೂ ಇಲ್ಲ, ಕಡಿಮೇನೂ ಇಲ್ಲ. ಇಬ್ಬರನ್ನು ಸಮಾನ ದೂರದಲ್ಲೇ ಇಟ್ಟರ್ತೀನಿ' ಅಂತ ಪ್ರೂಸಿ ಹೊಡೆದನಂತೆ.



ಆಮೇಲೆ..... ಸಮಾನ ದೂರದಲ್ಲಿದ್ದರೂ ಇಬ್ಬರಿಗೂ ಮಕ್ಕಳು ಮಾತ್ರ ಆಗುತ್ತಿದ್ದವಂತೆ! ವಂಶೋದ್ಧಾರಕರ ಉತ್ಪಾದನಾ ಕಾರ್ಯ ನಿರ್ವಿಘ್ನ ನಡೆಯುತ್ತಲೇ ಇತ್ತಂತೆ!

ಇದನ್ನು ಯಾಕೆ ಹೇಳುವುದಕ್ಕೆ ಬಂದೆ ಅಂದರೆ... ಜಾತ್ಯತೀತ ಜನತಾದಳದವರು ರಾಷ್ಟ್ರಪತಿ ಚುನಾವಣೆಯಲ್ಲಿ ಯಾಕೆ ಮತ ಚಲಾಯಿಸಲಿಲ್ಲ ಎಂಬ ಪ್ರಶ್ನೆಗೆ ಆ ಪಕ್ಷದ ವಕ್ತಾರ ವೈ.ಎಸ್.ವಿ. ದತ್ತ 'ನಾವು ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷವನ್ನು ಸಮಾನ ಅಂತರದಲ್ಲಿಡುತ್ತೇವೆ ಅದಕ್ಕೆ' ಎಂದು ಉತ್ತರಿಸಿದ್ದಕ್ಕೆ. ಅಲ್ಲಿ ಕಾಂಗ್ರೆಸ್ ಜೊತೆ ಸರಸ ಆಡುತ್ತಾ ಈ ಜಾತ್ಯತೀತರು ಅಧಿಕಾರ ಅನುಭವಿಸಿದರು. ದಾಂಪತ್ಯ ಜೀವನದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಸವುರಿಸಿಕೊಂಡು ಹೋಗಬೇಕಾಗಿತ್ತು, ಊಹುಂ, ಹಾಗೆ ಆಗಲಿಲ್ಲ, ಡೈವೋರ್ಸ್ ಬಿಸಾಕಿ ಭಾಜಪ ಕತ್ತಿಗೆ ತಾಳಿ ಬಿಗಿದರು. ಈಗ ಅಧಿಕಾರ ಅನುಭವಿಸುತ್ತಿದ್ದಾರೆ. ಅಂದಮೇಲೆ ಈ ಸಮಾನ ದೂರ ಅನ್ನುವುದೂ ಇಬ್ಬರ ಹೆಂಡಿರ ರಸಿಕ ಮುಂಡೇದರ ಸಮಾನ ದೂರದಂತೆಯೇ ಇದೇ ಅಲ್ಲವಾ....

ಒಂದು ವೇಳೆ ಮತದಾರ ಮಹಾಶಯರೆಲ್ಲರೂ ಎಲ್ಲ ಪಕ್ಷಗಳೂ ಕೆಟ್ಟು ಕುಲಗೆಟ್ಟು ಹೋಗಿವೆ, ಯಾವಕ್ಕೂ ಮತ ಪಡೆಯುವ ಯೋಗ್ಯತೇನೆ ಇಲ್ಲ ಅಂತ ಜಾತ್ಯತೀತದ ಮಂತ್ರವನ್ನೇ ಜಪಿಸಿದರೆ.... ಪ್ರಜಾಪ್ರಭುತ್ವ ಅನ್ನೋದರ ಗತಿ ಗಂಗಮ್ಮನ ಪಾಲೇ ಅಲ್ಲವಾ....

ಈ ಸಮಾನ ದೂರ ಇತ್ತೀಚೆಗೆ ಕಾಂಗ್ರೆಸ್ ಕಡೆ ಒಲಿಯುತ್ತಿದ್ದು ಯಡಿಯೂರಪ್ಪನವರ ನಿದ್ದೆ ಕೆಡಿಸುತ್ತಿದೆಯಂತೆ. ಇವರೇ ನಮ್ಮ ಮುಂದಿನ ಮುಖ್ಯಮಂತ್ರಿ ಅನ್ನುವ ಚಿತ್ರ ಬದಲಾವಣೆಯಾಗಿ 'ನಾನೇ ಮುಂದಿನ ಮುಖ್ಯಮಂತ್ರಿ' ಅಂತ ಸಾರಿ ಸಾರಿ ಹೇಳುವ ಅನಿವಾರ್ಯತೆ ಸೃಷ್ಟಿಯಾಗಿದೆಯಂತೆ.

ಛೇ ಏನು ಸಮಾನ ದೂರ ಏನು ಕಥೆ!

ನಮ್ಮಂತೆಯೇ ಅವರೂನು!

ಭಾರತದ ಪೊಲೀಸರಿಗೆ ಸಮಾಧಾನ ತರುವ ಘಟನೆಯೊಂದು ಇತ್ತೀಚೆಗೆ ವರದಿಯಾಗಿದೆ.

ಹನೀಫ್ ಗೊತ್ತಲ್ಲ... ಅದೇ ಭಯೋತ್ಪಾದಕ ಅಂತ ಆಸ್ಟ್ರೇಲಿಯಾ ಪೊಲೀಸರಿಂದ ಸುಳ್ಳು ಕೇಸುಗಳನ್ನು ಜಡಿಸಿಕೊಂಡೋನು. ಭಯೋತ್ಪಾದಕ ಅನ್ನಬೇಕಾದರೆ ಏನಾದರೂ ಪುರಾವೆ ಬೇಕಲ್ಲ... ಅದಕ್ಕೇ ಅಲ್ಲಿನ ಪೊಲೀಸ್ ಮಹಾಶಯರು ಆತನ ಡೈರಿಯಲ್ಲಿ ತಾವೇ ಮಾಹಿತಿ ತುಂಬಿದ್ದರಂತೆ! ಈಗಿನ ಅನುಮಾನ ಏನು ಅಂದರೆ ಅಲ್ಲಿನವರು ಬಂದು ನಮ್ಮ ಮೇಧಾವಿ ಪಂಡಿತರಿಂದ ಅನುಭವ ಪಡೆದರೋ ಅಥವಾ ನಮ್ಮ ಮೇಧಾವಿಗಳೇ ಅಲ್ಲಿಗೆ ಹೋಗಿಬಂದು ಈ ರೀತಿ ನಡೆದುಕೊಳ್ಳುತ್ತಿದ್ದಾರೋ ಎಂಬುದು!

ಇಂತಪ್ಪ ನಮ್ಮ ಪೊಲೀಸಿನವರು ಈ ಸುದ್ದಿ ತಿಳಿದು ಆನಂದ ತುಂದಿಲರಾಗಿರಲು, ನಮ್ಮ ಇಂಜಿನಿಯರುಗಳೂ ಆನಂದ ಸಾಗರದಲ್ಲಿ ಮುಳುಗಿದ್ದಾರಂತೆ. ಇದಕ್ಕೆ ಕಾರಣ ಏನು ಅಂದರೆ... ವೃಥಾ ಅವರನ್ನು ಭ್ರಷ್ಟರು, ದೇಶದ್ರೋಹಿಗಳು ಎಂದೆಲ್ಲ ಚಿತ್ರಿಸಲಾಗುತ್ತಿತ್ತು, ಇದಕ್ಕೆ ಪುರಾವೆ ಎಂದರೆ ಅವರು ಮಾಡಿರುವ ರಸ್ತೆಗಳು, ನಿರ್ಮಿಸಿರುವ ಸೇತುವೆ ಕಟ್ಟಡಗಳು ಅವುಗಳ ದುಸ್ಥಿತಿಯನ್ನು ತೋರಿಸಲಾಗುತ್ತಿತ್ತು, ಈಗ ನೋಡಿ ಅಮೆರಿಕದಂತಹ ತಾಂತ್ರಿಕವಾಗಿ ಮುಂದುವರೆದ ದೇಶದಲ್ಲೇ ರಿಪೇರಿಯಾಗುತ್ತಿದ್ದ ಸೇತುವೆ ಕುಸಿದು ಬಿದ್ದು ಜನ ಸಾವುನೋವಿಗೆ ಈಡಾಗಿದ್ದಾರೆ. ಅಂದಮೇಲೆ ಅಲ್ಲಿನ ಇಂಜಿನಿಯರುಗಳೂ ನಮ್ಮವರ ತರವೇಯ ಎಂಬ ಸಮಾಧಾನ ಅವರಿಗಂತೆ!

ಆಹಾ ಕ್ಲೀವೆಜ್!

ಬಿಎಂಟಿಸಿ ಬಸ್ ಡ್ರೈವರ್‌ಗಳನ್ನ ನೋಡಿರಬೇಕು. ಬಸ್‌ಸ್ಟಾಪ್‌ಗಳಲ್ಲಿ ಬಸ್ ನಿಲ್ಲಿಸಲ್ಲ, ಎಲ್ಲೆಲ್ಲೋ ನಿಲ್ಲಿಸ್ತಾರೆ ಅನ್ನುವ ಆಪಾದನೆ ಅವರ ಮೇಲಿದೆ. ಅದರಲ್ಲೂ ಹೆಣ್ಣು ಅಂತ ಒಂದು ಕೈ ತೋರಿಸಿದರೆ ಸಾಕು. ಅತಿ ವೇಗದಲ್ಲಿ ಓಡುತ್ತಿರುವ ಬಸ್ಸೂ ಬ್ರೇಕ್ ಹಾಕಿಸಿಕೊಂಡು ಗಕ್ ಅಂತ ನಿಂತು ಬಸ್ಸಿನಲ್ಲಿರುವವರೆಲ್ಲ ಮುಗ್ಗರಿಸುವಂತೆ ಮಾಡುತ್ತೆ. ಕಂಡಕ್ಟರುಗಳಿಗಂತೂ 'ಟಿಕೆಟ್ ಟಿಕೆಟ್' 'ಚೀಟಿ ಚೀಟಿ' ಅಂತ ಹೆಂಗಸರ ಮೈಕೈ ಸವರಿಕೊಂಡೇ ಓಡಾಡಿದರೆ ಒಂದು ರೀತಿಯ ವಿಕೃತ ತೃಪ್ತಿ, ಸಾಮಾನ್ಯ ಮಹಿಳೆಯರಿಗೇ ಈ ಪಾಟಿ ಜೊಲ್ಲು ಸುರಿಸುವ ಮಂದಿ ಇನ್ನು ಆಕರ್ಷಕವಾಗಿ ಡ್ರೆಸ್ ಮಾಡಿಕೊಂಡಿದ್ದರಂತೂ ಮುಗಿದೇ ಹೋಯಿತು. ಅವರ ಹಿಂದೆ ಮುಂದೇನೆ ಮನಸ್ಸೆಲ್ಲಾ ಲಾಗಾ ಹೊಡೀತಿರ್ತವೆ.

ಇದನ್ನು ಯಾಕೆ ಹೇಳುವುದಕ್ಕೆ ಬಂದೆ ಅಂದರೆ... ಜರ್ಮನಿಯಲ್ಲಿ ಬೆಳಗಿನ ಜಾವದ ಬಸ್ಸು, ಡ್ರೈವರ್ ಬಸ್ ಚಲಿಸುತ್ತಿದ್ದನಂತೆ. ಕನ್ನಡಿಯಲ್ಲಿ ಏನೋ ಕಂಡನಂತೆ. ಗಕ್ಕನೆ ಬಸ್ಸು ನಿಲ್ಲಿಸಿದನಂತೆ. ಹಿಂದಕ್ಕೆ ತಿರುಗಿ ಚೆನ್ನಾಗಿ ಡ್ರೆಸ್ ಮಾಡಿಕೊಂಡಿದ್ದ ಯುವತಿಯನ್ನುದ್ದೇಶಿಸಿ 'ನೋಡಮ್ಮ ತಾಯಿ ನೀನು ಹಿಂದಕ್ಕೆ ಹೋಗಿ ಕುಳಿತುಕೊ, ಇಲ್ಲ ಅಂದರೆ ಕೆಳಕ್ಕೆ ಇಳಿಸಬೇಕಾಗುತ್ತೆ' ಅಂತ ರೇಗಿದನಂತೆ!

ಎಲ ಎಲಾ ಇದೇನು ಸೋಜಿಗ ಅಂತೀರಿ. ವಿಶೇ... ಆಕರ್ಷಣೆಯ ಮಹಿಳೆ ಬಂದರೆ 'ಹತ್ತಿರ ಹತ್ತಿರ ಬ... ಇನ್ನೂ ಹತ್ತಿರ ಬಾ' ಅಂತ ಪದ ಹಾಡಬೇಕು. ಇದೇನ... ಈ ಮೂದೇವಿ ಹಿಂಗೆ ಹೇಳ್ತಿದೆಯಲ್ಲ ಅಂದರೆ ಅದಕ್ಕ... ಕಾರಣ ಇತ್ತಂತೆ. ಪಾಪ ಆ ಹೆಣ್ಣುಮಗಳು ತನ್ನ ಒಳ... ಹುದುಗಿರುವ ಸೌಂದರ್ಯ ಸಾಧನವನ್ನ ಜನರಿ... ತೆರೆದಿಡಬೇಕು ಎಂದೋ ಏನೋ ಲೋ ನೆಕ್ ಬ್ಲೌ... ಹಾಕಿಕೊಂಡಿತ್ತಂತೆ. ಆ ಡ್ರೈವರ್ ಮಹಾಶಯರಿಗೆ ಬಸ್ಸಿ... ರೇರ್ ಮಿರರ್‌ನಲ್ಲಿ ಎಲ್ಲ ದೃಶ್ಯಗೋಚರವಾಗಿತ್ತಂತೆ. ರಸ್ತೆ... ಮೇಲೆ ಗಮನ ಇಡಬೇಕು ಅಂದರೂ ಆ ಹೆಣ್ಣುಮಗ... 'ಕ್ಲೀವೇಜು' ಮತ್ತೆಮತ್ತೆ ಕನ್ನಡಿಯ ಕಡೇನೆ ನೋಡುವಂ... ಮಾಡುತ್ತಿತ್ತಂತೆ! ಅದಕ್ಕೇ ಈರೇಗಂತೆ! ಕ್ಲೀವೇಜ... ತೋರಿಸದಿರಲು ರೇಗು! ನಮ್ಮ ಡ್ರೈವರ್‌ಗಳಾಗಿದ್ದ... ಅದರಮ್ಮನ್, ಅದರ ಕತೆಯೇ ಬೇರೆ!

ಅಣಕ

ಎಚ್.ಎಲ್. ಕೇಶವಮೂರ್ತಿ

ಪ್ರಕಾಶ್ ಬೆನ್ನೆಲುಬು

ಎಂ.ಪಿ. ಪ್ರಕಾಶರ ಗ್ರಹಗತಿ ಸರಿ ಇದ್ದಂತಿಲ್ಲ.

ವಿಧಾನಮಂಡಲದಲ್ಲಿ ಅವರ ಅಂಗಾಂಗಗಳ ಬಗ್ಗೆ... ಕಾಮೆಂಟ್ಸು.

ಮೀಸೆ ಬಿಟ್ಟಿದ್ದಕ್ಕೂ ಆಡಿಕೊಂಡರು.

ಈಗ, ಅವರ ಬೆನ್ನೆಲುಬಿನ ಮೇಲೆ ಅವರ ಕಣ್ಣು...

ಪ್ರಕಾಶ್‌ಗೆ ಬೆನ್ನೆಲುಬು ಇದೆಯೆ? ಇದುವೆ ಪ್ರಶ್ನೆ...

ಇದೆ ಅಂತ ಕೆಲವರು, ಇಲ್ಲ ಅಂತ ಹಲವರು... ಇಲ್ಲ ಇಲ್ಲ ಬೆನ್ನೆಲುಬು ಅಂತ ಇದೆ. ಆದರೆ ಅದ... ರೋಗ ತಗುಲಿದೆ ಅಂತ ಉಳಿದವರು.

ಇದರಲ್ಲಿ ಪ್ರಕಾಶರ ಅಪರಾಧ ಏನೂ ಇಲ್ಲ. ಗೃ... ಖಾತೆಯ ಅಧಿಕಾರಿಗಳ ವರ್ಗಾವಣೆ ಸಂದರ್ಭ... ಇಲಾಖೆಯ ಮಂತ್ರಿಗಳಿಗೆ ವಿಪರೀತ ಕೆಲಸ. ಯಾ... ಯಾರೋ ಮಾಡಿದ್ದ ತಪ್ಪನ್ನೆಲ್ಲ ಸರಿಯಾಗೇ ನಿರ್ವಹಿಸಿದ... ಅಂತ ಸಮರ್ಥನೆ ಮಾಡಿಕೊಳ್ಳುವುದರಲ್ಲೇ ಅವ... ಹೆಣಬಿದ್ದು ಹೋಗುತ್ತೆ. ಇನ್ನು ವರ್ಗಾವಣೆ ಹೊಣೆಯನ್ನ... ಅವರ ಕತ್ತಿಗೇ ಕಟ್ಟಿದರೆ ಹೇಗೆ. ಎಷ್ಟು ಹೊರೆ ಅ... ಹೊತ್ತಾರು ಪಾಪ ಅವರು ತಾನೆ. ಅದಕ್ಕೆ ಕಾಣದ... ವರ್ಗಾವಣೆಯನ್ನೆಲ್ಲ ತಾನೇ ಮಾಡಿತಂತೆ. ಇಂತ...

ಆಧುನಿಕ ತಂತ್ರಜ್ಞಾನವು ಪರಿಸರಕ್ಕೆ ಕ್ಷಮೆ ಕೇಳಬೇಕಿದೆ-ಆಲನ್ ಎಂ. ಎಡ್ವಿನ್ ಸನ್

ಯಿಬ್ರಲಿಲ್ಲ, ಆ ಬಂಗಾರಿ ಕೋಟಿ ತಿಮ್ಮನಂಗಾದೋ ತ್ರಿಗೆ ಒಂದಿಷ್ಟು ಜಾಸ್ತಿ ಸೀಟು ಬಂದೊ. ತಿರುಗ ಸುನಾವಣೆಗೋದ್ರೆ ಅಷ್ಟು ಬರದಿಲ್ಲ ಅಂತ ಅವುಕೂ ಗೊತ್ತದೆ. ಅದ್ಕೆ ಯಲ್ಲಾ ಅವುಮಾನನೂ ಸಯಿಸಿಗಂಡು ಯಂಗೊ ಕಾಲ ಹಾಕ್ತ ಅದೆ."

"ಆ ಬಂಗಾರಪ್ಪೇನಾದ ಸುದ್ದೇ ಇಲವಲ್ಲಾ?" ಎಂದ ಳೇಮಾವ.

"ಅವುನೆ ಕಣಾಮಾವ ಎಲ್ಲೆಲ್ಲೊ ಆಗಾಗ್ಗೆ ಸುದ್ದಿ ಮಾಡ್ತ ವುನೆ. ಆಗ್ಲೆ ಚಂದ್ರುಬಾಬು ನಾಯ್ಡು ಹತ್ರಕೋಗಿ ನಾನು ನು ಒಂದಾಗನ ಅಂದವುನೆ. ಅಂತೂ ಯಲಕ್ಸನ್ ಟೈಮಿಗೆ ಲಡಾಸ್ ಸೈಕಲ್ ತೆಳ್ಳಿಕಂಡು ಬಂದೇ ಬತ್ತನೆ."

"ಆ ಇವುನೇನಾದುನ್ನ?" ಎಂದಳು ಜುಮ್ಮಿ.

"ಯಾರಕ್ಕ?"

"ನೀನೆ ಆದಿಕತ್ತಿದ್ದಲ್ಲ ಲಾರಿ ಡ್ರೈವರು ಅಂತ."

"ಓಹೊ ವಿಜಯ ಸಂಕೇಶ್ವರ, ಅವುನು ಕಾಯೋಳು ವುರತ ಕುಂತವುನೆ ಕಣಕ್ಕ."

"ಅದ್ಯಾಕ್ಲ ಕಾಯೋಳು ಕವಿರ್‍ಕನೂ?"

"ಅದೇ ಆಲವೇನಕ್ಕ ಅವುನ ಪಾರ್ಟಿ ಸಿಂಬಲ್ಲು. ಇಡೀ ಕರ್ನಾಟಕದಲ್ಲಿ ಒಂದೇ ಒಂದು ಸೀಟು ಬರಲಿಲ್ಲ. ಅದ್ಕೆ ಬೇಜಾರಾಗಿ ಯರಡೋಳು ಕಾಯಿಲಿ ಒಂದೋಳು ವುರಿ ಮಾರಿದನಂತೆ. ಇನ್ನೊಂದೋಳು ಆಗ್ಲೆ ಕರಿಗಿಟ್ಟಿದ್ದನಂತೆ."

"ನೀನೇಳದು ತಿಳಿಲಿಲ್ಲ ಹೋಗು."

"ವಿಜಯ ಕರ್ನಾಟಕ ಅನ್ನೊ ಪೇಪರ್ ಮಾರಿಕಂಡ. ಈಗ ವಿಆರೆಲ್ ಮಾರತ ಇದ್ದನಂತೆ."

"ಮಾರಿಬುಟ್ಟು ಏನು ಮಾಡ್ತನೂ?"

"ಅವುನು ಸಿಕ್ಕಲಿ ಕೇಳಿಬುಟ್ಟು ಹೇಳತಿನಿ. ಅವು ಒಂತರ ವಂಡ್ರುಪುಲ್ಲು ಕಣಕ್ಕ. ಸಾಮಾನ್ಯವಾಗಿ ಅಪ್ಪ ಳ್ಳೆತಾ ಹೋಗಿರತನೆ, ಮಗ ಬಂದು ಮಾರತಾ ಹೋಯ್ತನೆ. ಆದ್ರೆ ಈ ವಿಜಯ ಸಂಕೇಶ ತಾನೇ ಕೊಂಡಿದ್ದನೆಲ್ಲಾ ತಾನೇ ಮಾರಿದ. ದಿಸೀಸ್ ರಿಯಲಿ ವಂಡ್ರುಪುಲ್" ಎಂದ ವಾಟಿಸ್ಸೆ. ■

ರೋಪಕಾರಿ ಕೈ ಕಾರ್ಯವನ್ನೇ ಪ್ರಕಾಶರಿಗೆ ಬೆನ್ನಲುಬೇ ಇಲ್ಲ ಎಂದು ಹೇಳಿದರೆ ಹೇಗೆ ಅಂತಾ.....

ಆಸ್ತಿ ವಿವರ

ಲೋಕಾಯುಕ್ತರಿಗೆ ಬುದ್ಧಿ ಇದೆಯ?

ಪಾಪ ನಮ್ಮ ವಿಧಾನಮಂಡಳದ ಸದಸ್ಯರು ಎಂತಹ ಭ್ಯರು ನೋಡಿ.

ಲೋಕಾಯುಕ್ತ ಕೇಳಿದ್ದೇನು?

ಆಸ್ತಿ ವಿವರ ಕೊಡಿ ಅಂತ.

ಕೊಟ್ಟಿದ್ದಾರೆ ಕೂಡ. ಅದು ಅಪೂರ್ಣ, ಸಂಪೂರ್ಣ ಆಸ್ತಿ ವಿವರ ನೀಡಿ ಅಂದರೆ ಹೇಗೆ ಸ್ವಾಮಿ?

ಅದಕ್ಕೆ ರಮೇಶ್‌ಕುಮಾರ್ ಸರಿಯಾಗಿಯೇ ಉತ್ತರಿಸಿ ದ್ದಾರೆ. ನಮ್ಮಲ್ಲಿ ದನ ಇದೆ ಎಂದರೆ ಸಗಣಿ ಎಷ್ಟು ಹಾಕುತ್ತೆ ಅಂತ ಲೆಕ್ಕಾನೂ ಕೇಳ್ತಾರೆ ಅವರು ಅಂತ!

ಅಲ್ಲವೇ ಮತ್ತೆ, ಅಲ್ಲಿ ಇಲ್ಲಿ ಸಗಣಿ ತಿಂದಿರ್‍ತಾರೆ. ಬೇಡ ಬೇಡ ಅಂದರೂ ಆಸ್ತಿ ಮಾಡಿರ್‍ತಾರೆ. ಆದರ ಲೆಕ್ಕ ಎಲ್ಲಾನೂ ಕೊಡಿ ಅಂದರೆ ಹೇಗೆ. ಎಲ್ಲಾ ಲೆಕ್ಕಾನೂ ತೋರಿಸಿ ನಿಮ್ಮ ಕೈಲಿ ಕೇಸು ಜಡಿಸಿಕೊಂಡು ಜೈಲಿಗೆ ಹೋಗಬೇಕಾ. ಈಗಲೂ ಹಣ ಮಾಡಿಕೊಳ್ಳದೆ ಇದ್ದರೆ ಈ ಅವಧಿ ಕಳೆದ ನಂತರ ಅವರು ಜೀವನಕ್ಕೇನ್ರಿ ಮಾಡಬೇಕು?

ಹೆಸರು ಬದಲಾವಣೆ

ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಹೇಗೆ?

ಘನ ಸರ್ಕಾರದ ಮುಂದೆ ಇದ್ದ ಪ್ರಶ್ನೆ.

ಅಲ್ಲವೆ ಮತ್ತೆ, ಕೈಗಾರಿಕೆಗಳು ಮುಂದುವರೆದರೆ ದೇಶ ಮುಂದುವರೆದಂತೆ.

ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ಸ್ಥಾಪಿಸಿತು ಕಾರ.

ಮುಂದುವರಿದವೆ ಕೈಗಾರಿಕೆಗಳು?

ಜಾಗತೀಕರಣದ ಭರದಲ್ಲಿ ಇದ್ದ ಕೈಗಾರಿಕೆಗಳೂ ಬ್ಬಿ ಹೋದವು.

ಕೈಗಾರಿಕಾ ಅಭಿವೃದ್ಧಿ ನಿಗಮ? ಮುಂದುವರೆಯಿತು!

ಈಗ ಅದರ ಕೆಲಸ ಏನು?

ಕೈಗಾರಿಕೆಗಳಿಗೆ ಭೂಮಿಯನ್ನು ವಶಪಡಿಸಿಕೊಳ್ಳು ದು!

ಕೈಗಾರಿಕೆಗಳು?

ಇಲ್ಲ!

ಕೈಗಾರಿಕೆಗಳ ಹೆಸರಿನಲ್ಲಿ ಸರ್ಕಾರವೇ ಭೂಕಬಳಿಕೆ ರರಿಗೆ ಸಹಾಯ ಮಾಡುತ್ತಿರುವುದನ್ನು ನೋಡಿದರೆ ನಿಗಮವನ್ನ....

ಕರ್ನಾಟಕ ಭೂ ಕಬಳಿಕೆ ಸಹಾಯ ನಿಗಮ ಎಂದು ಮರುನಾಮಕರಣ ಮಾಡಿದರೆ ಹೇಗೆ..... ■

ವರದಾಚಾರ್ಯರ ವೇಳೆ

ಮರೆಯುವ ಮುನ್ನ



■ ಪಿ. ಲಂಕೇಶ್ ಫೆಬ್ರವರಿ 12, 1989

ನನ್ನೆದುರು ಒಂದು ನಾಟಕಗಳ ಸಂಕಲನವಿದೆ. ಅದರ ಹೆಸರು 'ರತ್ನಾವಳಿ'. ಎ.ವಿ.ವರದಾಚಾರ್ಯರು ಆಡುತ್ತಿದ್ದ ಮೂರೂ ಕಂಪನಿ ನಾಟಕಗಳಿವು. ನಿರುಪಮಾ, ಪ್ರಹ್ಲಾದ ಚರಿತ್ರೆ, ವಿರಾಟಪರ್ವ ಎಂಬ ಮೂರು ನಾಟಕಗಳನ್ನು ವರದಾಚಾರ್ಯರು ತಮ್ಮ ರತ್ನಾವಳಿ ಕಂಪನಿಯಿಂದ ಆಡುತ್ತಿದ್ದರು; ಮೂರೂ ಜನ ಪ್ರಿಯವಾಗಿದ್ದವು. 1869 ರಲ್ಲಿ, ಅಂದರೆ ಗಾಂಧೀಜಿ ಹುಟ್ಟಿದ ವರ್ಷ ವರದಾಚಾರ್ಯರು ಹುಟ್ಟಿದ್ದು; ಭಾರತದ ಸ್ವಾತಂತ್ರ್ಯದ ಕಡೆಗೆ ತುಡಿಯಲು ಯತ್ನಿಸಿದ್ದ ವೇಳೆಯಲ್ಲಿ, ಎಲ್ಲೆಲ್ಲೂ ಮುಕ್ತ ಭಾರತದ ಕನಸು ಕುದಿಯೊಡೆಯುತ್ತಿದ್ದ ವೇಳೆಯಲ್ಲಿ ವರದಾಚಾರ್ಯರು ತಮ್ಮ



ಕಂಪನಿ ನಡೆಸಿದರು. ನಾಟಕ ಬರೆಸಿ, ಹೊಸ ರೀತಿಯಲ್ಲಿ ರಿಹರ್ಸಲ್ ನಡೆಸಿ, ನಾಟಕವನ್ನು ಪ್ರದರ್ಶಿಸಿ ಕಲೆಯ ಬೆಳಕಲ್ಲಿ ವಿಶ್ಲೇಷಿಸಿ ಪ್ರತಿಭಾಪೂರ್ಣವಾಗಿ ಮಂಡಿಸುತ್ತಿದ್ದವರು ವರದಾಚಾರ್ಯರು; ವರ್ತಮಾನಬದ್ಧ ರಂಗಭೂಮಿಯಲ್ಲಿ ಮಿಂಚಿ ಕಣ್ಮರೆಯಾದವರು. ಇವರ ಬಗ್ಗೆ ಸಂಶೋಧನೆ ನಡೆಸಿ ಚೊಕ್ಕದಾದ ಮುನ್ನುಡಿ ಬರೆದಿರುವ ಪರ್ವತವಾಣಿ ತಮ್ಮ ಉದ್ಗಾರಗಳ ನಡುವೆ ವರದಾಚಾರ್ಯರ ವೈಶಿಷ್ಟ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ. ಒಂದು ಪ್ಯಾರಾ ಹೀಗಿದೆ:

"ಒಂಭತ್ತೂವರೆಗೋ ಹತ್ತಕ್ಕೋ ನಾಟಕಾರಂಭವೆಂದರೆ ಅಷ್ಟು ಹೊತ್ತಿಗೆ ಪ್ರಾರಂಭವಾದಂತೆಯೇ. ಯಾರು ಬರಲಿ ಬಿಡಲಿ, ಪ್ರಕಟಿಸಿದ್ದ ವೇಳೆಗೆ ಮೂರನೆ ಬೆಲ್ಲು. ಅಂಕದ ತೆರೆ ಮೇಲೆದ್ದಿತೆಂದೇ. ಒಂದು ಮಾತು ಹೇಳುತ್ತಾರೆ ಆಗಿನವರು-ಗಡಿಯಾರ ನಿಂತು ಹೋಗಿದ್ದರೆ, ಅಥವಾ ವೇಗವಾಗಿಯೋ ವಿಳಂಬವಾಗಿಯೋ ಓಡುತ್ತಿದ್ದರೆ ಆಚಾರ್ಯರ ಥಿಯೇಟರ್‌ನಿಂದ ಮೂರನೆ ಬೆಲ್ ದನಿ ಕೇಳಿ ಚಿಕ್ಕ ದೊಡ್ಡ ಮುಳ್ಳುಗಳನ್ನು ಸರಿಮಾಡಿಕೊಳ್ಳುತ್ತಿದ್ದರು, ಎಂದು!"

"ಗಿಫ್ಟೆಡ್ ಆಕ್ಟರ್" ಎಂದು ಬಿರುದು ಪಡೆದಿದ್ದ ವರದಾಚಾರ್ಯರ ಯಶಸ್ಸಿಗೆ ಅದೊಂದು ಸೂಚನೆ.


ಹಳೆ ಮುಗ್ಧ ಶೈಲಿ

ವಿಚಿತ್ರವೆಂದರೆ ನಾಟಕಗಳು ನಮ್ಮೊಂದಿಗಿದ್ದರೂ ನಾಟಕಗಳ ಪ್ರದರ್ಶನ ನಮ್ಮೊಂದಿಗಿರುವುದು ಸಾಧ್ಯವಿಲ್ಲ; ವರದಾಚಾರ್ಯರ ಬಗ್ಗೆ ಎಷ್ಟು ಬರೆದರೂ ಅವರು ಆ ಕ್ಷಣದಲ್ಲಿ ಸೃಷ್ಟಿಸುತ್ತಿದ್ದ ಮಾಂತ್ರಿಕ ಜಗತ್ತು ನಮ್ಮದಾಗುವುದಿಲ್ಲ. ಇದು ನಾಟಕ ಕಲೆಗೆ ಅಂಟಿಕೊಂಡ ಗುಣ ವಿಶೇಷ. ಇದನ್ನು ದೌರ್ಬಲ್ಯವೆಂದು ಕರೆಯದೆ ಗುಣವಿಶೇಷವೆಂದು ಕರೆಯುತ್ತಿದ್ದೇನೆ. ಯಾಕೆಂದರೆ ನಾಟಕ ಹೊಸ ನಿರ್ದೇಶಕರ ಮೂಲಕ, ಹೊಸ ನಟರ ಮೂಲಕ ಹೊಸ ರೂಪ ಪಡೆಯುತ್ತದೆ. ಹೊಸ ಯುಗದ ಸ್ಪಂದನ ನೀಡುತ್ತದೆ. ಆದರೆ ಈ ನಾಡಿನಲ್ಲಿ ಕಂಪನಿ ನಾಟಕಗಳು ಮಂಕಾದವು; ಸಾಮಾಜಿಕ ನಾಟಕಗಳು ನಮ್ಮ ಕಂಪನಿಯ ಶೈಲಿ, ಪರಂಪರೆಯನ್ನು ಬೆಳೆಸಲಿಲ್ಲ. ಹೀಗಾಗಿ ಗೊಂದಲವಾಗಿದೆ.

ನಾವು ಅಲ್ಲಲ್ಲಿ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳ ಹೆಸರು ಕೇಳಿದ್ದೇವೆ. ಇವರು ಅರಮನೆಯ ವಿದ್ವಾಂಸರಾಗಿದ್ದವರು. ದೊರೆಯ ಆಶ್ರಯ, ಜನರ ರಂಜನೆ, ಸಮುದಾಯದ ಸಂಸ್ಕೃತಿ-ಇವನ್ನೆಲ್ಲ ಒಪ್ಪಿಕೊಂಡು ಬದುಕಿದ್ದವರು. ವರದಾಚಾರ್ಯರ 'ನಿರುಪಮಾ' ನಾಟಕದ ಕರ್ತೃ ಶ್ರೀಕಂಠಶಾಸ್ತ್ರಿಗಳು. ಸುಮಾರು ಮುಕ್ಕಾಲು ಶತಮಾನದ ಹಿಂದೆ ಬರೆದ ಇವರ 'ಅರ್ಪಣೆ' ಮತ್ತು ಮುನ್ನುಡಿ ಈಗ ಕುತೂಹಲಕರವಾಗಿ ಕಾಣುತ್ತವೆ. ಆದ್ದರಿಂದ ಇಲ್ಲಿ ಕಾಣಿಸುತ್ತೇನೆ.

ತಮ್ಮ ಪತ್ನಿಗೆ 'ನಿರುಪಮಾ' ನಾಟಕವನ್ನ ಅರ್ಪಿಸಿರುವ ಶಾಸ್ತ್ರಿಗಳು ಹೀಗೆ ಬರೆದಿದ್ದಾರೆ "ಪತಿ ಪರಾಯಣೆಯಾಗಿಯೂ ಸತಿಕುಲ ಶಿರೋಮಣಿಯಾಗಿಯೂ ಇದ್ದು ಅಕಾಲ ಮೃತ್ಯುವಿನಿಂದಪಹೃತಳಾಗಿ ತನ್ನ ಸಹಧರ್ಮಿಣಿಯ ಸ್ಮರಣಾರ್ಥವಾಗಿ ಈ ಗ್ರಂಥವನ್ನು ಪ್ರಕಟಿಸಿರುತ್ತೇನೆ." ಪತ್ನಿಯ ಹೆಸರೇ ಇಲ್ಲ!

ಇವರ ಮುನ್ನುಡಿ ("ಅವತರಣಿಕೆ") ಹೀಗಿದೆ: ಕರ್ನಾಟಕ ಭಾಷೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ಬದ್ಧರಾಗಿರುವ ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್



ಬಹದ್ದೂರ್ ಜಿ.ಸಿ.ಎಸ್.ಇ.ರವರ ಪ್ರೋತ್ಸಾಹಬಲದಿಂದ ಕರ್ನಾಟಕ ಗ್ರಂಥರಚನಾ ತತ್ಪರನಾಗಿರುವ ನಾನು 'ನಿರುಪಮಾ' ಎಂಬೀ ಪ್ರಕರಣವನ್ನು ಪಠನಾಭಿಯಗಳಿ ಗನುಕೂಲವಾಗಿರುವಂತೆ ವಿರಚಿಸಿ ಕನ್ನಡಿಗರ ಪರಾಮರ್ಶಕ್ಕೆ ತಂದೊಪ್ಪಿಸಿರುವೆನು. ಕೃತಿ ವತ್ಸಲರಾದ ವಿಚಕ್ಷಣರು "ಪ್ರಿಯದರ್ಶಿಕಾ", "ಕನಕಲತಾ" ಮೊದಲಾದ ನನ್ನ ಗ್ರಂಥಗಳಿಗೆ ಉದಾರಾಶ್ರಯವನ್ನು ಕೊಟ್ಟು ಪರಿಗ್ರಹಿಸಿದಂತೆಯೇ ಆದ್ಯತನ ಕೃತಿ ವಿಕಾಸಗಳಲ್ಲಿ ಒಂದೆನಿಸಿಕೊಂಡಿರುವ ಈ ಗ್ರಂಥವನ್ನೂ ಪರಿಗ್ರಹಿಸಿ ನನ್ನ ಪ್ರಯತ್ನವನ್ನು ಸಫಲ ಮಾಡಬೇಕೆಂದು ಪ್ರಾರ್ಥನೆ.

ಅರಮನೆಯ ವಿದ್ವಾಂಸ,
ನಂಜನಗೂಡು ಶ್ರೀಕಂಠಶಾಸ್ತ್ರಿ
ಕೃಷ್ಣರಾಜ ಮೊಹಲ್ಲಾ, ಮೈಸೂರು.

ಎಲ್ಲರೂ ವಾಸಿಸುವ ಕೋಣೆ



ರಾಮಚಂದ್ರ ಶರ್ಮ ನಿಜಕ್ಕೂ ಕಾವ್ಯ ಜೀವಿ. ಆಗಾಗ ಶಿಕ್ಷಣ, ಭಾಷೆಯ ಬಗ್ಗೆ ಮಾತಾಡಲು ಯತ್ನಿಸಿದರೂ ಇವರ ಕಣ್ಣು ಹೊಳೆಯುವುದು, ಮನ ಕುಣಿಯುವುದು 'ಕಾವ್ಯ' ಅಂದಾಗ. ನಾನು ಕವಿಯಾದವನಿಗೆ ಕಾವ್ಯ ಜೀವನದಲ್ಲಿರುತ್ತದೆ, ಇದರ ದುಗುಡದುಮ್ಮಾನದಲ್ಲಿರುತ್ತದೆ ಅಂದಾಗ ಅವರು ನಂಬುವುದಿಲ್ಲ. ಮೊನ್ನೆ ಭೂಪಾಲ್‌ನಲ್ಲಿ ಅಂತರರಾಷ್ಟ್ರೀಯ ಕವಿ ಮೇಳವಾದಾಗ ಅಲ್ಲಿಗೆ ಕರೆಯದೇ ಹೋದರು; ತಮ್ಮ ಉತ್ಸಾಹದಿಂದಾಗಿ ಆಹ್ವಾನಿತರಿಗಿಂತ ಚೆನ್ನಾಗಿ ಅಲ್ಲಿ ಬೆರೆತರು, ಪುಲಕಿತರಾದರು. ನಮಗೆ ಈ ಕವಿಮೇಳದ ವರದಿ ಕೊಟ್ಟರು. ಅದು ಮೊನ್ನೆ ನಮ್ಮಲ್ಲಿ ಪ್ರಕಟವಾಯಿತು. ಶರ್ಮರ ಕಾವ್ಯೋತ್ಸಾಹ ನೋಡಿ ನನಗೂ ಹುಮ್ಮಸ್ಸು ಬಂತು. ಅವರು ರಿಲ್ಕೆಯಿಂದ ಉಲ್ಲೇಖಿಸಿದ್ದನ್ನು ಚಿಂತಿಸಿದೆ- "ಕವಿಗಳೆಂದರೆ ಕಾಣದ್ದರ ಜೇನ್ನೊಣಗಳು" ಅಂದಿದ್ದಾನೆ ರಿಲ್ಕೆ. ರವಿ ಕಾಣದನ್ನು ಕವಿ ಕಂಡ ಎಂಬುದು ಹಳಸಲಾದಾಗ ಇದು ಬಳಸಲು ಒಳ್ಳೆಯ ಮಾತು. "ಎಲ್ಲ ಜೀವಗಳೂ ಇರಬಹುದಾದೊಂದು ಕೋಣೆಯ ಬಾಗಿಲನ್ನು ತುಸು ತೆರೆಯುವ ಕಾವ್ಯ"ಕ್ಕೆ ಎಲ್ಲೆಲ್ಲೂ ಸ್ವಾಗತವಿದೆ. ಕಾವ್ಯಕ್ಕೆ ದೇಶದ ಗಡಿಯ ಹಂಗಿಲ್ಲ.

ಇವರೇ ಭಾಷಾಂತರಿಸಿದ ರೊಬರ್ಟೋ ಹುವರೋಸ್ ಎಂಬ ಕವಿಯ ಸಾಲು (ಈತ ಅರ್ಜೆಂಟೀನಾ ಕವಿ) ಮತ್ತೆ ಮತ್ತೆ ನೆನಪಾಗುತ್ತಿದೆ.

ಮೌನ ಒಂದು ಗುಡಿ,
ಅಲ್ಲೇಕೆ ದೇವರು?

-ಈ ಮಾತು ಎಷ್ಟು ಚೆನ್ನಾಗಿದೆ! ದೇವರಿಗಾಗಿ ತಪಸ್ಸು ಮಾಡುವವನ ಕ್ರಿಯೆಯಲ್ಲೇ ದೈವತ್ವವಿರಬೇಕು-ಮೌನ ಮತ್ತು ಏಕಾಗ್ರತೆ ಆ ಶಕ್ತಿ ಪಡೆದಿವೆ, ಅಲ್ಲವೆ?

ದೇವೇಗೌಡ್ರು ಬಿಜೆಪಿಯವರ ಚೆಡ್ಡಿಯೊಳಗೆ ಇರುವೆ ಬಿಡೋದು ಗ್ಯಾರಂಟಿಯಲ್ವೇ....?

ಕಣ್ಣಾ ಮುಚ್ಚಾಲೆ

ನೌಷದ್‌ಬಾನು, ಗೋಕಾಕ್

Life ಗೂ wife ಗೂ knife ಗೂ ಇರುವ ವ್ಯತ್ಯಾಸ?

◆ ತ್ರಿಶೂಲಕ್ಕೂ, ಕತ್ತರಿಗೂ, ಚಾಕುಗೂ ಇರುವಷ್ಟೇ ವ್ಯತ್ಯಾಸ.

ಎಸ್. ಶಶಿಧರ, ದಾವಣಗೆರೆ

ಸಾಹಿತ್ಯ ಸಮ್ಮೇಳನಕ್ಕೆ ರಾಜಕಾರಣಿಗಳನ್ನು ಆಹ್ವಾನಿಸುವ ಔಚಿತ್ಯವೇನು?

◆ ಅದಕ್ಕೇ ಈ ಬಾರಿ ಶೂದ್ರರನ್ನು ನಿತ್ಯನಾರಕಿಗಳು ಎಂದು ನಂಬಿರುವ ಮಾಧ್ಯಮಾಧೀಶರನ್ನೇ ಕರೆದಿದ್ದಾರಂತೆ.

ಕವಿತಾ ಮಧುಸೂದನ್, ದಾವಣಗೆರೆ

ಅಕ್ಟೋಬರ್‌ನಲ್ಲಿ ನಡೆಯುವ ರಾಜಕೀಯ ನಾಟಕದಲ್ಲಿ ನಾಯಕ, ಖಳನಾಯಕ, ನಿರ್ದೇಶಕರ್‍ಯಾರು?

◆ ಅದೇನೋ ಗೊತ್ತಿಲ್ಲ. ಆದರೆ ಕಣ್ಣೀರಿಡುವ ನಾಯಕಿಯಂತೂ ಯಡಿಯೂರಪ್ಪ!

ಎಂ. ಧ್ರುವಕುಮಾರ್, ಮುತ್ತಗದೂರು

ಶಂಕರ್ ಬಿದರಿ ಪ್ರಕಾರ ಕರ್ನಾಟಕದಲ್ಲಿ ಕೋಮುವಾದಿ ಪಕ್ಷವೆಂಬುದೇ ಇಲ್ಲವಂತೆ?

◆ ಸದ್ಯ ಇಲ್ಲಿ ವಿರೋಧ ಪಕ್ಷವೇ ಇಲ್ಲ ಎನ್ನಲಿಲ್ಲ ಬಿದರಿ ಸಾಹೇಬರು!

ಆರ್. ಮಂಜುನಾಥ್, ಗೌರಿಬಿದನೂರು

ಪ್ರೀತಿಯ ಆಟಕ್ಕೂ, ಕ್ರಿಕೆಟ್ ಆಟಕ್ಕೂ ಇರೋ ಅಂತರ?

◆ 'ಬ್ಯಾಟ್ಸ್'ಮನ್‌ಗಳ ಸಂಖ್ಯೆ!

ಕೆ. ಶ್ರೀನಿವಾಸ್, ಮಂಡ್ಯ

ರಾಧಿಕಾ ಚಾಮುಂಡಿ ಬೆಟ್ಟದಲ್ಲಿ ಚಂಡಿಯಂತೆ ಆಡಿದ್ದೇಕೆ!?

◆ ತನ್ನೊಂದಿಗೆ ಮಹಿಸಾಸುರನೊಬ್ಬನಿದ್ದಾನೆ ಎಂಬ ಅಚಲ ನಂಬಿಕೆಯಿಂದ!

ಇಂದಿರಾ ಶ್ರೀಧರ್, ದಾವಣಗೆರೆ

ಗೌರಿ ಲಂಕೇಶ್ ಮತ್ತು ವಿಠಲ ಹೆಗ್ಗಡೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಮಿಂಚಿದಂತೆ ಉಡುಪಿ ಸಮ್ಮೇಳನದಲ್ಲಿ?

◆ ನಮ್ಮ ಪ್ರತಿಭಟನೆಗಳಿಗಾಗಿ ಕಾಯಿರಿ!

ಕೆ.ಸಿ. ರತೀಶ್, ಬೆಂಗಳೂರು

'ನೀರ್' ಸಾಬರಿಗೂ, ಇತರ ಮುಸ್ಲಿಂ ಮಂತ್ರಿಗಳಿಗೂ ಇರುವ ವ್ಯತ್ಯಾಸವೇನು?

◆ ನಜೀರರು ನೀರು ಕೊಟ್ಟರು. ಇತರರು ನೀರು ಕುಡಿಸಿದರು!

ಬಸವರಾಜ್ ಬೆಸ್ತರ್, ಗುಲ್ಬರ್ಗಾ

ವಿಶ್ವೇಶ್ವರ ಭಟ್ಟ ಟಿ.ಎಸ್. ಸೀತಾರಾಂರನ್ನು ಒಂದಲ್ಲ ಮೂರು ಬಾರಿ ಅಪ್ಪಿಕೊಂಡನಂತಲ್ಲ?

◆ ಅದ್ವಿದಾರದ ಸ್ಪರ್ಶ ಅಷ್ಟು ರೋಮಾಂಚಕಾರಿಯಾಗಿತ್ತಂತೆ!

ಡಿ.ಎಲ್. ಸುರೇಶ್, ಹರಪನಹಳ್ಳಿ

ಪ್ರಿಯತಮೆಗಾಗಿ ಈಗ ತಾಜ್‌ಮಹಲ್ ಕಟ್ಟಲು ಸಾಧ್ಯವೆ?

◆ ಇಲ್ಲ, ಡಾಲರ್ ಕಾಲೋನಿಯಲ್ಲಿ ಎಂಟು ಕೋಟಿಯ ಮನೆ ಖರೀದಿಸುತ್ತಾರೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಹೆಂಡತಿ ನೋಡಲು ಚೆನ್ನಿದ್ದರೆ ಗಂಡನ ಬೆಲೆಯೂ ಹೆಚ್ಚುತ್ತದಲ್ಲವೇ?!

◆ ಆತ ತಲೆ ಹಿಡುಕನಾಗಿದ್ದರೆ ಮಾತ್ರ!

ಎಂ. ಶಿವಸ್ವಾಮಿ, ಬೆಂಗಳೂರು

ಕಲಾಂ ಕಣ್ಣಲ್ಲಿ ಪರಿಶ್ರಮದ ಫಲ ಎಂಥ ಅದ್ಭುತವನ್ನು ನೀಡಿತ್ತು?

◆ ತನ್ನ ಕೋಡಂಗಿ ಬುದ್ಧಿಯಿಂದ ಪೆದ್ದು ಪತ್ರಕರ್ತರಿಂದ 'ಜನರ ರಾಷ್ಟ್ರಪತಿ' ಎನಿಸಿಕೊಂಡಿದ್ದು!

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

ಮದುವೆ ಬಂಧನವೋ, ಬಂಧಾನವೋ?

◆ ರಿಯಾಯಿತಿ ಇಲ್ಲದ ವ್ಯಾಪಾರ?

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ರಾತ್ರಿ ಬಿದ್ದ ಕನಸುಗಳೆಲ್ಲಾ ಬೆಳಿಗ್ಗೆ ನನಸಾಗುವಂತಿದ್ದರೆ?

◆ ದೇವೇಗೌಡರು ಅಮೆರಿಕದ ಅಧ್ಯಕ್ಷರಾಗುತ್ತಿದ್ದರು.

ಕೆ. ಕೊಟ್ರೇಶಿ, ಹರಪನಹಳ್ಳಿ

ರಾಜಕಾರಣಿಗಳ ಪ್ರತಿಭಟನೆಗಳಿಗೂ, ಜನರ ಪ್ರಜಾಸತ್ತಾತ್ಮಕ ಹೋರಾಟಗಳಿಗೂ ವ್ಯತ್ಯಾಸ?

◆ ಅಲ್ಲಿ *adjustment*, ಇಲ್ಲಿ *disappointment.*

ಕೆ. ಶ್ರೀನಿವಾಸ್, ಮಂಡ್ಯ

ಯಡ್ಡಿ "ಆನುದೇವಾ ಒಳಗಣವನು" ಪುಸ್ತಕ ಬರೆಸುತ್ತಾರಂತೆ!?

◆ ಅದಕ್ಕೆ ಆಗಲೇ 'ಅಯ್ಯೋ ದೇವ', ನೀನು ಹೊರಗಣವನು' ಎಂದು ಗೌದರು ಮುನ್ನುಡಿ ಬರೆದಿದ್ದಾರಂತೆ!

ಎ.ಎನ್. ಸ್ವಾಮಿ, ಸುರಪೂರ

ಲಂಬೂಜೀ ಅಮಿತಾಭ್ ಬಚ್ಚನ್ ಕೆಲವರನ್ನು ನಂಬಿ ಕೆಟ್ಟರಂತೆ?

◆ ಆ ಕೆಲವರೆಲ್ಲರೂ ಜ್ಯೋತಿಷಿಗಳಾಗಿದ್ದರಿಂದ!

ಕೆ.ವಿ. ಶಿವಕುಮಾರ್, ಕಾಳೀಹುಂಡಿ

ಅಧಿಕಾರ ಹಸ್ತಾಂತರ ಎಂಬ ಪ್ರಹಸನಕ್ಕೆ ಇತಿಶ್ರೀ ಯಾವಾಗ?

◆ ಹಲ್ಲು ಗಿಂಜಿಗ ಸದಾನಂದ ಆಕ್ಟೋಬರ್ 3, ಸಂಜೆ ಆರರ ತನಕ ಎಂದಿದ್ದಾರಲ್ಲಾ?

ಬಹುಮಾನಿತ ಪ್ರಶ್ನೆ

ಕೆ.ಎಸ್. ರಾಮು, ತೀರ್ಥಹಳ್ಳಿ

ದೇವೇಗೌಡ್ರು ಬಿಜೆಪಿಯವರ ಚೆಡ್ಡಿಯೊಳಗೆ ಇರುವೆ ಬಿಡೋದು ಗ್ಯಾರಂಟಿಯಲ್ವೇ....?

◆ ಕಾಂಗ್ರೆಸ್ ಎಂಬ ಚೇಳನ್ನೇ ಬಿಟ್ಟು ತಮಾಷೆ ನೋಡ್ತಿದ್ದಾರೆ!



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 22

ಸಂಜಯ್ ದತ್‌ನ ಜೈಲುವಾಸಕ್ಕೂ ಗಾಂಧಿಯ ಬಂಧನಕ್ಕೂ ಏನು ವ್ಯತ್ಯಾಸ?

ಪ್ರಶ್ನೆ ನಂ. 20ರ ನಮ್ಮ ಪ್ರಶ್ನೆ: ಬಸವಣ್ಣ ಇದ್ದಿದ್ದರೆ ಲಿಂಗಾಯತರಿಗೆ ಏನೆನ್ನುತ್ತಿದ್ದರು?

ನಿಮ್ಮ ಉತ್ತರ: "ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ಹುಚ್ಚಪ್ಪಗಳಿರಾ" ಎನ್ನುತ್ತಿದ್ದರು.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಗಾನಾ ಸುಮಾ, ಪಟ್ಟಸೋಮನಹಳ್ಳಿ

ನೇಸರ್ಗಿಯವರ ಲಿಪ್‌ಸ್ಟಿಕ್ ಯಾವ ಸಂಸ್ಕೃತಿಯದ್ದು?

ತೆ ಹೊಗಳಿಕೆ ಇ ಕೆ

ಪ್ರಜಾವಾಣಿಯ ವಾಚಕರ ವಾಣಿಯಲ್ಲಿ ಪ್ರಕಟವಾದ ಭಾಗ್ಯ ಹಾಗಲಗಂಚಿಯವರ ಪತ್ರಗಳನ್ನು ನಾನು ಓದಿದ್ದೇನೆ. ಅವರು ಎಲ್ಲಿಯೂ ನಕ್ಸಲಿಸಂ ಅನ್ನು ಸಮರ್ಥಿಸಿಕೊಂಡು ಬರೆದಿಲ್ಲ, ಬದಲಾಗಿ ನಮ್ಮ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆಯಿಂದಾಗಿ ಗಿರಿಜನರ ಬದುಕು ಹೇಗೆ ಅಭದ್ರವಾಗಿದೆ, ವ್ಯವಸ್ಥೆಯ ದೋಷಗಳು ಹಿಂಸೆಗೆ ಹೇಗೆ ಪ್ರೇರಣೆಯಾಗಿವೆ ಎಂಬುದರ ಬಗ್ಗೆ ಬರೆದಿದ್ದಾರಷ್ಟೇ. ಪ್ರಭುತ್ವವನ್ನು ಪ್ರಶ್ನೆ ಮಾಡಿದವರನ್ನೇ ತನ್ನ 'ಗುರಿ'ಯಾಗಿಸಿಕೊಳ್ಳುವುದು ಸರ್ಕಾರದ ಒಂದಂಶದ ಕಾರ್ಯವಾಗಿಬಿಟ್ಟಿದೆ.



ಮುಂದೊಂದು ದಿನ ಭಾಗ್ಯ ಅವರ ಮನೆ ಮೇಲೆ ಪೊಲೀಸರು ದಾಳಿ ಮಾಡಬಹುದೆಂದು ನಾನು, ನನ್ನ ಸ್ನೇಹಿತರು ಅಂದುಕೊಂಡಿದ್ದೆವು. ಅದು ನಿಜವಾಗಿದೆ. ಮಲೆನಾಡಿನ ಆದಿವಾಸಿಗಳಿಗೆ, ಗಿರಿಜನರಿಗೆ ಸರ್ಕಾರ ಮತ್ತು ಪೊಲೀಸರೇ ನಕ್ಸಲೈಟ್ ಆಗಿದ್ದಾರೆ. ಒಂದೆಡೆ ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಹೋರಾಟ, ಮತ್ತೊಂದೆಡೆ ಸರ್ಕಾರದ ಜಮೀನನ್ನೇ ದಲಿತರೆಂದು ಹೇಳಿಕೊಂಡು ಲಪಟಾಯಿಸುವ ಭೂಪರು. ಇದು ಕೊನೆಗೊಳ್ಳುವುದೆಂದು?

-ಓದುಸಿದ್ದೇಗೌಡ ಕೆಬ್ಬೇಹಳ್ಳಿ
ಕನಕಪುರ

"ನಕ್ಸಲೀಯರು" ಯಾರು? ಈ ಪ್ರಶ್ನೆಯನ್ನು ಮೊದಲು ಪೊಲೀಸರಿಗೆ ನಂತರ ಮಾಧ್ಯಮದವರಿಗೆ ಕೇಳಬೇಕಾಗಿದೆ.

ಮನೆಮನೆಗೆ ನುಗ್ಗಿ ದರೋಡೆ, ಹಿಂಸೆ, ಹತ್ಯೆಗಳನ್ನು ಮಾಡುತ್ತ "ನಾವು ನಕ್ಸಲರು" ಎಂದು ಹೊಣೆ ಹೊತ್ತುಕೊಂಡು ತಲೆಮರೆಸಿಕೊಳ್ಳುವ ಘಾತುಕರ ಬಗ್ಗೆ ಯಾವುದೇ ಸಾಕ್ಷ್ಯಾಧಾರವಿಲ್ಲದಿದ್ದರೂ ದರೋಡೆಕೋರರು ಎಂದಾಗಲೀ, ಕೊಲೆಗಾರರು ಎಂದಾಗಲೀ ಕರೆಯದೆ ನೇರವಾಗಿ ನಕ್ಸಲೀಯರು ಎಂಬ ಪದವನ್ನು ಏಕೆ ಬಳಸಲಾಗುತ್ತಿದೆ?

ಇತ್ತೀಚಿನ ದಿನಗಳಲ್ಲಿ ನಕ್ಸಲ್ ಚಟುವಟಿಕೆಗಳು ಎಲ್ಲೆಡೆ ಹಬ್ಬುತ್ತಿರಲು ಕಾರಣ ಸರ್ಕಾರದ ದಮನಕಾರಿ ನೀತಿ, ನಕ್ಸಲರನ್ನು ದಮನಿಸುತ್ತಿದ್ದೇವೆಂದು ಹೇಳಿಕೊಂಡು ಯಾವುದೇ ರೀತಿಯ ಅಪರಾಧ ಎಸಗದಿದ್ದ ಅಮಾಯಕ ಜನರನ್ನು ಗುಂಡಿಕ್ಕಿ ಕೊಲ್ಲುವುದಿದೆಯಲ್ಲ? ಅದು ನಕ್ಸಲರು ಮತ್ತಷ್ಟು ಪ್ರಬಲರಾಗುವುದಕ್ಕೆ, ಅಂದರೆ ಹೆಚ್ಚಿನ ಜನಬೆಂಬಲ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತಿದೆ.

ಆದ್ದರಿಂದ ಸರ್ಕಾರವು ತಾನು ಕೈಗೆತ್ತಿಕೊಂಡಿರುವ ಈ ಜನಹತ್ಯೆಯ ಕೆಲಸವನ್ನು ಬದಿಗಿಟ್ಟು ನಿಜವಾದ ಸ್ಪಷ್ಟವಾದ ಸಮಾಜಘಾತುಕರನ್ನು ಹುಡುಕಿ ಗುಂಡು ಹೊಡೆಯಲಿ.

-ಕಿರುಗುಂದ ರಫೀಕ್,
ಮೂಡಿಗೆರೆ


ಆಗಸ್ಟ್ 8 ರ ಸಂಚಿಕೆಯಲ್ಲಿನ No comments ಅಂಕಣದಲ್ಲಿ ಶ್ರೀಮತಿ ಜಯಲಕ್ಷ್ಮಿಯವರು ನೇಸರ್ಗಿಯಮ್ಮನ ಕುರಿತು ಹೇಳಿರುವ ಮಾತು 100 ಕ್ಕೆ ನೂರು ನಿಜವಾದುದು. ಹಾದಿಬದಿಯ ಗಯ್ಯಾಳಿಗಳ ಮಾತಿನಂತೆ ಲಂಗುಲಗಾಮಿಲ್ಲದೇ ಅಸಂಬದ್ಧವಾಗಿ ಮಾತಾಡುವ ಈ ಪೋಸಮ್ಮ (pose)ನಿಗೆ ಈಗ ನೀಡಲಾಗಿರುವ ಜವಾಬ್ದಾರಿ ನಿಜಕ್ಕೂ ಒಪ್ಪುವಂತಾದ್ದಲ್ಲ. ತನ್ನ ಜವಾಬ್ದಾರಿಗಿಂತಲೂ ಪಕ್ಷದ ಕಳ್ಳಕಾಕರ ಕುರಿತ ಕಾಳಜಿಯೇ ಹೆಚ್ಚಿರುವಂತೆ ಕಾಣಿಸುತ್ತಿದೆ.

ಕೆಲ ಸಮಯದ ಹಿಂದೆ ಶಿಲ್ಪಾ-ರಿಚರ್ಡ್ ಗೇರ್ ಮುತ್ತಿನ ಪ್ರಕರಣ ಚರ್ಚೆಗಾಗಿ ಖಾಸಗಿ ಚಾನೆಲ್ ನಡೆಸಿದ್ದ ಸಂವಾದದಲ್ಲಿ ಈ ಮಹಿಳೆಯನ್ನು ತಂದು ಕೂರಿಸಿದ್ದರು. "ಇದು ನಮ್ಮ ಭಾರತೀಯ ಸಂಸ್ಕೃತಿಯದ್ದಲ್ಲ, ನಮ್ಮ ಸಂಸ್ಕೃತಿಗೆ ಅವಮಾನ" ಅಂತ ಮಾಮೂಲಿ ತನ್ನ ಶೈಲಿಯಲ್ಲೇ ಒದರಾಡಿದ ಈ ನವ ಯುವತಿಯ ಸುಂದರ ತುಟಿಗೆ (ಕವಿ ಕಾಳಿದಾಸ ಈಗಿರುತ್ತಿದ್ದರೆ ಅದನ್ನು ಒಂಟೆ ತುಟಿಗೆ ಹೋಲಿಸುತ್ತಿದ್ದನೇನೋ!) ಬಳಿದ ಎರಡು ಕೆ.ಜಿ. ಪ್ರಮಾಣದ ಲಿಪ್‌ಸ್ಟಿಕ್ ಯಾವ ಸಂಸ್ಕೃತಿಯದ್ದು? ಎಂದು ಪ್ರಶ್ನಿಸಲು ಅಲ್ಲಿ ಯಾರೂ ಇರಲಿಲ್ಲ. ಇಂತಹ ಪೋಸಮ್ಮನ ಅಸಂಬದ್ಧ ಕಾರ್ಯವೈಖರಿ ಪ್ರಶ್ನಿಸಿ ರಾಷ್ಟ್ರೀಯ ಮಹಿಳಾ ಆಯೋಗ ಇತ್ತೀಚೆಗೆ ನೋಟೀಸ್ ಜಾರಿ ಮಾಡಿತ್ತು. ಇದರಿಂದ ಕೆರಳಿದ ಈ ಲಿಪ್‌ಸ್ಟಿಕ್ ಸುಂದರಿ ರಾಷ್ಟ್ರೀಯ ಮಹಿಳಾ ಆಯೋಗದ ನಿರ್ಮಲಾ ವೆಂಕಟೇಶ್‌ರ ವಿರುದ್ಧ ಮಾನ(?)ನಷ್ಟ ಮೊಕದ್ದಮೆ ಹೂಡಲು ಯೋಚಿಸಿದ್ದಾರಂತೆ. ಮಹಿಳೆಯ ಮಾನ ಕಾಪಾಡುವ ಕುರಿತ ಗುರುತರವಾದ ಜವಾಬ್ದಾರಿ ಹೊತ್ತಿದ್ದರೂ ಆ ಕೆಲಸ ಮಾಡಲು ಸಫಲವಾಗದ ಮೇಲೆ ನಷ್ಟವಾಗಲು ಮಾನ ಉಳಿದಿದ್ದರೆ ತಾನೆ, ಏನಂತೀರಿ?!



-ಶಶಿ, ಪುತ್ತೂರು

25.7.07 ಸಂಚಿಕೆಯಲ್ಲಿ ಮಂಗಳೂರು ವರದಿಯಲ್ಲಿ 'ಬಂಟರ ಸಂಗಾತಿ' ಎಂಬ ಮಾಸಿಕದ ಸಂಪಾದಕ ನಳಿನ್‌ಕುಮಾರ್ ರೈ ಈತ ಬಂಟರ ಮಾತೃ ಸಂಘದಲ್ಲಿ ಒಳ-ಜಗಳಕ್ಕೆ ಹಾಗೂ ಸಂಘ ಒಡೆಯುವುದಕ್ಕೆ ಕಾರಣೀಭೂತ ಎನ್ನಲಾಗಿದೆ.




ಆದರೆ ನನಗೆ ಖಚಿತವಾಗಿ ಗೊತ್ತಿರುವ ಮಟ್ಟಿಗೆ ಬಂಟರ ಸಂಘದಲ್ಲಿ 2001 ರಲ್ಲೇ ಒಡಕು ಮೂಡಿತ್ತು. ಆದರೆ ಈ ನಳಿನ್‌ಕುಮಾರ್ ತನ್ನ ಪತ್ರಿಕೆಯನ್ನು ಶುರು ಮಾಡಿದ್ದೇ 2004 ರಲ್ಲಿ. ಮೇಲಾಗಿ ಈ ನಳಿನ್ ಕುಮಾರ್‌ಗೆ ಸಂಘದಲ್ಲಿ ಯಾವುದೇ ಸ್ಥಾನಮಾನವಿಲ್ಲ, ಕಾರ್ಯಕಾರಿ ಸಮಿತಿಯಲ್ಲಿ ಯಾವುದೇ ನೆಲೆ ಇಲ್ಲ. ಹಾಗಿರುವಾಗ ಅವನು ಅದ್ಹೇಗೆ ಘಟಾನುಘಟಿಗಳು ಇರುವ ಸಂಘ ಒಡೆಯಬಲ್ಲ? "ಭೂಮಿಕಾ"ರ ವರದಿಯಲ್ಲಿ ಇಂತಹ ಮುಖ್ಯ ಅಂಶ ತಪ್ಪಿರುವಾಗ ಉಳಿದ ವಿಷಯಗಳು ನಿಜವೆಂದು ನಂಬುವುದು ಕಷ್ಟವಾಗುತ್ತದೆ.

ನಳಿನ್‌ಕುಮಾರನ 'ಬಂಟರ ಸಂಗಾತಿ' ಪತ್ರಿಕೆ 12 ಸಾವಿರ ಪ್ರಸಾರದ ಗಡಿ ದಾಟಿರುವುದು ಕೆಲವರ ಕಣ್ಣು ಕುಕ್ಕಿರಬಹುದು ಎನಿಸುತ್ತಿದೆ. ಪತ್ರಕರ್ತರಲ್ಲೂ ವೃತ್ತಿ-ಮತ್ಸರ ಸಹಜ.

-ಪ್ರವೀಣ್ ಎಸ್. ಶೆಟ್ಟಿ,
ಮಂಗಳೂರು

ನಾನು, ನೀನು, ಎಲ್ಲರೂ ಸೇರಿ ಭೂಮಿಯನ್ನು ನಾಶ ಮಾಡುತ್ತಿದ್ದೇವೆ. ನಾವೆಲ್ಲರೂ ಕೊಲೆಗಡುಕರು -ಯಂಬರ್ ಡೆಲೆಕ್ಟೊ

ಸಿದ್ದಗಂಗಾ ಸ್ವಾಮಿಗಳ ಬಾಯಿಂದ ಲವ್ ಸಂದೇಶ?





ಅತ್ತ ಪ್ರೀತಿ ಮಾಡಲೂ ಪುರುಸೊತ್ತಿಲ್ಲದ, ಇತ್ತ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರವನ್ನೂ ಮುಗಿಸದ ಪ್ರೇಮ್ ದಿನಕ್ಕೊಂದು ಹೊಸ ಹೊಸ ಗಿಮಿಕ್ಕನ್ನು ಮಾತ್ರ ಮಾಡುತ್ತಲೇ ಇದ್ದಾರೆ. ಮೊನ್ನೆ ತಾನೇ ಅಂಬರೀಷ್‌ರವರನ್ನೂ ತನ್ನ ಚಿತ್ರದಲ್ಲಿ ಹಾಕಿಕೊಂಡಿದ್ದೇನೆಂದು ಸುದ್ದಿ ಮಾಡಿದ್ದ ಈ ಗಿಮಿಕ್ ರಾಜ ಈಗ ಅಂತಹದ್ದೇ ಮತ್ತೊಂದು ಸುದ್ದಿ ಮಾಡಿದ್ದಾರೆ.

ಪತ್ರಿಕೆಗೆ ದೊರೆತ ಖಚಿತ ಮಾಹಿತಿಯ ಪ್ರಕಾರ ಪ್ರೇಮ್ ನಾಯಕ ನಟನಾಗಿ ಪ್ರಥಮ ಬಾರಿಗೆ ನಟಿಸುತ್ತಿರುವ ಅವರದೇ ನಿರ್ದೇಶನದ 'ಪ್ರೀಏಭೂಮೇ' ಚಿತ್ರದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಒಂದು ಚಿಕ್ಕ ದೃಶ್ಯದಲ್ಲಿ ಕಾಣಿಸಿಕೊಂಡಿದ್ದಾರಂತೆ. ಮೊನ್ನೆ ಕುಮಾರಸ್ವಾಮಿಯವರ ಸರ್ಕಾರಿ ಮನೆ ಅನುಗ್ರಹದಲ್ಲಿ ಇದರ ಚಿತ್ರೀಕರಣ ನಡೆಯಿತು.



ಅಷ್ಟೂ ಸಾಲದೆಂಬಂತೆ ಅದೇ ದಿನ ಮಧ್ಯಾಹ್ನ ಕರ್ನಾಟಕ ಸರ್ಕಾರದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಸುಭಾಷ್ ಭರಣಿ ಅವರಿರುವ ದೃಶ್ಯವನ್ನೂ ಚಿತ್ರೀಕರಿಸಿದ್ದಾರೆ ಪ್ರೇಮ್. ಅದೂ ಸಾಲದೆಂಬಂತೆ ಇವರಿಬ್ಬರು ಅತಿರಥ ಮಹಾರಥರ ಚಿತ್ರೀಕರಣ ಮುಗಿಸಿದ ಕೂಡಲೇ 'ಪ್ರೀಏಭೂಮೇ' ತಂಡ ನೇರವಾಗಿ ಬಿಡದಿಗೆ ತೆರಳಿದೆ. ಅಲ್ಲಿ ಮಾಜಿ ಭೂಗತ ದೊರೆ ಮುತ್ತಪ್ಪ ರೈ ಅವರ ದೃಶ್ಯಗಳನ್ನೂ ಚಿತ್ರೀಕರಿಸಿಕೊಂಡಿದ್ದಾರೆ.







ಹೀಗೆ ನಿರ್ದೇಶಕ ಪ್ರೇಮ್ ಮುಂಜಾನೆ ಮುಖ್ಯಮಂತ್ರಿ, ಮಧ್ಯಾಹ್ನ ಪೊಲೀಸ್ ಅಧಿಕಾರಿ ಹಾಗೂ ಮುಸ್ಸಂಜೆ ಮಾಜಿ ಭೂಗತ ದೊರೆಯ ಚಿತ್ರೀಕರಣವನ್ನು ಒಂದೇ ದಿನದಲ್ಲಿ ಮಾಡಿ ಮುಗಿಸಿದ್ದಾರೆ. ಅಲ್ಲಿಗೆ ಮುಖ್ಯಮಂತ್ರಿ, ಪೊಲೀಸ್ ಅಧಿಕಾರಿ ಮತ್ತು ಮಾಜಿ ಭೂಗತ ದೊರೆ ಒಟ್ಟಿಗೇ ನಟಿಸಿದ ಮೊದಲ ಚಿತ್ರ ಎಂಬ 'ಹೆಗ್ಗಳಿಕೆ'ಗೆ ಈ ಚಿತ್ರ ಪಾತ್ರವಾಗಿದೆ.

ಅಂದಹಾಗೆ, 'ಪ್ರೀಏಭೂಮೇ' ಚಿತ್ರದಲ್ಲಿ ಈ ತ್ರಿಮೂರ್ತಿಗಳು ತಮ್ಮ ಮುಖಕ್ಕೆ ಬಣ್ಣ ಹಚ್ಚಿ ನಟನೆ, ನೃತ್ಯ ಅಥವಾ ಆಕ್ಷನ್ ದೃಶ್ಯಗಳಲ್ಲಿ ಭಾಗವಹಿಸಿಲ್ಲ, ಬದಲಾಗಿ 'ಪ್ರೀತಿ ಏಕೆ ಭೂಮಿ ಮೇಲಿದೆ' ಎಂಬ ಪ್ರಶ್ನೆಗೆ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಮಂಡಿಸಿದ್ದಾರಂತೆ. ಅಂದರೆ ನಿರ್ದೇಶಕ ಪ್ರೇಮ್ ಪ್ರಕಾರ ಈ ಮೂವರು ಪ್ರೀತಿ-ಪ್ರೇಮ ಕುರಿತಂತೆ ಮಾತನಾಡಬಲ್ಲ ಈ ರಾಜ್ಯ ಕಂಡಿರುವ ಅಪ್ರತಿಮ ರಾಯಭಾರಿಗಳೆಂದಾಯಿತು!

ನಿರ್ದೇಶಕ ಪ್ರೇಮ್ ಈ ತರದ ಗಿಮಿಕ್ಕುಗಳನ್ನು ಮಾಡಿರುವುದು ಇದೇ ಮೊದಲಲ್ಲ, ಆತ ತಮ್ಮ ಚೊಚ್ಚಲ ನಿರ್ದೇಶನದ 'ಕರಿಯ' ಚಿತ್ರದಲ್ಲಿ ಬೆಂಗಳೂರಿನ ಗಲ್ಲಿ ಗಲ್ಲಿಗಳಲ್ಲಿನ ರೌಡಿಗಳ ಮುಖಕ್ಕೆಲ್ಲಾ ಬಣ್ಣ ಹಚ್ಚಿಸಿ ಅವರಿಂದ 'ಅದ್ಭುತವಾದ ನಟನೆಯನ್ನು' ಪಡೆದಿದ್ದರು.


ಈ ಚಿತ್ರದಲ್ಲೂ ಪ್ರೇಮ್ ಗಿಮಿಕ್‌ಗಳ ಸರಮಾಲೆಯನ್ನೇ ಮಾಡುತ್ತಿದ್ದಾರೆ. ಮೊದಲು ಮಲ್ಲಿಕಾ ಶೆರಾವತ್ ಎಂಬ ಐಟಂ ಹುಡುಗಿಯನ್ನು ಕರೆತಂದು ಆಕೆಯಿಂದ ಗಲ್ಲಿಗಲ್ಲಿಗಳಲ್ಲಿ ಕುಣಿಸಿದರು. ಆನಂತರ ತನ್ನ ನೂತನ ಮಡದಿ ರಕ್ಷಿತಾ ಕೂಡ ಇದರಲ್ಲಿ ನಟಿಸುತ್ತಿದ್ದಾಳೆ ಎಂದು ಮತ್ತೊಂದಿಷ್ಟು ಪ್ರಚಾರ ಪಡೆದರು. ಆಮೇಲೆ ಮಂಡ್ಯದ ಗಂಡು ಅಂಬರೀಶ್ ನಟಿಸುತ್ತಿರುವುದು ಪ್ರಪಂಚದ ಎಂಟನೇ ಅದ್ಭುತ ಎಂಬಂತೆ ಬಿಂಬಿಸಿದ್ದರು. ಈಗ ಮುಖ್ಯಮಂತ್ರಿ, ಹಿರಿಯ ಪೊಲೀಸ್ ಅಧಿಕಾರಿ ಮತ್ತು ಮಾಜಿ ಭೂಗತ ದೊರೆ ತನ್ನ ಚಿತ್ರದಲ್ಲಿದ್ದಾರೆಂದು ಮತ್ತೊಂದಿಷ್ಟು ಪ್ರಚಾರ ಪಡೆಯಲು ಹೊರಟಿದ್ದಾರೆ.





ಪ್ರೇಮ್ ಇಲ್ಲಿಗೇ ತನ್ನ ಗಿಮಿಕ್‌ಗಳನ್ನು ನಿಲ್ಲಿಸಬಹುದೇ ಎಂಬ ಪ್ರಶ್ನೆಗೆ ಉತ್ತರ 'ಇಲ್ಲ' ಎಂಬುದೇ ಆಗಿದೆ. ಏಕೆಂದರೆ ಬರುವ ದಿನಗಳಲ್ಲಿ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿ ಮತ್ತು ಹೆಲಿಕಾಪ್ಟರ್ ಖ್ಯಾತಿಯ ಶ್ರೀ ಬಾಲಗಂಗಾಧರ ಸ್ವಾಮಿಗಳಿಂದಲೂ ಪ್ರೀತಿಯ ಬಗ್ಗೆ ಅಭಿಪ್ರಾಯಗಳನ್ನು ಪಡೆಯಲು ಪ್ರೇಮ್ ಈಗ ಸಜ್ಜಾಗಿ ನಿಂತಿದ್ದಾರೆ.


ಈ ಎಲ್ಲ ಗಿಮಿಕ್‌ಗಳ ನಡುವೆ ಚಿತ್ರ ಅದು ಹೇಗೆ ಮೂಡಿಬಂದಿದೆಯೋ ಬಲ್ಲವರಾರು? ಈ ಪ್ರಶ್ನೆಗೆ ಉತ್ತರ ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್‌ರವರ ಮೌನದಲ್ಲಿದೆಯೇ ಎಂದು ಗಾಂಧಿನಗರದವರು ಕುತೂಹಲದಿಂದ ಗಮನಿಸುತ್ತಿರುವುದು ವಿಚಿತ್ರವಾಗಿದೆ.



ಪ್ರಶಸ್ತಿಗಳ ಸುತ್ತ ಮನರಂಜನೆ

ಪ್ರಶಸ್ತಿ ಘೋಷಣೆಯಾದ ಬಳಿಕ ಇದೀಗ ಪತ್ರಿಕಾಹೇಳಿಕೆಗಳ ಸಮರ ಆರಂಭವಾಗಿದೆ. ನಾಗತಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆಯ ಸಮಿತಿಯ ನಿರ್ಣಯವನ್ನು ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪ ಖಂಡ ತುಂಡವಾಗಿ ಖಂಡಿಸಿ ಪ್ರಜಾವಾಣಿ ಪತ್ರಿಕೆಯಲ್ಲಿ ಗಂಭೀರವಾದ ಲೇಖನವೊಂದನ್ನು ಬರೆದಿದ್ದಾರೆ. ಆ ಲೇಖನದ ಬಹುತೇಕ ಅಂಶಗಳು ಒಪ್ಪುವಂತಿವೆ.

ಆದರೆ ಆ ಲೇಖನ ಸಂಪೂರ್ಣವಾಗಿ ತನ್ನ ಕಡೆ ಬೊಟ್ಟು ಮಾಡಿದಂತಿದೆ ಎಂದು ನಾಗತಿಹಳ್ಳಿಯವರಿಗೆ ಅನ್ನಿಸಿರಬೇಕು. ಅದಕ್ಕೆ ಮರುದಿನವೇ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಚುಟುಕು ಪ್ರಶ್ನೆಗಳಿಗೆ ಉತ್ತರಿಸುತ್ತಾ ಬರಗೂರು ಅವರ 'ಜನಪದ'ಕ್ಕೆ ಪ್ರಶಸ್ತಿ ಬಂದಿದ್ದಲ್ಲಿ ಅವರು ಈ ಲೇಖನ ಬರೆಯುತ್ತಿರಲಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.




ಈ ಸಾಹಿತಿ ಕಂ ನಿರ್ದೇಶಕರ ಕೋಳಿ ಜಗಳದಿಂದ ಕರ್ನಾಟಕದ ಓದುಗರಿಗೆ ಪುಕ್ಕಟೆ ಮನರಂಜನೆ ದೊರೆಯುತ್ತಿದೆ. ವಿಶೇಷವೆಂದರೆ ಅವರ ಚಿತ್ರಗಳಲ್ಲೂ ಇಷ್ಟು ಮನರಂಜನೆ ಪ್ರೇಕ್ಷಕರಿಗೆ ದೊರೆಯುತ್ತಿರಲಿಲ್ಲ ಎಂಬುದು ಅನೇಕರ ಬಲವಾದ ನಂಬಿಕೆ. ಹೀಗಾಗಿ ಸಾರ್ವಜನಿಕರ ಮನರಂಜನಾ ದೃಷ್ಟಿಯಿಂದ ಇವರಿಬ್ಬರ ಪತ್ರಿಕಾ ಹೇಳಿಕೆಗಳ ಸಮರ ಇನ್ನಷ್ಟು ಕಾಲ ಮುಂದುವರೆಯಲಿ.

ಡಾ. ಜಯಮಾಲಾರಿಂದ ಚಿತ್ರರಂಗದ ಚಿಕಿತ್ಸೆ?



ಜಯಮಾಲಾ ಅವರು, ಕ್ಷಮಿಸಿ ಡಾ. ಜಯಮಾಲಾ ಅವರು ಒಂದು ಕ್ಲಿಕ್ಕಿ ಸಿನಿಮಾವನ್ನು ನಿರ್ಮಾಣ ಮಾಡಲು ಓಡಾಡುತ್ತಿದ್ದಾರೆ. ಇದರ ವಿಶೇಷತೆಯೇನೆಂದರೆ ಈ ಚಿತ್ರದ ನಿರ್ಮಾಣದ ಜೊತೆಜೊತೆಗೆ ಸ್ವತಃ ಅವರೇ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಅಲ್ಲಿಗೆ ಈ ವರ್ಷ ಡಾಕ್ಟರೇಟ್ ಪದವಿ ಪಡೆದ ಜಯಮಾಲಾ ನಿರ್ದೇಶಕಿ ಹುದ್ದೆಯನ್ನೂ ಅಲಂಕರಿಸಲಿದ್ದಾರೆ ಎಂದಾಯಿತು. ಅವರು ನಿರ್ದೇಶಿಸಲಿರುವ ಈ ಚಿತ್ರದ ಹೆಸರು ಇನ್ನೂ ಗೊತ್ತಾಗಿಲ್ಲವಾದರೂ ಚಿತ್ರಕರ್ತ ಜೋಗಿ ಬರೆದಿರುವ ಸಣ್ಣ ಕತೆ 'ರೋಹಿಣಿ'ಯನ್ನು ಅದು ಆಧರಿಸಿದೆ ಎಂಬುದಂತೂ ನಿಜ.

ಅಂದಹಾಗೆ, ಡಾಕ್ಟರ್ ಆಗಿರುವ ಜಯಮಾಲಾ ಈಗ ನಿರ್ದೇಶಕರಾಗಿ ಚಿತ್ರರಂಗದ ರೋಗಗಳಿಗೆ ಚಿಕಿತ್ಸೆ ನೀಡಲು ಹೊರಟಿದ್ದಾರೆಯೇ? ಏನೇ ಆಗಲಿ, ಈ ಡಾಕ್ಟರಮ್ಮನಿಗೆ ಒಳ್ಳೆಯದಾಗಲಿ.




ಒಂದು ಕಾಲದಲ್ಲಿ ವಿಷ್ಣುವರ್ಧನ್ ಚಿತ್ರ ಬಿಟ್ಟು ಬೇರೆ ಯಾವ ನಾಯಕನಟನ ಚಿತ್ರವನ್ನೂ ಮಾಡುವುದಿಲ್ಲ ಎಂದು ಪತ್ರಿಕಾ ಹೇಳಿಕೆ ನೀಡಿ ತನ್ನ ಸ್ವಾಮಿನಿಷ್ಠೆ ಪ್ರದರ್ಶಿಸಿದ್ದ ನಿರ್ಮಾಪಕ ಸೂರಪ್ಪ ಬಾಬುಗೆ ಈಗ ಜಯನಗರದ ಆ ಮನೆಗೆ ಎಂಟ್ರಿ ಇಲ್ಲ ಎಂಬುದು ಹಳೆಯ ವಿಷಯ.

ವಿಷ್ಣುರವರ 'ಸ್ನೇಹ ಲೋಕ'ದಿಂದ ಹೊರಬಿದ್ದ ನಂತರ ಬಾಬು ಉಪ್ಪಿ ಹಿಂದೆ ಸ್ವಲ್ಪ ಸಮಯ ಅಡ್ಡಾಡಿದ್ದರು. ಕೊನೆಗೆ ಉಪ್ಪಿ ಕೂಡ ಅಸಹಾಯಕತೆಯಿಂದ ಕೈಚೆಲ್ಲಿ ಕುಳಿತಾಗ ಸೂರಪ್ಪ ಬಾಬು ನೇರವಾಗಿ ಹೋಗಿದ್ದು ಸದಾಶಿವನಗರದ ಶಿವರಾಜ್‌ಕುಮಾರ್ ಮನೆಗೆ.

ಶಿವಣ್ಣ ನಟನೆಯ 'ಬಂಧು-ಬಳಗ' ಎಂಬ ಚಿತ್ರ ಸೆಟ್ಟೇರಲಿದೆ ಎಂದು ಪ್ರಚಾರವಾದರೂ ಯಾಕೋ ಏನೋ ಅದು ಆರಂಭವಾಗಲೇ ಇಲ್ಲ. ಇಲ್ಲೂ ಕೂಡ ಸೂರಪ್ಪ ಬಾಬು ನತದೃಷ್ಟರಾದರು ಎಂದುಕೊಳ್ಳುವಷ್ಟರಲ್ಲಿ ಈಗ ಹೊಸ ಸುದ್ದಿ ಬಂದಿದೆ. ಸೂರಪ್ಪ ಬಾಬು ನಿರ್ಮಾಣದ, ನಾಗಣ್ಣ ನಿರ್ದೇಶನದ ಚಿತ್ರದಲ್ಲಿ ಶಿವರಾಜ್ ಕುಮಾರ್ ನಟಿಸುವುದು ಖಚಿತವಾಗಿದೆ.

ಅಂತೂ ವಿಷ್ಣು ಅವರ ಕಾಯಂ ನಿರ್ದೇಶಕರಾದ ನಾಗಣ್ಣ ಅವರನ್ನು ಕರೆದುಕೊಂಡುಬರುವಲ್ಲಿ ಬಾಬು ಯಶಸ್ವಿಯಾಗಿದ್ದಾರೆ. ಶಿವರಾಜ್‌ಕುಮಾರ್ ಮತ್ತು ನಾಗಣ್ಣ ಇದೇ ಮೊದಲ ಬಾರಿಗೆ ಒಟ್ಟಿಗೆ ಒಂದೇ ಚಿತ್ರದಲ್ಲಿ ಕಾರ್ಯನಿರ್ವಹಿಸಲಿದ್ದಾರೆ.



ಶಿವಣ್ಣ-ನಾಗಣ್ಣ ಸಮಾಗಮ



ಉಮಾಶ್ರೀ ಸ್ಥಾನಕ್ಕೆ ಜಯಂತಿ/ತಾರಾ



ಉಮಾಶ್ರೀ ವಿಧಾನಪರಿಷತ್ ಸ್ಥಾನದಿಂದ ಕೆಳಗಿಳಿದ ನಂತರ ಚಿತ್ರರಂಗದವರಲ್ಲಿ ಆ ಸ್ಥಾನಕ್ಕಾಗಿ ಈಗ ತೀವ್ರವಾದ ಪೈಪೋಟಿ ಆರಂಭವಾಗಿದೆ. ಜನತಾದಳ ಪಕ್ಷದವರೇ ಆದ ಜಯಂತಿಯವರ ಹೆಸರು ಈ ನಿಟ್ಟಿನಲ್ಲಿ ವಿಧಾನಸೌಧದಲ್ಲಿ ಹೆಚ್ಚು ಹೆಚ್ಚು ಕೇಳಿಬರುತ್ತಿದೆ. ಇವರಿಗೆ ದೇವೇಗೌಡರ ಆಶೀರ್ವಾದವೂ ಇದೆಯಂತೆ. ಆದರೆ ಇವರಿಗೆ ತೀವ್ರ ಪೈಪೋಟಿ ನೀಡುತ್ತಿರುವವರು ತಾರಾ. ತಾರಾ ಬೆಂಬಲಕ್ಕೆ ಯಾರಿದ್ದಾರೆ ಎಂಬುದು ಮಾತ್ರ ಇನ್ನೂ ಗೊತ್ತಿಲ್ಲ, ಜಯಂತಿ ಅಥವಾ ತಾರಾ ಇವರಿಬ್ಬರಲ್ಲಿ ಒಬ್ಬರು ವಿಧಾನಸೌಧದ ಮೆಟ್ಟಿಲೇರುವುದು ಬಹುತೇಕ ಗ್ಯಾರಂಟಿ. ಇವರಿಬ್ಬರ ಜೊತೆಜೊತೆಗೆ ಸಾರಾ ಗೋವಿಂದು, ಚನ್ನೇಗೌಡ, ದ್ವಾರಕೀಶ್, ಎಸ್.ಎ. ಗೋವಿಂದರಾಜು ಹಾಗೂ ಇನ್ನೂ ಅರ್ಧ ಡಜನ್ ಹೆಸರುಗಳು ಕೇಳಿಬರುತ್ತಲೇ ಇದೆ.




ಸಾಯಿಪ್ರಕಾಶರ ಪೆದ್ದುತನ



ಮೊನ್ನೆ ಮೊನ್ನೆ 'ಮೀರಾ ಮಾಧವ ರಾಘವ' ಚಿತ್ರದ ನಿರ್ದೇಶಕ ಟಿ.ಎನ್. ಸೀತಾರಾಂ ಕನ್ನಡ ದಿನಪತ್ರಿಕೆಯಲ್ಲಿ ಒಂದು ಜಾಹಿರಾತು ನೀಡಿದ್ದರು. ಅದರಲ್ಲಿ ಸೆನ್ಸಾರ್ ಸರ್ಟಿಫಿಕೇಟ್ ದೊರೆಯುವ ಮೊದಲೇ ಕೆಲವು ಆತ್ಮೀಯರಿಗೆ ಚಿತ್ರ ತೋರಿಸಿದ್ದಕ್ಕಾಗಿ ಅವರು ಕ್ಷಮೆ ಯಾಚಿಸಿದ್ದರು.

ಈ ಘಟನೆ ನಡೆದ ಎರಡೇ ವಾರಕ್ಕೆ ರಿಮೇಕ್ ಸರದಾರ ಸಾಯಿಪ್ರಕಾಶ್ ಅದೇ ತಪ್ಪನ್ನು ಮಾಡಿದ್ದಾರೆ. ಅವರ ನಿರ್ದೇಶನದ 'ಹೆತ್ತರೆ ಹೆಣ್ಣನ್ನೇ ಹೆರಬೇಕು' ಎಂಬ ಚಿತ್ರಕ್ಕೆ ಇನ್ನೂ ಸೆನ್ಸಾರ್ ಮಂಡಳಿ ಸರ್ಟಿಫಿಕೇಟ್ ನೀಡಿಲ್ಲ. ಅದಕ್ಕೂ ಮೊದಲೇ ಮೊನ್ನೆ ಅವರು ಮಲ್ಲೇಶ್ವರಂನ ರಿಜಾಯ್ಸ್‌ನಲ್ಲಿ ಈ ಚಿತ್ರದ ಪೂರ್ವಭಾವಿ ಪ್ರದರ್ಶನವನ್ನು ಏರ್ಪಡಿಸಿದ್ದರು. ಆ ಪ್ರದರ್ಶನಕ್ಕೆ ಸಮಾಜದ ಬೇರೆ ಬೇರೆ ಕ್ಷೇತ್ರದ ಹಲವಾರು ಗಣ್ಯ ಮಹಿಳೆಯರನ್ನು ಆಹ್ವಾನಿಸಿದ್ದರಂತೆ. ಆದರೆ ಅಂದು ನರ್ಸ್ ಜಯಲಕ್ಷ್ಮಿಯನ್ನು ಸಾಯಿಪ್ರಕಾಶ್ ಕರೆದಿದ್ದರೋ ಇಲ್ಲವೋ ಗೊತ್ತಿಲ್ಲ! ಈ ಚಿತ್ರ ಮುಗಿದನಂತರ ಅದನ್ನು ವೀಕ್ಷಿಸಿದ ಗಣ್ಯಾತಿಗಣ್ಯ ಹೆಂಗಸರೆಲ್ಲಾ ಟಿ.ವಿ. ಕ್ಯಾಮೆರಾ ಮುಂದೆ ಕ್ಯೂನಲ್ಲಿ ನಿಂತು ತಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ. ಈಗ ಅದೆಲ್ಲವೂ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿದೆ.

ಸೀತಾರಾಮ್‌ರವರೇನೋ ಕೇವಲ ಎರಡು ಚಿತ್ರಗಳ ನಿರ್ದೇಶಕ. ಆದರೆ ಈಗಾಗಲೇ ಐವತ್ತು ಚಿತ್ರಗಳಿಗೆ ರೀಲು ಸುತ್ತಿರುವ ಸಾಯಿಪ್ರಕಾಶ್‌ಗೆ ಚಿತ್ರದ ಸೆನ್ಸಾರ್ ಸರ್ಟಿಫಿಕೇಟ್ ದೊರೆಯುವ ಮೊದಲೇ ಇವೆಲ್ಲ ಮಾಡಬಾರದೆಂಬ ವಿಷಯ ಗೊತ್ತಿಲ್ಲದಿರುವುದೇ ಆಶ್ಚರ್ಯಕರವಾಗಿದೆ.



ಗುರುವಿನ ಹೆಜ್ಜೆಯಲ್ಲಿ ರಮೇಶ್ ಅರವಿಂದ್

ಬೆಳ್ಳಿತೆರೆಯ ನಿರ್ದೇಶಕ ಕಂ ನಾಯಕನಟ ರಮೇಶ್ ಈಗ ಕಿರುತೆರೆಗೂ ಜಂಪ್ ಮಾಡಲು ನಿರ್ಧರಿಸಿದ್ದಾರೆ. ಕುಮಾರಸ್ವಾಮಿ ಮಾಲೀಕತ್ವದ ಕಸ್ತೂರಿ ಚಾನೆಲ್‌ಗೆ ರಮೇಶ್ ಅರವಿಂದ್ ಒಂದು ಥ್ರಿಲ್ಲರ್ ಧಾರಾವಾಹಿಯನ್ನು ನಿರ್ದೇಶಿಸಲಿದ್ದಾರೆ ಎಂಬುದು ಗಾಂಧಿನಗರದಲ್ಲಿ ಕೇಳಿಬರುತ್ತಿರುವ ಲೇಟೆಸ್ಟ್ ಸುದ್ದಿ.


ಈ ಥ್ರಿಲ್ಲರ್ ಮೆಗಾ ಧಾರಾವಾಹಿಯ ಕ್ರಿಯೇಟಿವ್ ಹೆಡ್ ಆಗಿ ರಮೇಶ್ ಕಾರ್ಯನಿರ್ವಹಿಸುತ್ತಾರೆ. ಈ ಧಾರಾವಾಹಿಯ ಮುಖ್ಯ ಪಾತ್ರದಲ್ಲಿ ಅನಂತ್‌ನಾಗ್ ಕಾಣಿಸಿಕೊಳ್ಳಲಿದ್ದಾರಂತೆ.

ಅನಂತ್‌ನಾಗ್ ನಾಯಕ ನಟನಾಗಿ ನೇಪಥ್ಯಕ್ಕೆ ಸರಿಯುತ್ತಿದ್ದಾಗ ಅವರ ಸ್ಥಾನವನ್ನು ರಮೇಶ್ ಸಮರ್ಥವಾಗಿ ತುಂಬಿದ್ದರು. ಇಬ್ಬರು ನಟರೂ ಪ್ರತಿಭಾವಂತರು. ಮುಖ್ಯವಾಗಿ ಮಧ್ಯಮವರ್ಗದ ಜನರ ಡಾರ್ಲಿಂಗ್‌ಗಳು. ಈಗ ಇವರಿಬ್ಬರ ಸಮಾಗಮದ ಧಾರಾವಾಹಿ ಮತ್ತೆ ಮಧ್ಯಮವರ್ಗದ ಜನರಿಗೆ ಖುಷಿ ನೀಡಬಹುದು.

ಅಂದಹಾಗೆ ಇವರ ಗುರು ಕೆ. ಬಾಲಚಂದರ್ ಕೂಡಾ ಬೆಳ್ಳಿತೆರೆ ಮತ್ತು ಕಿರುತೆರೆಯಲ್ಲಿ ಏಕಪ್ರಕಾರವಾಗಿ ಸಾಗುತ್ತಿರುವ ವ್ಯಕ್ತಿ. ಈಗ ಗುರುವಿನ ದಾರಿಯಲ್ಲಿ ಶಿಷ್ಯ ಸಾಗಲು ಮೊದಲ ಹೆಜ್ಜೆ ಇಟ್ಟಿದ್ದಾರೆ. ರಮೇಶ್ ವೃತ್ತಿ ಬದುಕು ಆರಂಭವಾಗಿದ್ದೇ ದೂರದರ್ಶನದ ಕಾರ್ಯಕ್ರಮದಿಂದ. ಈಗ ಮತ್ತೆ ಟಿ.ವಿ.ಗೆ ಬರುವ ಮುಖಾಂತರ ಮರಳಿ ಮನೆಗೆ ಬಂದಂತಾಗಿದೆ.

'ಗಜ' ಚಿತ್ರದಲ್ಲಿ ವಿಕ್ತಾ ಕೋಸ್ಲಾ

ಪೂಜಾರಿ ಕೊಡದಿದ್ದರೇನು ಪ್ರಿಯತಮ ಕೊಡುತ್ತಾನೆ



ರಾಧಿಕಾ ಇತ್ತೀಚೆಗೆ ಸಿನಿಮಾದಲ್ಲಿ ಸುದ್ದಿ ಮಾಡಿದ್ದೇ ಕಡಿಮೆ. ಆಕೆಯ ಕಾರ್ಯಸ್ಥಾನ ಏನಿದ್ದರೂ ಈಗ ವಿಧಾನಸೌಧದ ಲಾಂಜುಗಳಲ್ಲಿ. ಆದರೆ ಮೊನ್ನೆ ಮತ್ತೊಮ್ಮೆ ರಾಧಿಕಾ ಸುದ್ದಿ ಮಾಡಿದ್ದು ಸಿನಿಮಾದಲ್ಲೂ ಅಲ್ಲ, ವಿಧಾನಸೌಧದಲ್ಲೂ ಅಲ್ಲ, ಬದಲಾಗಿ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ.

ಆಕೆ ಭಕ್ತಿಯಿಂದ ಚಾಮುಂಡೇಶ್ವರಿಗೆ ಚಿನ್ನದ ಸರ ಕಾಣಿಕೆ ಹಾಕಿದಳಂತೆ. ಅದಕ್ಕೆ ಮ್ಯಾನೇಜರ್‌ರ ಬಳಿ ರಸೀದಿ ಕೇಳಿದ್ದಾಳೆ. ದೇವರಿಗೆ ಕಾಣಿಕೆ ಹಾಕಿದ್ದಕ್ಕೆ ರಸೀದಿ ಕೊಡುವ ಪ್ರತೀತಿ ಇಲ್ಲ ಎಂದು ಆತ ಹೇಳಿದ್ದಾನೆ. ಆತನ ಉತ್ತರದಿಂದ ರೇಗಿದ ರಾಧಿಕಾ ಸೀದಾ ಬೆಂಗಳೂರಿಗೆ ಬಂದು ವಿಧಾನಸೌಧದಲ್ಲಿರುವ ತನ್ನ ಪ್ರಿಯತಮನಿಗೆ ದೂರಿದ್ದಾಳೆ.

ಆ ಪುಟಗೋಸಿ ಮ್ಯಾನೇಜರ್ ರಾಧಿಕಾಳ ಇಂಗಿತವನ್ನು ಈಡೇರಿಸದಿದ್ದರೇನಂತೆ, ಆಕೆಯ ಪಾಲಿಗೆ ದೊರೆಯೇ ಆದ ಮುಖ್ಯಮಂತ್ರಿ ಆಕೆಯ ಮಾತಿಗೆ ತಲೆದೂಗಿದ್ದಾರೆ. ತಕ್ಷಣವೇ ಆ ದೇವಸ್ಥಾನದ ಮ್ಯಾನೇಜರ್ ಸಸ್ಪೆಂಡ್ ಆದ ಆದೇಶ ವಿಧಾನಸೌಧದಿಂದ ಹೊರಬಿದ್ದಿದೆ.

ಇಲ್ಲಿ ಪ್ರಜಾತಂತ್ರಕ್ಕೂ, ದೇವಸ್ಥಾನದ ಮ್ಯಾನೇಜರ್‌ಗೂ, ಚಿನ್ನದ ಹಾರಕ್ಕೂ, ಕುಪಿತಗೊಂಡಿದ್ದ ನಟಿಯೊಬ್ಬಳ ನಖರಾಗಳಿಗೂ ಏನು ಸಂಬಂಧ ಎಂಬ ಪ್ರಶ್ನೆಯನ್ನು ಮಾತ್ರ ಕೇಳಬೇಡಿ. ಹಮಾರ ಭಾರತ್ ಮಹಾನ್‌ನಲ್ಲಿ ಇಂತಹದ್ದೆಲ್ಲ ನಡೆಯುತ್ತಿರುತ್ತದೆ. ಯಾಕೆಂದರೆ ಇಲ್ಲಿ ಪ್ರಜಾಪ್ರಭುತ್ವದ ನೆಪದಲ್ಲಿ ಊಳಿಗಮಾನ್ಯ ವ್ಯವಸ್ಥೆಯೇ ಅಧಿಕಾರದಲ್ಲಿದೆ.

ಅದೆಲ್ಲ ಇರಲಿ, ಈಗ ಚಿತ್ರರಂಗದಲ್ಲಿ ಲೆಕ್ಕಕ್ಕಿಲ್ಲದ ಆದರೆ ರಾಜಕೀಯ ರಂಗದಲ್ಲಿ ಕೋಟಿಗಳ ಲೆಕ್ಕಕ್ಕಿರುವ ರಾಧಿಕಾ ಎಂಬ ನಟಿ ಇನ್ನು ಮುಂದೆ ಯಾವುದೇ ದೇವಸ್ಥಾನಕ್ಕೆ ಹೋಗುತ್ತಾಳೆಂದರೆ ಪೂಜಾರಿಗಳು ಗಢಗಢನೆ ನಡುಗುವ ಸಾಧ್ಯತೆಯು ಇದೆ. ಈಕೆ ದೇವತೆಯೋ? ಭಕ್ತೆಯೋ? ಸಿನಿಮಾ ನಟಿಯೋ? ಅಥವಾ ಪೂಜಾರಿಗಳ ಪಾಲಿನ ಮಾರಿಯೋ?? ಮುಂಬರುವ ದಿನಗಳೇ ಹೇಳಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4